f prajavani.net prajavani
ಸೋಮವಾರ, ಜೂನ್ 8, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 158 | ಪುಟ 12
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಗ್ರೇಸ್ ಗುಡ್‌ಬೈ
ಭಾರತ ಮಹಿಳಾ ಫುಟ್‌ಬಾಲ್ ತಂಡದ ಆಟಗಾರ್ತಿ ಗ್ರೇಸ್ ಡಾಂಗ್‌ಮೆಯಿ ಅವರು ಅಂತರರಾಷ್ಟ್ರೀಯ ಫುಟ್‌ಬಾಲ್‌ಗೆ ನಿವೃತ್ತಿ ಘೋಷಿಸಿದರು. ಅವರು ರಾಷ್ಟ್ರೀಯ ತಂಡದ ಪರ 95 ಪಂದ್ಯಗಳನ್ನು ಆಡಿದ್ದಾರೆ



ತವರಲ್ಲಿ ಮುಖ್ಯಮಂತ್ರಿಗೆ ಅದ್ದೂರಿ ಸ್ವಾಗತ 6
‘ಇಂಡಿಯಾ’ ಸಭೆಯಲ್ಲಿ 23 ಪಕ್ಷಗಳು ಭಾಗಿ 11

ಚಾಕು ಇರಿದು ಅಪ್ಪ, ಅಕ್ಕನ ಕೊಲೆ

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಹೊಸ ಅಯೋಧ್ಯ ಗ್ರಾಮದ ಬಾಲಕನೊಬ್ಬ ತನ್ನ ಪೋಷಕರು ಹಾಗೂ ಸಹೋದರಿಗೆ ಚಾಕು ಇರಿದು, ತಾನೂ ಕುತ್ತಿಗೆಯನ್ನೂ ಕೊಯ್ದುಕೊಂಡಿದ್ದಾನೆ.

ಘಟನೆಯಲ್ಲಿ ತಂದೆ ವೆಂಕಟನಾಯ್ಡು (45) ಹಾಗೂ ಅಕ್ಕ ಪ್ರಗತಿ (19) ಮೃತ ಪಟ್ಟಿದ್ದಾರೆ. ತಾಯಿ ಸೌಜನ್ಯ ಹಾಗೂ ಬಾಲಕ ತೀವ್ರವಾಗಿ ಗಾಯಗೊಂಡಿದ್ದಾರೆ. ಇವರಿಬ್ಬರಿಗೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ.

‘ಪಿಯುಸಿ ದ್ವಿತೀಯ ವರ್ಷದ ವಿದ್ಯಾರ್ಥಿಯಾದ ಬಾಲಕ ಮೊಬೈಲ್ ಗೀಳಿಗೆ ಬಿದ್ದಿದ್ದ. ಪೋಷಕರು ಬುದ್ಧಿವಾದ ಹೇಳಿದ್ದಕ್ಕೆ ಈ ಕೃತ್ಯ ಎಸಗಿದ್ದಾನೆ ಎನ್ನುವುದು ಪ್ರಾಥಮಿಕ ಮಾಹಿತಿಯಿಂದ ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆಗಿದ್ದೇನು: ಹೊಸ ಅಯೋಧ್ಯ ಗ್ರಾಮದ ವೆಂಕಟನಾಯ್ಡು ಖಾಸಗಿ ಶಾಲೆಯೊಂದರಲ್ಲಿ ಅಡುಗೆಯವರಾಗಿ ಕೆಲಸ ಮಾಡುತ್ತಿದ್ದರು. ಶನಿವಾರ ರಾತ್ರಿ ವೆಂಕಟನಾಯ್ಡು, ಪತ್ನಿ, ಇಬ್ಬರು ಮಕ್ಕಳು ಮತ್ತು ಅವರ ತಂದೆ ತಾಯಿ ಜೊತೆ ಊಟ ಮಾಡಿದ್ದರು. ಬಳಿಕ ವೆಂಕಟನಾಯ್ಡು ಕುಟುಂಬದ ನಾಲ್ವರು ಒಂದು ಕೊಠಡಿಯಲ್ಲಿ ಹಾಗೂ ಅವರ ಪೋಷಕರು ಇನ್ನೊಂದು ಕೊಠಡಿಯಲ್ಲಿ ಮಲಗಿದ್ದರು.

7

ಸಿ.ಎಂಗೆ ಪಾರಂಪರಿಕ ಕಟ್ಟಡ

ಕುಮಾರ ಕೃಪ ಅತಿಥಿಗೃಹದ ಮುಖ್ಯ ಕಟ್ಟಡ, ಅನೆಕ್ಸ್ ಕಟ್ಟಡದ ನವೀಕರಣ

• ರಾಜೇಶ್ ರೈ ಚಟ್ಲ

ಬೆಂಗಳೂರು: ಪಾರಂಪರಿಕ ಕಟ್ಟಡಗಳ ಪಟ್ಟಿಯಲ್ಲಿರುವ ‘ಕುಮಾರ ಕೃಪ’ ಅತಿಥಿಗೃಹದ ಮುಖ್ಯ ಕಟ್ಟಡ ಮತ್ತು ಅದಕ್ಕೆ ಹೊಂದಿಕೊಂಡಿರುವ (ಅನೆಕ್ಸ್) ಕಟ್ಟಡವನ್ನು ತಮ್ಮ ‘ಗೃಹ ಕಚೇರಿ’ಯಾಗಿ ಪರಿವರ್ತಿಸಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಿರ್ಧರಿಸಿದ್ದಾರೆ. ಅದಕ್ಕೆ ಪೂರಕವಾಗಿ, ಈ ಕಟ್ಟಡಗಳಲ್ಲಿ ಲೋಕೋಪಯೋಗಿ ಇಲಾಖೆ ಸದ್ದಿಲ್ಲದೆ ನವೀಕರಣ ಕಾಮಗಾರಿ ಆರಂಭಿಸಿದೆ.

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆಯಾದ ಬೆನ್ನಲ್ಲೆ, ಕುಮಾರ ಕೃಪ ರಸ್ತೆಯಲ್ಲಿರುವ ಈ ಎರಡೂ ಕಟ್ಟಡಗಳನ್ನು ಪರಿಶೀಲಿಸಿದ್ದ ಡಿ.ಕೆ.ಶಿವಕುಮಾರ್, ಕಟ್ಟಡಗಳಲ್ಲಿ ನವೀಕರಣ ಕೆಲಸಗಳನ್ನು ತುರ್ತಾಗಿ ಕೈಗೊಳ್ಳುವಂತೆ ಲೋಕೋಪಯೋಗಿ ಇಲಾಖೆಗೆ ಸೂಚನೆ ನೀಡಿದ್ದರು.

ಈ ಕಟ್ಟಡಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಸುಪರ್ದಿಯಲ್ಲಿವೆ. ಹೀಗಾಗಿ, ಇಲ್ಲಿ ಕಾರ್ಯನಿರ್ವಹಿಸು-ತ್ತಿರುವ ಕಚೇರಿಗಳನ್ನು ಪರ್ಯಾಯ ಕಟ್ಟಡಕ್ಕೆ ಸ್ಥಳಾಂತರಿಸಲು ಮತ್ತು ನವೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಕಟ್ಟಡಗಳನ್ನು ತಮ್ಮ ವಶಕ್ಕೆ ನೀಡಬೇಕು ಎಂದು ಡಿಪಿಎಆರ್‌ಗೆ ಲೋಕೋಪಯೋಗಿ ಇಲಾಖೆ ಜೂನ್ 4ರಂದು ಟಿಪ್ಪಣಿ ನೀಡಿತ್ತು. ತಕ್ಷಣವೇ ಡಿಪಿಎಆರ್ ಅನುಮತಿ ನೀಡಿದೆ.

ಕುಮಾರ ಕೃಪ ಅತಿಥಿಗೃಹದ ಮುಖ್ಯ ಕಲ್ಲಿನ ಕಟ್ಟಡ 1856ರಲ್ಲಿ, ಅದಕ್ಕೆ ಹೊಂದಿಕೊಂಡಿರುವ ಕಟ್ಟಡವು 1960ರಲ್ಲಿ ನಿರ್ಮಾಣವಾಗಿವೆ. ಪ್ರಸ್ತುತ ಮುಖ್ಯ ಕಟ್ಟಡದಲ್ಲಿ 12 ಕೊಠಡಿಗಳಿವೆ.

6

‘ಗೃಹ ಕಚೇರಿ’ಗಾಗಿ ಏನೆಲ್ಲ ಸ್ಥಳಾಂತರ?

- ಮುಖ್ಯ ಕಟ್ಟಡದಲ್ಲಿರುವ ಉಪ ಸಭಾಧ್ಯಕ್ಷರ ವಾಸ್ತವ್ಯ ಕೊಠಡಿ
- ಕೋವಿಡ್– 19ರ ವಿಚಾರಣಾ ಆಯೋಗಕ್ಕೆ ಹಂಚಿಕೆಯಾಗಿರುವ 3 ಕೊಠಡಿ
- ರಾಜ್ಯ ಆತಿಥ್ಯ ಸಂಸ್ಥೆ ಕಚೇರಿ ಮತ್ತು ಸಾರಿಗೆ ಕಚೇರಿಗಳು



ಮುಖ್ಯ ಕಟ್ಟಡದ ಒಳಗೆ ನವೀಕರಣ ಕಾಮಗಾರಿ ಚಿತ್ರ: ಎಂ.ಎಸ್.ಮಂಜುನಾಥ್

ರಾಜ್ಯ ಆತಿಥ್ಯ ಸಂಸ್ಥೆಯ ಸಿಬ್ಬಂದಿ ಅತಂತ್ರ

ಕುಮಾರ ಕೃಪ ಅತಿಥಿಗೃಹದ ಮುಖ್ಯ ಕಟ್ಟಡ, ಅನೆಕ್ಸ್ ಕಟ್ಟಡಗಳ ಹಿಂಭಾಗದಲ್ಲಿ ರಾಜ್ಯ ಆತಿಥ್ಯ (ಶಿಷ್ಟಾಚಾರ) ಸಂಸ್ಥೆಯ ಆಡಳಿತ ಕಚೇರಿಗಳಿವೆ. ಈ ಕಚೇರಿಗಳಲ್ಲಿ ಸುಮಾರು 60 ಮಂದಿ ಶಾಶ್ವತ ಸಿಬ್ಬಂದಿ ಇದ್ದಾರೆ. ಪರ್ಯಾಯ ಜಾಗ ತೋರಿಸಿಲ್ಲದ ಕಾರಣ ಈ ಎಲ್ಲ ಸಿಬ್ಬಂದಿ ಅತಂತ್ರರಾಗಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಸಿಬ್ಬಂದಿಯೊಬ್ಬರು, ‘ಇಲಾಖೆಯ ಆಡಳಿತ ಕಚೇರಿಯನ್ನು ಸ್ಥಳಾಂತರಿಸಲಾಗುತ್ತಿದೆ. ಆದರೆ, ಪರ್ಯಾಯ ಜಾಗ ತೋರಿಸಿಲ್ಲ. ಅತಿಥಿಗೃಹದ ಹೊಸ ಕಟ್ಟಡದ ನೆಲಮಾಳಿಗೆಗೆ (ಸೆಲ್ಲರ್) ಸ್ಥಳಾಂತರಗೊಳ್ಳಲು ಮೌಖಿಕವಾಗಿ ಸೂಚಿಸಲಾಗಿದೆ. ಆದರೆ, ನಾವು ಹೊಸ ಕಟ್ಟಡದಲ್ಲಿ ನೆಲ ಮಹಡಿಯಲ್ಲಿಯೇ ಸ್ಥಳಾವಕಾಶ ಕಲ್ಪಿಸಲು ಕೋರಿದ್ದೇವೆ’ ಎಂದರು.

6

ಬೈರೂತ್ ಮೇಲೆ ಇಸ್ರೇಲ್ ದಾಳಿ

ಬೈರೂತ್ (ಎಪಿ): ದಕ್ಷಿಣ ಬೈರೂತ್‌ನ ಉಪನಗರಗಳ ಮೇಲೆ ಇಸ್ರೇಲ್ ಭಾನುವಾರ ವೈಮಾನಿಕ ದಾಳಿ ನಡೆಸಿದೆ. ‘ಹಿಜ್ಬುಲ್ಲಾ ದಾಳಿ ನಡೆಸಿದ್ದಕ್ಕೆ ಪ್ರತೀಕಾರವಾಗಿ ಈ ದಾಳಿ ನಡೆಸಲಾಗಿದೆ’ ಎಂದು ಬೆಂಜಮಿನ್ ನೆತನ್ಯಾಹು ತಿಳಿಸಿದ್ದಾರೆ.

ವಿವರ 10

ಚಿನಕುರುಳಿ ಪ್ರಕಾಶ್ ಶೆಟ್ಟಿ



₹2,400 ಕೋಟಿ ಸಂಗ್ರಹಿಸಿ ವಂಚನೆ

ಶಿವಂ ಅಸೋಸಿಯೇಟ್ಸ್‌ನ ವ್ಯವಹಾರ ವರದಿ ಬಿಚ್ಚಿಟ್ಟ ಸಿಐಡಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಶಿವಂ ಅಸೋಸಿಯೇಟ್ಸ್ ಮಾಲೀಕ ಶಿವಾನಂದ ನೀಲಣ್ಣವರ ಅವರು, ಅಧಿಕ ಬಡ್ಡಿ ಆಮಿಷವೊಡ್ಡಿ 40,700 ಜನರಿಂದ ₹2,400 ಕೋಟಿ ಸಂಗ್ರಹಿಸಿ ವಂಚಿಸಿರುವುದು ತನಿಖೆಯಿಂದ ಸಾಬೀತಾಗಿದೆ. ಆದರೆ, ಇಂದಿಗೂ ಜನರು ಕಂಪನಿಯಲ್ಲಿ ಹಣ ಹೂಡಿಕೆ ಮಾಡುತ್ತಿದ್ದಾರೆ’ ಎಂದು ಸಿಐಡಿ ಡಿಐಜಿ ಡಾ.ಭೀಮಾಶಂಕರ ಗುಳೇದ ಹೇಳಿದರು.

‘ಅಕ್ರಮವಾಗಿ ಠೇವಣಿ ಸಂಗ್ರಹಿಸಿದ್ದಾರೆ ಎಂಬ ಮಾಹಿತಿ ಮೇರೆಗೆ 20 ದಿನಗಳ ಹಿಂದೆ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆಯಿಂದ ಶಿವಂ ಅಸೋಸಿಯೇಟ್ಸ್ ಮೇಲೆ ದಾಳಿ ನಡೆಸಲಾಗಿತ್ತು. ನಂತರ ಪ್ರಕರಣವನ್ನು ಸಿಐಡಿಗೆ ಹಸ್ತಾಂತರಿಸಲಾಗಿದೆ. ಆದರೆ, ಈಗಲೂ ಕಂಪನಿಗೆ ಜನ ಹಣ ಹಾಕುತ್ತಿದ್ದು, ಬೇರೆಯವರಿಗೂ ಹೂಡಿಕೆ ಮಾಡುವಂತೆ ಪ್ರೇರೇಪಿಸುತ್ತಿದ್ದಾರೆ. ಯಾರೂ ಕಂಪನಿಗೆ ಹಣ ಹಾಕಬಾರದು’ ಎಂದು ಭಾನುವಾರ ಕೋರಿದರು.

‘ನೀಲಣ್ಣವರ ತಮಗೆ ನಿಯಮಿತವಾಗಿ ಹಣ ತಲುಪಿಸುತ್ತಿದ್ದರು. ಅವರ ವಿರುದ್ಧ ಜಿಲ್ಲಾಡಳಿತವೇ ಪಿತೂರಿ ಮಾಡಿದೆ ಎಂದು ಕೆಲವರು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಹಾಕಿದ್ದು, ಕಪೋಲಕಲ್ಪಿತ ಚರ್ಚೆ ನಡೆಯುತ್ತಿದೆ. ಈ ರೀತಿ ಚರ್ಚೆ ನಡೆಸುತ್ತಿರುವವರನ್ನೂ ವಿಚಾರಣೆಗೆ ಕರೆಯಲಾಗುವುದು’ ಎಂದು ತಿಳಿಸಿದರು.

7

> **ನಟಿ ಸನ್ನಿ ಲಿಯೋನ್ ಸೇರಿ ಹಲವು ಸಿನಿ ತಾರೆಯರಿಗೂ ಕಂಪನಿಯಿಂದ ಹಣ ಹೋಗಿದೆ. ಅವರಿಗೂ ನೋಟಿಸ್ ನೀಡಿ ವಿಚಾರಣೆಗೆ ಕರೆಸಲಾಗುವುದು**
> **ಡಾ.ಭೀಮಾಶಂಕರ ಗುಳೇದ,**
> ಸಿಐಡಿ ಡಿಐಜಿ

ರಾಜ್ಯಸಭೆ: ಬಿಜೆಪಿ ಅಭ್ಯರ್ಥಿ ನಾಗರಾಜ

ಬೆಂಗಳೂರು: ಕರ್ನಾಟಕ ವಿಧಾನಸಭೆಯಿಂದ ರಾಜ್ಯಸಭಾ ಚುನಾವಣೆಗೆ ಬಿಜೆಪಿ ಭಾನುವಾರ ರಾತ್ರಿ ತನ್ನ ಅಭ್ಯರ್ಥಿಯನ್ನು ಘೋಷಿಸಿದ್ದು, ಪ್ರೊ.ಎಂ.ನಾಗರಾಜ ಹೆಸರನ್ನು ಅಂತಿಮಗೊಳಿಸಿದೆ. ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡ ಅವರನ್ನು ಕಣಕ್ಕಿಳಿಸುವ ಬಗ್ಗೆ ಚರ್ಚೆ ನಡೆದಿತ್ತು.

ಲಿಂಗರಾಜ ಪಾಟೀಲ ಮತ್ತು ರಘು ಕೌಟಿಲ್ಯ ಅವರನ್ನು ವಿಧಾನಪರಿಷತ್ ಅಭ್ಯರ್ಥಿಗಳನ್ನಾಗಿ ಬಿಜೆಪಿ ಘೋಷಿಸಿದೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಕೆಲವೆಡೆ ಮಳೆ ಆಗುವ ಸಾಧ್ಯತೆ ಇದೆ

‘ಹೈಡ್ರಾ’ ರಚನೆಗೆ ಹಿಟ್ಲರ್ ಸ್ಫೂರ್ತಿ’ ಹೇಳಿಕೆಗೆ ಕಿಡಿ

ಹೈದರಾಬಾದ್ (ಪಿಟಿಐ): ‘ಕೆರೆ, ನಾಲೆ ಒತ್ತುವರಿ ತೆರವಿಗೆ ರಚಿಸಿರುವ ‘ಹೈಡ್ರಾ’ ಸಮಿತಿಗೆ ಆ ಹೆಸರು ಇಡಲು ಸರ್ವಾಧಿಕಾರಿ ಹಿಟ್ಲರ್ ಸ್ಫೂರ್ತಿ’ ಎಂಬ ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಅವರ ಹೇಳಿಕೆಯು ರಾಜಕೀಯ ವಿವಾದಕ್ಕೆ ಗ್ರಾಸವಾಗಿದೆ.

ಬೆಂಗಳೂರಿನಲ್ಲಿ ಶನಿವಾರ ಸುದ್ದಿಗಾರರ ಜೊತೆಗೆ ಮಾತನಾಡುವಾಗ ರೇವಂತ್ ರೆಡ್ಡಿ ಅವರು ಈ ಹೇಳಿಕೆ ನೀಡಿದ್ದರು. ಬಿಆರ್‌ಎಸ್ ಮತ್ತು ಬಿಜೆಪಿ ಇದಕ್ಕೆ ಕಟುವಾಗಿ ಪ್ರತಿಕ್ರಿಯಿಸಿವೆ.

‘ಯಾರನ್ನಾದರೂ ಹತ್ಯೆ ಮಾಡುವ ಹಿಟ್ಲರ್‌ನ ತಂಡವನ್ನು ಹೈಡ್ರಾ ಎಂದೇ ಕರೆಯಲಾಗುತ್ತಿತ್ತು. ಅದರಿಂದ ಸ್ಫೂರ್ತಿ ಪಡೆದು ಒತ್ತುವರಿ ತೆರವು ಕಾರ್ಯಾಚರಣೆಯ ತಂಡಕ್ಕೆ ಈ ಹೆಸರಿಟ್ಟಿದ್ದೇನೆ’ ಎಂದು ರೇವಂತ್ ಹೇಳಿದ್ದರು.

ಈ ಹೇಳಿಕೆಗೆ ‘ಎಕ್ಸ್’ನಲ್ಲಿ ಪ್ರತಿಕ್ರಿಯಿಸಿರುವ ಕೇಂದ್ರ ಸಚಿವ ಜಿ.ಕಿಶನ್ ರೆಡ್ಡಿ, ‘ಅಪಾಯಕಾರಿ ಹಿಟ್ಲರ್, ತುರ್ತು ಪರಿಸ್ಥಿತಿಯ ಮನಃಸ್ಥಿತಿ ಮತ್ತೆ ಬಯಲಿಗೆ ಬಂದಿದೆ. ‘ಹೈದರಾಬಾದ್‌ನ ನೆಲಸಮ ಕಾರ್ಯಾಚರಣೆಯನ್ನು ಯುದ್ಧಬಾಧಿತ ಇಸ್ರೇಲ್‌ನ ಸ್ಥಿತಿಗೆ ಹೋಲಿಸುತ್ತಿದ್ದಾರೆ. ಇದು, ರಾಹುಲ್ ಗಾಂಧಿ ಅವರ ಧ್ವನಿಯನ್ನು ಅನುರಣಿಸುತ್ತಿದೆ’ ಎಂದು ಟೀಕಿಸಿದ್ದಾರೆ.

ಉಪನಗರ – ಮೆಟ್ರೊ ಡಬಲ್ ಡೆಕರ್

ಬೆನ್ನಿಗಾನಹಳ್ಳಿಯಲ್ಲಿ ನಿರ್ಮಾಣಗೊಳ್ಳಲಿದೆ ಅರ್ಧ ಕಿ.ಮೀ. ಉದ್ದದ ಮೇಲ್ಸೇತುವೆ

● ಬಾಲಕೃಷ್ಣ ಪಿ.ಎಚ್.


ಬೆಂಗಳೂರು: ಬೆನ್ನಿಗಾನಹಳ್ಳಿಯಲ್ಲಿ ಉಪನಗರ ಸಾರಿಗೆ ಯೋಜನೆಯ (ಬಿಎಸ್‌ಟಿಪಿ) ರೈಲು ಮತ್ತು ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತದ (ಬಿಎಂಆರ್‌ಸಿಎಲ್) ರೈಲು ಒಟ್ಟಿಗೆ ಸಂಚರಿಸಲು ಡಬಲ್ ಡೆಕರ್ ನಿರ್ಮಾಣಗೊಳ್ಳಲಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ‘ನಮ್ಮ ಮೆಟ್ರೊ’ ನೀಲಿ ಮಾರ್ಗ ಮತ್ತು ಬೆಂಗಳೂರು ಉಪನಗರ ರೈಲು ಯೋಜನೆಯಡಿ ನಿರ್ಮಾಣಗೊಳ್ಳುತ್ತಿರುವ ಉಪನಗರ ಸಾರಿಗೆ ಯೋಜನೆಯ ಕಾರಿಡಾರ್–4 ರಾಜಾನುಕುಂಟೆ–ಹೀಲಲಿಗೆ ಕನಕ ಮಾರ್ಗವು ಬೆನ್ನಿಗಾನ ಹಳ್ಳಿಯಲ್ಲಿ ಅರ್ಧ ಕಿಲೋಮೀಟರ್ ಡಬಲ್‌ಡೆಕರ್ ಆಗಿರಲಿದೆ.

ನೆಲಮಟ್ಟದಲ್ಲಿ ರಸ್ತೆ ಇರಲಿದ್ದು, ಡಬಲ್ ಡೆಕರ್‌ನ ಮೊದಲ ಮೇಲ್ಸೇತುವೆಯಲ್ಲಿ ಕೆ–ರೈಡ್ ನಿರ್ಮಿಸುತ್ತಿರುವ ಬಿಎಸ್‌ಟಿಪಿ ರೈಲು ಸಂಚರಿಸಲಿದೆ. ಅದರ ಮೇಲೆ ನಿರ್ಮಾಣಗೊಳ್ಳಲಿರುವ ಸೇತುವೆಯಲ್ಲಿ ಮೆಟ್ರೊ ರೈಲು ಸಂಚರಿಸಲಿದೆ.

ವಯಾಡಕ್ಟ್ (ಸಿಮೆಂಟ್ ತೊಲೆ) ಅನ್ನು ಬೆನ್ನಿಗಾನಹಳ್ಳಿ ಮೇಲ್ಸೇತುವೆ ಬಳಿ ‘ನಮ್ಮ ಮೆಟ್ರೊ ನೀಲಿ ಮಾರ್ಗದ ವಯಾಡಕ್ಟ್‌ನ ಕೆಳಗೆ ನೇರವಾಗಿ ಇರಿಸಲಾಗಿದೆ. ಸಾಮಾನ್ಯ ರೈಟ್ ಆಫ್ ವೇ (ಆರ್‌ಒಡಬ್ಲ್ಯು) ಒಳಗೆ ಎರಡು ಕ್ಷಿಪ್ರ ಸಾರಿಗೆ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳುವ ವಿಶಿಷ್ಟ ಬಹು-ಹಂತದ ಸಾರಿಗೆ ಕಾರಿಡಾರ್ ಅನ್ನು ರಚಿಸಲಾಗಿದೆ ಎಂದು ಕೆ–ರೈಡ್ ಅಧಿಕಾರಿಗಳು ತಿಳಿಸಿದ್ದಾರೆ.

ಅತಿ ದೊಡ್ಡ ಜಂಕ್ಷನ್: ಬೆನ್ನಿಗಾನಹಳ್ಳಿಯಲ್ಲಿ ಎರಡು ಮೆಟ್ರೊ ಮಾರ್ಗಗಳು, ಮೂರು ಉಪನಗರ ಸಾರಿಗೆ ಯೋಜನೆಯ ಮಾರ್ಗಗಳು ಹಾದು ಹೋಗುವುದರಿಂದ ಅದು ಅತಿ ದೊಡ್ಡ ಜಂಕ್ಷನ್ ಆಗಲಿದೆ.



ಬೆನ್ನಿಗಾನಹಳ್ಳಿಯಲ್ಲಿ ನಿರ್ಮಾಣಗೊಳ್ಳಲಿರುವ ಬಿಎಂಆರ್‌ಸಿಎಲ್ ಮತ್ತು ಬಿಎಸ್‌ಟಿಪಿ ಡಬಲ್ ಡೆಕರ್ ಮಾರ್ಗದ ನೀಲನಕ್ಷೆ

ಚಲ್ಲಘಟ್ಟ– ವೈಟ್‌ಫೀಲ್ಡ್ ನಡುವೆ ಸಂಪರ್ಕಿಸುವ ‘ನಮ್ಮ ಮೆಟ್ರೊ’ ನೇರಳೆ ಮಾರ್ಗವು ಈಗಾಗಲೇ ಇದ್ದು, ಮೆಟ್ರೊ ರೈಲುಗಳು ಸಂಚರಿಸುತ್ತಿವೆ. ಕೇಂದ್ರ ರೇಷ್ಮೆ ಮಂಡಳಿಯಿಂದ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ನೀಲಿ ಮಾರ್ಗವು ನಿರ್ಮಾಣ ಹಂತದಲ್ಲಿದ್ದು, ಇನ್ನೊಂದು ವರ್ಷದಲ್ಲಿ ಮೆಟ್ರೊ ಸಂಚರಿಸುವ ಸಾಧ್ಯತೆ ಇದೆ. ಈ ಎರಡು ಮಾರ್ಗಗಳು ಬೆನ್ನಿಗಾನಹಳ್ಳಿ– ಕೆ.ಆರ್.ಪುರ ಮೂಲಕ ಹಾದುಹೋಗಲಿವೆ.

ಬಿಎಸ್‌ಟಿಪಿ ಯೋಜನೆಯ ನಾಲ್ಕು ಕಾರಿಡಾರ್‌ಗಳಲ್ಲಿ ಕೆಎಸ್‌ಆರ್ ಬೆಂಗಳೂರು– ದೇವನಹಳ್ಳಿ ಸಂಪರ್ಕಿಸುವ ಕಾರಿಡಾರ್–1 (ಸಂಪಿಗೆ ಮಾರ್ಗ– 41.4) ಹೊರತುಪಡಿಸಿ ಉಳಿದ ಮೂರು ಮಾರ್ಗಗಳು ಬೆನ್ನಿಗಾನಹಳ್ಳಿಯಲ್ಲಿ ಸಂಪರ್ಕಿಸುತ್ತವೆ.

25 ಕಿ.ಮೀ. ಉದ್ದದ ಕಾರಿಡಾರ್ 2 (ಮಲ್ಲಿಗೆ ಮಾರ್ಗ) ಚಿಕ್ಕಬಾಣಾವರದಲ್ಲಿ ಆರಂಭವಾಗಿ ಬೆನ್ನಿಗಾನಹಳ್ಳಿಯಲ್ಲಿ ಕೊನೆಗೊಳ್ಳುತ್ತಿದ್ದು, ಕಾಮಗಾರಿ ನಡೆಯುತ್ತಿದೆ. ಚಿಕ್ಕಬಾಣಾವರದಿಂದ ಯಶವಂತಪುರವರೆಗೆ ಸಿವಿಲ್ ಕಾಮಗಾರಿ ಬಹುತೇಕ ಮುಕ್ತಾಯದ ಹಂತಕ್ಕೆ ಬಂದಿದ್ದು, ಯಶವಂತಪುರದಿಂದ ಬೆನ್ನಿಗಾನಹಳ್ಳಿವರೆಗಿನ ಕಾಮಗಾರಿಯನ್ನು 2029ರ ಒಳಗೆ ಪೂರ್ಣಗೊಳಿಸುವ ಗುರಿಯನ್ನು ಬಿಎಸ್‌ಟಿಪಿ ಹೊಂದಿದೆ.

35.5 ಕಿ.ಮೀ. ಕಾರಿಡಾರ್–3 (ಪಾರಿಜಾತ) ಕೆಂಗೇರಿ–ವೈಟ್‌ಫೀಲ್ಡ್ ಮಾರ್ಗ ಮತ್ತು 47 ಕಿ.ಮೀ. ಉದ್ದದ ಕಾರಿಡಾರ್–4 (ಕನಕ) ರಾಜಾನುಕುಂಟೆ–ಹೀಲಲಿಗೆ ಇಲ್ಲಿಂದಲೇ ಹಾದು ಹೋಗಲಿದೆ.

‘₹169 ಕೋಟಿ ಉಳಿತಾಯ’

‘ಬೆನ್ನಿಗಾನಹಳ್ಳಿಯಲ್ಲಿ ಉಪನಗರ ಸಾರಿಗೆ ಯೋಜನೆಗೆ ಸುಮಾರು 1 ಎಕರೆ 26 ಗುಂಟೆ ಜಮೀನು ಸ್ವಾಧೀನ ಪಡಿಸಿಕೊಳ್ಳಬೇಕಿತ್ತು. ಇದು ಜನವಸತಿ ಪ್ರದೇಶವಾಗಿದ್ದು, ಕನಿಷ್ಠ 600 ಕುಟುಂಬಗಳನ್ನು ಸ್ಥಳಾಂತರಿಸಬೇಕಿತ್ತು. ಡಬಲ್ ಡೆಕರ್ ರೈಲು ಮಾರ್ಗಗಳನ್ನು ನಿರ್ಮಿಸುತ್ತಿರುವುದರಿಂದ ಭೂಸ್ವಾಧೀನ ಮಾಡುವುದು ತಪ್ಪಿದೆ. 600 ಕುಟುಂಬಗಳ ಸ್ಥಳಾಂತರವೂ ತಪ್ಪಿದೆ. ಇದರಿಂದ ₹169 ಕೋಟಿ ಉಳಿತಾಯವಾಗಿದೆ’ ಎಂದು ಕೆ–ರೈಡ್ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಣ್ ಸಿಂಗ್ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಅಸಮಾನತೆಗೆ ಕನ್ನಡ ಸಾಹಿತ್ಯದ ಪ್ರತಿರೋಧ: ಬಳಿಗಾರ್ ಅಭಿಮತ

ಬೆಂಗಳೂರು: ‘ಅಸಮಾನತೆ ಮತ್ತು ತಾರತಮ್ಯ ನಮ್ಮ ಸಮಾಜದಲ್ಲಿ ಬಹಳ ಹಿಂದಿನಿಂದಲೂ ಇದೆ. ಕನ್ನಡ ಸಾಹಿತ್ಯ ಜಗತ್ತು ಆರಂಭದ ದಿನದಿಂದಲೂ ಅಸಮಾನತೆ ಮತ್ತು ತಾರತಮ್ಯಕ್ಕೆ ಪ್ರತಿರೋಧ ಒಡ್ಡುತ್ತಲೇ ಬಂದಿದೆ’ ಎಂದು ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ ಮನು ಬಳಿಗಾರ್ ಹೇಳಿದರು.

ಸಮರ್ಥ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನವು ಸಾಹಿತ್ಯ ಪರಿಷತ್ತಿನಲ್ಲಿ ಭಾನುವಾರ ಆಯೋಜಿಸಿದ್ದ ‘ಮಹಿಳಾ ಸಾಹಿತ್ಯ ಸಮ್ಮೇಳನ’ ಉದ್ಘಾಟಿಸಿ ಅವರು ಮಾತನಾಡಿದರು.

ಗಾಯಕಿಯರಾದ ಭಾಗ್ಯಲಕ್ಷ್ಮಿ ಮದನ್‌ಗೋಪಾಲ್ ಮತ್ತು ನಾಗಮಣಿ ಮನೋಹರ ಅವರಿಗೆ ಸಮ್ಮೇಳನದಲ್ಲಿ ‘ಕರ್ನಾಟಕ ಸಂಗೀತ ಸಂವರ್ಧಿನಿ’ ಪ್ರಶಸ್ತಿ ಪ್ರದಾನ ಮಾಡಲಾಯಿತು.

‘ಪಂಪ ಮನುಷ್ಯ ಜಾತಿ ತಾನೊಂದೆ ವಲಂ ಎಂದಿದ್ದಾನೆ. ಬಸವಣ್ಣ, ಇವನಾರವ ಇವನಾರವ ಎಂದೆಣಿಸದಿರಯ್ಯ ಇವ ನಮ್ಮವ ಇವ ನಮ್ಮವ ಎಂದೆಣಿಸಯ್ಯ ಎಂದು ಕರೆ ನೀಡಿದ್ದಾರೆ. ಕನಕದಾಸರು, ಕುಲಕುಲವೆಂದು ಹೊಡೆದಾಡದಿರಿ ಎಂದು ಕೀರ್ತನೆ ಮೂಲಕ ಜನರಲ್ಲಿ ಜಾಗೃತಿ ಮೂಡಿಸಲು ಯತ್ನಿಸಿದ್ದರು. ಆಧುನಿಕ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಕುವೆಂಪು ಅವರು ವಿಶ್ವಮಾನವ ಪರಿಕಲ್ಪನೆ ಮತ್ತು ಅನಿಕೇತನ ಪ್ರಜ್ಞೆಯನ್ನು ನೀಡಿದ್ದಾರೆ. ಹೀಗೆ ಕನ್ನಡ ಸಾಹಿತ್ಯ ಚರಿತ್ರೆಯ ಉದ್ದಕ್ಕೂ ದಾರ್ಶನಿಕರು ಸಮಾಜವನ್ನು ಎಚ್ಚರಿಸುವ ಕೆಲಸ ಮಾಡಿದ್ದಾರೆ’ ಎಂದರು.

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಆರ್.ಸುನಂದಮ್ಮ, ‘ಅಸಮಾನತೆ ನಮ್ಮೊಳಗೇ ಇರುತ್ತದೆ. ಧರ್ಮ–ಜಾತಿ, ಹೆಣ್ಣು–ಗಂಡು, ಜಾತಿ–ವರ್ಗ ತಾರತಮ್ಯವನ್ನು ಪೋಷಕರೇ ಮಕ್ಕಳಲ್ಲಿ ಬಿತ್ತುತ್ತೇವೆ. ಇದನ್ನು ಹೋಗಲಾಡಿಸುವ ಕೆಲಸವನ್ನು ಮನೆಯಿಂದಲೇ ಮಾಡಬೇಕು’ ಎಂದರು.

ಸಾಹಿತಿ ಭ್ರಮರ ಬಹದ್ದೂರ್ ಅವರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಸಂಶೋಧಕ ಕೆ.ಜಿ.ಲಕ್ಷ್ಮೀನಾರಾಯಣಪ್ಪ, ಪ್ರತಿಷ್ಠಾನದ ಎಸ್.ಆರ್.ವಿಜಯ ಇದ್ದರು.

ಗಾಯಕರಿಗೆ ಪ್ರೋತ್ಸಾಹಧನ



ಬೆಂಗಳೂರು: ಯಶವಂತಪುರದಲ್ಲಿ ‘ವಚನಜ್ಯೋತಿ ಬಳಗ’ದ ಗೌರವಾಧ್ಯಕ್ಷ ಮಹೇಶ ಬೆಲ್ಲದ ಅವರು ವಚನ ಗಾಯಕರಿಗೆ ₹2.5 ಲಕ್ಷ ಪ್ರೋತ್ಸಾಹಧನದ ಚೆಕ್ ಅನ್ನು ವಿತರಿಸಿದರು.

ಗಾಯಕರಾದ ದೇವೇಂದ್ರಕುಮಾರ ಪತ್ತಾರ್, ರವೀಂದ್ರ ಸೊರಗಾವಿ, ಮೀನಾಕ್ಷಿ ಮೇಟಿ, ಟಿ.ಎಂ. ಜಾನಕಿ, ಸರಸ್ವತಿ ಹೆಗಡೆ, ಸಿದ್ದರಾಮ ಕೇಸಾಪುರ, ಅಮರೇಶ ಗವಾಯಿ, ಈರಯ್ಯ ಚಿಕ್ಕಮಠ, ಚೇತನಾ ಮುಧೋಳ್, ಪ್ರಭಾ ಇನಾಂದಾರ್, ವಾದ್ಯಗಾರರಾದ ಗುರುರಾಜ ಆಚಾರ್ಯ, ಪುಣ್ಯೇಶ್, ಮಹೇಂದ್ರ ಅವರಿಗೆ ಚೆಕ್ ಜೊತೆಗೆ ಸನ್ಮಾನ ಮಾಡಲಾಯಿತು.

ಬಳಗದ ಅಧ್ಯಕ್ಷ ಎಸ್.ಪಿನಾಕಪಾಣಿ, ಅನಿತಾ ಮಹೇಶ ಬೆಲ್ಲದ್, ಉಪಾಧ್ಯಕ್ಷ ರುದ್ರಪ್ಪ ದೇಸಾಯಿ, ಪ್ರಧಾನ ಕಾರ್ಯದರ್ಶಿ ಪ್ರಭು ಇಸುವನಹಳ್ಳಿ, ಮುಖ್ಯ ಕಾರ್ಯನಿರ್ವಾಹಕ ರಾಜಾ ಗುರುಪ್ರಸಾದ್, ಮಕ್ಕಳ ವಚನ ಮೇಳ ಪ್ರಧಾನ ಸಂಚಾಲಕಿ ರತ್ನಾ ದೇಸಾಯಿ, ಕವಯತ್ರಿ ಕೆ.ಆರ್.ಸೌಮ್ಯಾ, ಆಶಯ ಬಿಲ್ವ, ಮಾನಸಾ ಮೇಟಿ, ವೈಷ್ಣವಿ ಆಚಾರ್ಯ ಪಾಲ್ಗೊಂಡಿದ್ದರು.

ಮನೆಯ ಕಾಂಪೌಂಡ್ ಏರಿದ ಚಿರತೆ

ಪ್ರಜಾವಾಣಿ ವಾರ್ತೆ

ಅರಸೀಕೆರೆ (ಹಾಸನ): ಕಾಳೇಗೌಡನ ಕೊಪ್ಪಲು ಗ್ರಾಮದಲ್ಲಿ ತಡರಾತ್ರಿ ಚಿರತೆಯೊಂದು ಮನೆಯ ಕಾಂಪೌಂಡ್ ಮೇಲೆ ಕುಳಿತು ಬೇಟೆಗೆ ಹೊಂಚು ಹಾಕುತ್ತಿದ್ದ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಸೈರನ್ ಶಬ್ದಕ್ಕೂ ಮಿಸುಕಾಡದೆ ಮನೆಯ ಕಾಂಪೌಂಡ್ ಮೇಲೆ ಕುಳಿತು ಶಬ್ದ ಬಂದ ಕಡೆ ತದೇಕಚಿತ್ತದಿಂದ ದಿಟ್ಟಿಸುತ್ತಿರುವ ದೃಶ್ಯ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

‘ವಾರದ ಹಿಂದಷ್ಟೇ ಮೇಕೆಯೊಂದನ್ನು ಹೊತ್ತೊಯ್ದು ತಿಂದಿತ್ತು. ನಾಯಿ, ಇತರ ಪ್ರಾಣಿಗಳನ್ನು ಹೊತ್ತೊಯ್ಯಲು ಬಂದಿರಬಹುದು’ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

‘ಕುವೆಂಪು ಪೂರ್ಣದೃಷ್ಟಿ ಪರಿಸರ ಕೇಂದ್ರಿತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾನುವಾರ ಸಂಜೆ ಹೊರಗೆ ಮಳೆ ಬಂದು ನಿಂತಿತ್ತು. ಮಳೆಯಲ್ಲಿ ನೆನೆದು ಬಂದವರು, ಮಳೆಯಿಂದ ತಪ್ಪಿಸಿಕೊಂಡು ಬಂದವರು ಒಳಗೆ ಕುಳಿತು ಕುವೆಂಪು ಕೃತಿಗಳಲ್ಲಿ ಮೂಡಿದ ಮಲೆನಾಡು, ಮಳೆಕಾಡಿನ ಕುರಿತ ಚರ್ಚೆಗೆ ಕಿವಿಯಾಗಿದ್ದರು. ಕಾಡಿನ ಕವಿಯಾಗಿ ಕುವೆಂಪು ಅಲ್ಲಿ ಹಲವು ಆಯಾಮಗಳಲ್ಲಿ ಅನಾವರಣಗೊಂಡಿದ್ದರು.

ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರವು ವಿಶ್ವ ಪರಿಸರ ದಿನದ ಅಂಗವಾಗಿ ಏರ್ಪಡಿಸಿದ್ದ ‘ಕಾಡಿನ ಕವಿ’ ಕುವೆಂಪು ವಿಚಾರಗೋಷ್ಠಿಯು ಹೀಗೆ ಕುವೆಂಪು ಓದುಗರಿಗೆ ಸ್ಮರಣೀಯವಾಯಿತು. ಅವರ ಕವಿತೆಗಳು ಹಾಗೂ ಕಾದಂಬರಿಗಳ ಅನುವಾದಿತ ಭಾಗಗಳ ಓದುವಿಕೆಯು ಗೋಷ್ಠಿಯ ಮೆರುಗು ಹೆಚ್ಚಿಸಿತು.

ಕುವೆಂಪು ಅವರ ‘ಕಾನೂರು ಹೆಗ್ಗಡತಿ’ ಹಾಗೂ ‘ಮಲೆಗಳಲ್ಲಿ ಮದುಮಗಳು’ ಕೃತಿಗಳನ್ನು ಇಂಗ್ಲಿಷ್‌ಗೆ ಅನುವಾದಿಸಿರುವ ವನಮಾಲಾ ವಿಶ್ವನಾಥ್, ‘ಕುವೆಂಪು ಪ್ರತಿಪಾದಿಸುವ ಪೂರ್ಣದೃಷ್ಟಿಯು ಕೇವಲ ಮನುಷ್ಯ ಕೇಂದ್ರಿತವಲ್ಲ. ಅದು ಪರಿಸರ ಕೇಂದ್ರಿತ. ಹಾಗೆಂದ ಬಳಿಕವೂ, ‘ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ’ ಎಂಬ ಪ್ರತಿಪಾದನೆಯನ್ನೂ ಮರೆಯುವಂತಿಲ್ಲ’ ಎಂದರು.


ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರವು ವಿಶ್ವ ಪರಿಸರ ದಿನದ ಅಂಗವಾಗಿ ಏರ್ಪಡಿಸಿದ್ದ ವಿಚಾರಗೋಷ್ಠಿಯಲ್ಲಿ ಪೆಂಗ್ವಿನ್ ರ‍್ಯಾಂಡಮ್ ಹೌಸ್ ಇಂಡಿಯಾದ ಕಾರ್ಯನಿರ್ವಾಹಕ ಸಂಪಾದಕ ಕಾರ್ತಿಕ್ ವೆಂಕಟೇಶ್ ಮಾತನಾಡಿದರು

ಕುವೆಂಪು ಕವಿತೆಗಳನ್ನು ಓದಿದ ಅವರು, ‘ಕಾಡಿನ ಕೊಳಲಿದು, ಕಾಡಿನ ಕವಿಯು ನಾ’ ಎಂಬ ಸಾಲು ಓದುತ್ತಲೇ, ಹೆಚ್ಚು ಪ್ರಸಿದ್ಧವಲ್ಲದ, ‘ಹಸುರತ್ತಲ್, ಹಸುರಿತ್ತಲ್, ಹಸಿರೆತ್ತಲ್ ಕಡಲಿನಲಿ, ಹಸುರ್‌ಗಟ್ಟಿತೋ ಕವಿಯಾತ್ಮಂ, ಹಸುರ್ ನೆತ್ತರ್ ಒಡಲಿನಲಿ’ ಸಾಲುಗಳನ್ನೂ ಓದಿ ಬೆರಗು ಮೂಡಿಸಿದರು.

ನಂತರ ಮಾತನಾಡಿದ ಸಮಾಜ ವಿಜ್ಞಾನಿ ಸುಂದರ್ ಸರುಕ್ಕೈ, ಪ್ರಕೃತಿಯನ್ನು ಕುವೆಂಪು ಮತ್ತು ಅವರ ಮಗ ಪೂರ್ಣಚಂದ್ರ ತೇಜಸ್ವಿಯವರು ಕಾದಂಬರಿಗಳಲ್ಲಿ ವರ್ಣಿಸುವ ಬಗೆಯನ್ನು ಹೋಲಿಸಿದರು. ‘ಪ್ರಕೃತಿಯನ್ನು ಕುವೆಂಪು ಶಬ್ದಗಳ ಮೂಲಕವೇ ಕಂಡರಿಸುತ್ತಾರೆ. ಅವರ ಕಾದಂಬರಿಗಳಲ್ಲಿ ಕಾಡಿನ ಬಗೆಗಿಂತಲೂ, ಲೈಂಗಿಕತೆ ಮತ್ತು ಜಾತಿ ಪದ್ಧತಿಯ ಕುರಿತು ಹೆಚ್ಚು ವಿವರಣೆಗಳಿವೆ’ ಎಂದು ಪ್ರತಿಪಾದಿಸಿದರು.

ಮಲೆನಾಡಿನಲ್ಲಿ ತಾವು ಕೆಲಸ ಮಾಡಿದ ದಿನಗಳನ್ನು ಸ್ಮರಿಸಿದ ಅಭಿವೃದ್ಧಿ ಆಯುಕ್ತೆ ಉಮಾ ಮಹಾದೇವನ್, ‘ಮಲೆಗಳಲ್ಲಿ ಮದುಮಗಳು ರೀತಿಯ ಸೃಜನಶೀಲ ಕೃತಿಗಳು ಪ್ರಕೃತಿಯ ಕುರಿತು ತೋರುವ ಸತ್ಯವನ್ನು ಮನಗಾಣಲು ವಿಶೇಷ ಅಧ್ಯಯನ ಬೇಕು’ ಎಂದರು.

> ಕಾಡು– ಪ್ರಕೃತಿಯನ್ನು ಖಚಿತವಾಗಿ ವ್ಯಾಖ್ಯಾನಿಸುವುದು ಕಷ್ಟ. ಆದಿವಾಸಿಗಳು ಎದುರಿಸುವ ಸಮಸ್ಯೆಗಳು, ಸರ್ಕಾರವು ಕಾಡನ್ನು ಹೇಗೆ ವ್ಯಾಖ್ಯಾನಿಸುತ್ತದೆ ಎಂಬುದನ್ನು ಆಧರಿಸಿರುತ್ತದೆ
> **ಸುಂದರ್ ಸರುಕ್ಕೈ,** ಸಮಾಜ ವಿಜ್ಞಾನಿ

‘ನಾಡಗೀತೆಯಾಗಿರುವ ‘ಜಯ ಭಾರತ ಜನನಿಯ ತನುಜಾತೆ’ಯಲ್ಲಿ ಬರುವ ‘ಸರ್ವಜನಾಂಗದ ಶಾಂತಿಯ ತೋಟ’ ಎನ್ನುವ ಸಾಲಿನಲ್ಲಿ ಕುವೆಂಪು ಸೌಹಾರ್ದವನ್ನೂ ಪ್ರಕೃತಿಯನ್ನೂ ಒಟ್ಟಿಗೇ ಬೆಸೆಯುವುದು ವಿಶೇಷ’ ಎಂದರು.

ಗೋಷ್ಠಿಯನ್ನು ನಿರ್ವಹಿಸಿದ ಪೆಂಗ್ವಿನ್ ರ‍್ಯಾಂಡಮ್ ಹೌಸ್ ಇಂಡಿಯಾದ ಕಾರ್ಯನಿರ್ವಾಹಕ ಸಂಪಾದಕ ಕಾರ್ತಿಕ್ ವೆಂಕಟೇಶ್, ‘ಅನುವಾದಿತ ಕಾದಂಬರಿಗಳಲ್ಲಿರುವ ಪ್ರಕೃತಿಯ ವರ್ಣನೆಗಳೇ ಮೂಲ ಕಾದಂಬರಿಗಳನ್ನು ಓದಲು ಪ್ರೇರೇಪಿಸಿದವು’ ಎಂದು ತಿಳಿಸಿದರು.

ತ್ಯಾಜ್ಯ ಗುಂಡಿಗೆ ಇಳಿದ ನಾಲ್ವರು ಸಾವು

ಸೂರತ್ (ಪಿಟಿಐ): ಗುಜರಾತ್‌ನ ಸೂರತ್ ನಗರದ ಆಭರಣ ಉತ್ಪಾದನಾ ಘಟಕದಲ್ಲಿ ತ್ಯಾಜ್ಯದ ಗುಂಡಿ ಸ್ವಚ್ಛಗೊಳಿಸುವಾಗ ವಿಷಗಾಳಿ ಸೇವಿಸಿ ನಾಲ್ವರು ಕಾರ್ಮಿಕರು ಭಾನುವಾರ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಉಸಿರುಗಟ್ಟಿದ್ದು ಅವರ ಸಾವಿಗೆ ಕಾರಣವಾಗಿರಬಹುದು’ ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಎವರೆಸ್ಟ್ ಆರೋಹಣ ಮಾಡಿದ ಇಬ್ಬರು ಕನ್ನಡಿಗರಿಗೆ ಸನ್ಮಾನ

‘ಸಾಧನೆಯ ಮುಂದೆ ಎಲ್ಲ ಸಂಪತ್ತು ಗೌಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಣ, ಆಸ್ತಿ, ಸಂಪತ್ತು ಗಳಿಕೆ ಖುಷಿ ಕೊಡುವುದು ನಿಜ, ಆದರೆ ಸಾಧನೆಗಳ ಮುಂದೆ ಈ ಎಲ್ಲ ಸಂಪತ್ತು ಗೌಣ’ ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣಬೈರೇಗೌಡ ಬಣ್ಣಿಸಿದರು.

ಸಹಕಾರ ನಗರದಲ್ಲಿ ವಿವಿಧ ಸಂಘ- ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ, ವಿಶ್ವದ ಅತಿ ಎತ್ತರದ ಶಿಖರ ಮೌಂಟ್ ಎವರೆಸ್ಟ್ ಆರೋಹಣ ಮಾಡಿದ ಮೌಂಟೇನೀರಿಂಗ್ ಅಸೋಸಿಯೇಷನ್ ಸದಸ್ಯರಾದ ಸಂತೋಷ್ ದೇವರಾಜಪ್ಪ ಹಾಗೂ ಡಾ.ಚಿನ್ಮಯಿ ಜೆ. ತ್ರಿಶೂಲಮೂರ್ತಿ ಅವರ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸಂಪತ್ತಿನ ಗಳಿಕೆಯ ಹೊರತಾಗಿಯೂ ಜೀವನ ಇದೆ. ಸಾಧನೆಗಳ ಮೂಲಕ ಬದುಕನ್ನು ಸಾರ್ಥಕಪಡಿಸಿಕೊಂಡು ಮತ್ತೊಬ್ಬರಿಗೆ ಪ್ರೇರಣೆಯಾಗುವಂತೆ ಜೀವಿಸಬೇಕು. ಅಂತಹ ಬದುಕು ನೀಡುವ ಖುಷಿಗೆ ಮಿತಿ ಇರುವುದಿಲ್ಲ’ ಎಂದರು.

ಸಹಕಾರ ನಗರದ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷ ದೇವರಾಜಪ್ಪ ಅಧ್ಯಕ್ಷತೆ ವಹಿಸಿದ್ದರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಾರ್ಯದರ್ಶಿ ತುಳಸಿ ಮದ್ದಿನೇನಿ, ಕರ್ನಾಟಕ ಮೌಂಟೇನೀರಿಂಗ್ ಅಸೋಸಿಯೇಷನ್ ಅಧ್ಯಕ್ಷ ಎಸ್.ಕೆ. ಮೆಹತಾ, ಕಾವೇರಿ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಬಿ.ಎಂ.ದೇವರಾಜಪ್ಪ, ಕಾಂಗ್ರೆಸ್ ಮುಖಂಡ ಎನ್.ಎನ್. ಶ್ರೀನಿವಾಸಯ್ಯ, ಜೆಡಿಎಸ್ ಮುಖಂಡ ನಾಗರಾಜ್ ಇದ್ದರು. ವಾಣಿಜ್ಯ ತೆರಿಗೆಗಳ ಹೆಚ್ಚುವರಿ ಆಯುಕ್ತ ಕೆ.ಸಿ. ವಿರೂಪಾಕ್ಷ ಅವರು ಸಾಧಕರ ಬಗ್ಗೆ ವಿವರಿಸಿದರು.



ಸಂತೋಷ್ ದೇವರಾಜಪ್ಪ, ಡಾ.ಚಿನ್ಮಯಿ ಜೆ. ತ್ರಿಶೂಲಮೂರ್ತಿ ಅವರನ್ನು ಸನ್ಮಾನಿಸಲಾಯಿತು

‘ಅರ್ಧಕ್ಕೆ ಆಮ್ಲಜನಕ ಖಾಲಿ’

‘ಮೌಂಟ್ ಎವರೆಸ್ಟ್ ಆರೋಹಣದ ಆಸೆಯನ್ನೇನೋ ಈಡೇರಿಸಿಕೊಂಡೆವು. ಶಿಖರ ಇಳಿಯುವಾಗ ಆಮ್ಲಜನಕ ಸಿಲಿಂಡರ್ ಖಾಲಿಯಾಯ್ತು. ನಿಜಕ್ಕೂ ಭಯವಾಯ್ತು. ದೇವರೇ ಎಂದು ಪ್ರಾರ್ಥಿಸಿದೆ...’

ಹೀಗೆ ತಮ್ಮ ಅನುಭವವನ್ನು ಹಂಚಿಕೊಳ್ಳುತ್ತ ಸಂತೋಷ್ ದೇವರಾಜಪ್ಪ ಅವರು ಕೆಲ ಕ್ಷಣ ಭಾವುಕರಾದರು.

‘ನನ್ನ ಜೊತೆಗಿದ್ದ ಶೆರ್ಪಾ ಅವರಿಗೆ ಆಮ್ಲಜನಕ ಖಾಲಿಯಾದ ವಿಷಯ ತಿಳಿಸಿದೆ. ಅವರು ಈಗ ಏನೂ ಮಾಡಲು ಸಾಧ್ಯವಿಲ್ಲ. ಮತ್ತೊಂದು ಸಿಲಿಂಡರ್ ಇರುವ ಸ್ಥಳಕ್ಕೆ ಇದೇ ಸ್ಥಿತಿಯಲ್ಲಿ ಹೋಗುವುದು ಅನಿವಾರ್ಯ ಎಂದರು. ಹೇಗೋ ಮತ್ತೊಂದು ಸಿಲಿಂಡರ್ ಇರುವ ಸ್ಥಳ ತಲುಪಿದ್ದಾಯ್ತು. ಅಷ್ಟರಲ್ಲಿ ನನ್ನ ದೇಹದಲ್ಲಿ ಆಮ್ಲಜನಕ ಕೊರತೆಯಿಂದ ಬದಲಾವಣೆಗಳು ಕಾಣಿಸತೊಡಗಿದ್ದವು. ಸಿಲಿಂಡರ್ ಹಾಕಿಕೊಳ್ಳುತ್ತಿದ್ದಂತೆ ಹೋದ ಜೀವ ಬಂದಂತೆ ಆಯಿತು’ ಎಂದು ಸ್ಮರಿಸಿದರು.

‘ಬೆಂಬಲದಿಂದ ಸಾಧನೆ’: ‘ಕರ್ನಾಟಕ ಮೌಂಟೇನೀರಿಂಗ್ ಅಸೋಸಿಯೇಷನ್‌ನ 60ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಮೌಂಟ್ ಎವರೆಸ್ಟ್ ಆರೋಹಣಕ್ಕೆ ಆಯ್ಕೆ ಮಾಡಿದಾಗ ಇದು ಸಾಧ್ಯವೇ ಎಂಬ ಪ್ರಶ್ನೆ ಸಹಜವಾಗಿ ಮೂಡಿತ್ತು. ಆದರೆ, ಎಲ್ಲರ ಬೆಂಬಲ ಮತ್ತು ಪ್ರೋತ್ಸಾಹ ಗುರಿ ತಲುಪುವಂತೆ ಮಾಡಿದೆ’ ಎಂದು ಚಿನ್ಮಯಿ ಹೇಳಿದರು.

ಚಿತ್ರಾವಳಿ


ವಿಶ್ವ ಪರಿಸರ ದಿನದ ಪ್ರಯುಕ್ತ ‘ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ’ಯು ಸ್ವಾತಂತ್ರ್ಯ ಉದ್ಯಾನದಲ್ಲಿ ಆಯೋಜಿಸಿದ್ದ ಪರಿಸರ ಜಾಗೃತಿಗೆ ಲೇಖಕ ಎಸ್.ರಾಮಲಿಂಗೇಶ್ವರ ಅವರು ಕರಪತ್ರ ವಿತರಿಸಿ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡ ಜೆ.ಶರವಣನ್, ಸಮಿತಿ ಜಿಲ್ಲಾ ಅಧ್ಯಕ್ಷ ನಾ.ಶ್ರೀಧರ್, ಎಚ್.ಎಂ.ಮಂಜುನಾಥ್, ಶಿವರಾಮ್, ಹನುಮಂತರಾಜು, ಎಂ.ಪ್ರಭು, ಅಂಬುಜಾ ಬೀರೇಶ್ ಪಾಲ್ಗೊಂಡಿದ್ದರು


ಗೌಡನಪಾಳ್ಯದ ಸ್ಟೆಲ್ಲಾ ಮೇರಿ ಶಾಲೆಯಲ್ಲಿ ಜೆ.ಕೆ.ಫೌಂಡೇಷನ್ ಆಯೋಜಿಸಿದ್ದ ಸ್ವಯಂ ರಕ್ಷಣಾ ತರಬೇತಿ ಶಿಬಿರವನ್ನು ಲೇಖಕಿ ಬಿ.ಟಿ.ಲಲಿತಾ ನಾಯಕ್ ಉದ್ಘಾಟಿಸಿದರು. ತರಬೇತುದಾರರಾದ ಕೀರ್ತಿ ಟಿ.ಎಸ್. ಪ್ರಸಾದ್, ಎಸ್.ಕುಸುಮಾ, ಪ್ರತಿಷ್ಠಾನದ ಉಪಾಧ್ಯಕ್ಷೆ ಆರ್.ಗಿರಿಜಮ್ಮ ಪಾಲ್ಗೊಂಡಿದ್ದರು



ನಗರದ ವಾಸವಿ ಸಮೂಹ ಶಿಕ್ಷಣ ಸಂಸ್ಥೆಗಳ ವತಿಯಿಂದ ಆಯೋಜಿಸಿದ್ದ ‘ಸಿಂಧೂರ ಪ್ರತಿಭಾ ಪುರಸ್ಕಾರ–2026’ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ 100ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸಂಸ್ಥೆ ಕಾರ್ಯದರ್ಶಿ ಡಿ.ಆರ್. ವಿಜಯಸಾರಥಿ, ಎಚ್. ರವೀಂದ್ರ, ಮಂಜುನಾಥ ವಿದ್ಯಾಲಯದ ಸಂಸ್ಥಾಪಕ ಜೆ.ಎಸ್. ನಾಗರಾಜು, ವರಮಹಾಲಕ್ಷ್ಮಿ, ಮುಖ್ಯಶಿಕ್ಷಕ ಎನ್. ರಘು ಹಾಜರಿದ್ದರು

ಕೃತಿ ಜನಾರ್ಪಣೆ ಕಾರ್ಯಕ್ರಮದಲ್ಲಿ ಪ್ರೊ. ಎಂ.ಮಹದೇವ್ ಆಶಯ


ಗ್ರಾಮಗಳಲ್ಲಿ ಶುದ್ಧ ನೀರು ಪೂರೈಕೆಯಾಗಲಿ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಸರ್ವರಿಗೂ ಸೂರು ಎಂಬ ಸದಾಶಯದೊಂದಿಗೆ ರಚಿತವಾಗಿರುವ ‘ಹ್ಯೂಮನ್ ಸೆಟಲ್‌ಮೆಂಟ್ ಇಶ್ಯೂಸ್ ಆ್ಯಂಡ್ ಡೆವಲಪ್‌ಮೆಂಟ್ ಇನ್ ಇಂಡಿಯಾ’ ಪುಸ್ತಕ ದೇಶದ ಉತ್ತಮ ಆರ್ಥಿಕ ಕೃತಿಗಳಲ್ಲಿ ಒಂದಾಗಿದೆ ಎಂದು ಇಸೆಕ್ ಮಾಜಿ ನಿರ್ದೇಶಕ ಪ್ರೊ. ಆರ್.ಎಸ್. ದೇಶಪಾಂಡೆ ಹೇಳಿದರು.

ಅಂಬೇಡ್ಕರ್ ತಾಂತ್ರಿಕ ಮಹಾ ವಿದ್ಯಾಲಯದಲ್ಲಿ ಆಯೋಜಿಸಿದ್ದ ಪಿವಿಪಿ ಕಲ್ಯಾಣ ದತ್ತಿ ಕಾರ್ಯದರ್ಶಿ ಹಾಗೂ ಪ್ರೊ. ಎಂ. ಮಹದೇವ್ ಅವರ ‘ಹ್ಯೂಮನ್ ಸೆಟಲ್‌ಮೆಂಟ್ ಇಶ್ಯೂಸ್ ಆ್ಯಂಡ್ ಡೆವಲಪ್‌ಮೆಂಟ್ ಇನ್ ಇಂಡಿಯಾ’ ಕೃತಿ ಜನಾರ್ಪಣೆ ಹಾಗೂ ಗೌರವ ಡಾಕ್ಟರೇಟ್ ಪಡೆದ ಐಪಿಎಸ್ ಮಾಜಿ ಅಧಿಕಾರಿ ಎಸ್. ಮರಿಸ್ವಾಮಿ ಅವರ ಅಭಿನಂದನೆ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ನಗರ ಪ್ರದೇಶಗಳು ಎದುರಿಸುವ ಮೂಲ ಸೌಕರ್ಯ ಕೊರತೆ, ಘನ ತ್ಯಾಜ್ಯ ನಿರ್ವಹಣೆಯಂತಹ ಸಮಸ್ಯೆಗಳು ಹಾಗೂ ಪರಿಹಾರಗಳ ಬಗ್ಗೆ ಸವಿವರವಾಗಿ ವಿವರಿಸಲಾಗಿದೆ’ ಎಂದು ಹೇಳಿದರು.



ಪ್ರೊ. ಎಂ. ಮಹದೇವ್ ಮತ್ತು ಎಸ್. ಮರಿಸ್ವಾಮಿ ಅವರನ್ನು ಪಿವಿಪಿ ಟ್ರಸ್ಟ್ ವತಿಯಿಂದ ಸನ್ಮಾನಿಸಲಾಯಿತು

ಕೃತಿ ರಚನೆಕಾರ ಪ್ರೊ. ಎಂ.ಮಹದೇವ್ ಮಾತನಾಡಿ, ‘ಗ್ರಾಮೀಣ ಪ್ರದೇಶಗಳು ಅಭಿವೃದ್ಧಿ ಹೊಂದಬೇಕು. ಗ್ರಾಮೀಣ ಭಾಗದ ಶೇ 80ರಷ್ಟು ಮಂದಿ ಈಗಲೂ ಶುದ್ಧ ಕುಡಿಯುವ ನೀರಿನ ಸೌಲಭ್ಯದಿಂದ ವಂಚಿತರಾಗಿದ್ದಾರೆ’ ಎಂದರು.

ಎಸ್. ಮರಿಸ್ವಾಮಿ ಮಾತನಾಡಿ, ‘ಸಮಾಜದ ಸಂಕಷ್ಟಗಳಿಗೆ ಕಣ್ಣು ಕಿವಿಯಾಗಿ ಸ್ಪಂದಿಸುವ ಹೃದಯ ವೈಶಾಲ್ಯ ಬೆಳೆಸಿಕೊಳ್ಳಬೇಕು. ನಾವು ಮಾಡುವ ವೃತ್ತಿಯ ಬಗ್ಗೆ ಕೀಳರಿಮೆ ಬೇಡ. ಮಾಡುವ ಕಾಯಕದೊಂದಿಗೆ ನಮ್ಮನ್ನು ನಾವು ಸಂಪೂರ್ಣವಾಗಿ ಸಮರ್ಪಿಸಿಕೊಂಡರೆ ಯಶಸ್ಸು, ಕೀರ್ತಿ ಒದಗಿ ಬರುತ್ತದೆ’ ಎಂದು ಕಿವಿ ಮಾತು ಹೇಳಿದರು.

ಸಾಹಿತಿ ಹಂಪ ನಾಗರಾಜಯ್ಯ ಮಾತನಾಡಿದರು. ಟ್ರಸ್ಟಿಗಳಾದ ಎಸ್. ಶಿವಮಲ್ಲು, ಡಾ.ಬಿ.ಎನ್. ಉಮೇಶ್, ಹಿರಿಯ ಸಂಶೋಧಕ ಡಾ.ಎಲ್. ಎಂ. ಪಟ್ನಾಯಕ್, ಪ್ರಾಂಶುಪಾಲ ಮಹಾಲಿಂಗ ವಿ. ಮಂಡಿ, ಅಕಾಡೆಮಿಕ್ ಡೀನ್ ಮಹೇಶ್, ಆಡಳಿತಾಧಿಕಾರಿ ಸಂತೋಷ್ ಕುಮಾರ್ ಇದ್ದರು.

ಮೆಟ್ರೊ: ಸಿ.ಎಂ ಜೊತೆ ಸೆಲ್ಫಿ ಖುಷಿ

ಜೀರೊ ಟ್ರಾಫಿಕ್ ತಪ್ಪಿಸಲು ಅಂಬೇಡ್ಕರ್ ನಿಲ್ದಾಣ–ಸಿಲ್ಕ್ ಇನ್‌ಸ್ಟಿಟ್ಯೂಟ್‌ಗೆ ಪ್ರಯಾಣ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಯುವಜನರೊಂದಿಗೆ ಸೆಲ್ಫಿ, ಜನರೊಂದಿಗೆ ಮಾತುಕತೆ
- ಮಗುವಿಗೆ ಚಾಕೊಲೇಟ್ ನೀಡಿದ ಮುಖ್ಯಮಂತ್ರಿ

ಬೆಂಗಳೂರು: ನಗರದಲ್ಲಿ ಭಾನುವಾರ ಅಂಬೇಡ್ಕರ್ ಮೆಟ್ರೊ ನಿಲ್ದಾಣದಿಂದ (ವಿಧಾನ ಸೌಧ) ಸಿಲ್ಕ್ ಇನ್‌ಸ್ಟಿಟ್ಯೂಟ್ ವರೆಗೆ ಪ್ರಯಾಣಿಸಿದ ನೂರಾರು ಮಂದಿಗೆ ಅಚ್ಚರಿ–ಸಂತಸ ಕಾದಿತ್ತು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಪ್ರಯಾಣಿಸುವ ಅಪರೂಪದ ಅವಕಾಶ, ಅನನ್ಯ ಅನುಭವ ಅವರಿಗೆ ದೊರಕಿತು.

ಸ್ವತಃ ಶಿವಕುಮಾರ್ ಅವರೇ ತಮ್ಮ ಬಳಿಗೆ ಬಂದು, ಮಾತನಾಡಿಸುತ್ತಲೇ ಪ್ರಯಾಣಿಸಿದ ಅನುಭವದಿಂದ ಬಹುತೇಕರು ಪುಳಕಿತರಾದರು. ಉಭಯ ಕುಶಲೋಪರಿಯಿಂದ ಇನ್ನಷ್ಟು ಖುಷಿಯಾದರು. ಮಕ್ಕಳು ಮುಖ್ಯಮಂತ್ರಿ ಜೊತೆಗೆ ಸೆಲ್ಫಿ ತೆಗೆದುಕೊಂಡರು. ಅದಕ್ಕೆ ಯಾರ ಅಡ್ಡಿಯೂ ಇರಲಿಲ್ಲ. ಯುವಕ–ಯುವತಿಯರಂತೂ 'ಇದು ಕನಸೋ, ನನಸೋ' ಎಂಬ ಭಾವದಲ್ಲಿ ಮುಳುಗೆದ್ದರು.

ಮುಖ್ಯಮಂತ್ರಿಯಾದ ನಂತರ ಮೊದಲ ಬಾರಿಗೆ ತವರು ಕ್ಷೇತ್ರದ ಜನರ ಭೇಟಿಗೆ ಹೊರಟಿದ್ದ ಶಿವಕುಮಾರ್ ಅವರು ಜೀರೊ ಟ್ರಾಫಿಕ್‌ನಿಂದ ಸಾರ್ವಜನಿಕರಿಗೆ ತೊಂದರೆಯಾಗು- ವುದನ್ನು ತಪ್ಪಿಸಲು ವಿಧಾನಸೌಧದಿಂದ ಕನಕಪುರ ರಸ್ತೆವರೆಗೂ ಮೆಟ್ರೊ ಮೂಲಕ ಪ್ರಯಾಣ ಬೆಳೆಸಿದರು.

> ಕೇಂದ್ರ ಸರ್ಕಾರವು ಇಂಧನ ದರ ಹೆಚ್ಚಿಸಿರುವುದು ಗಾಬರಿ ಮೂಡಿಸಿದೆ. ಈ ಬಗ್ಗೆ ಪ್ರತ್ಯೇಕ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ
> **ಡಿ.ಕೆ.ಶಿವಕುಮಾರ್,** ಮುಖ್ಯಮಂತ್ರಿ

ಡಾ.ಬಿ.ಆರ್.ಅಂಬೇಡ್ಕರ್ ಮೆಟ್ರೊ ನಿಲ್ದಾಣದಲ್ಲಿ ಕೆಲಹೊತ್ತು ದಿನ ಪತ್ರಿಕೆಗಳ ಮೇಲೆ ಕಣ್ಣಾಡಿಸಿ ನಂತರ ಅಲ್ಲಿದ್ದ ಪ್ರಯಾಣಿಕರ ಕೈಕುಲುಕಿದರು. ಯುವ ಜನರು 'ನಮ್ಮ ಸಿ.ಎಂ' ಎಂದು ಅಭಿಮಾನದಿಂದ ಮಾತನಾಡಿಸಿದರು.

'ಮೆಟ್ರೊ ಪ್ರಯಾಣ ಹೇಗನಿಸುತ್ತದೆ' ಎಂದು ಶಿವಕುಮಾರ್ ಅವರು ಯುವತಿಯೊಬ್ಬರನ್ನು ಕೇಳಿದಾಗ, 'ಸಾಕಷ್ಟು ಸಮಯ ಉಳಿಯುತ್ತಿದೆ' ಎಂದು ಉತ್ತರಿಸಿದರು. ಇದೇ ವೇಳೆ ಮಗುವಿಗೆ ಚಾಕೊಲೇಟ್ ನೀಡಿ ಅವರ ಪೋಷಕರ ಜೊತೆ ಸೆಲ್ಫಿ ತೆಗೆದುಕೊಂಡರು. ಮಗುವೊಂದು 'ನನಗೂ ಫೋಟೋ ಕೊಡಿ' ಎಂದಾಗ ಸ್ವತಃ ಮುಖ್ಯಮಂತ್ರಿ- ಗಳೇ ಮೊಬೈಲ್ ಪಡೆದುಕೊಂಡು ಸೆಲ್ಫಿ ಕೊಟ್ಟರು.

ಹಿರಿಯ ನಾಗರಿಕರೊಬ್ಬರು 'ನಿಮ್ಮನ್ನು ಮೆಟ್ರೊ ರೈಲಿನಲ್ಲಿ ನೋಡಿ ಬಹಳ ಸಂತೋಷವಾಯಿತು. ಒಳ್ಳೆಯದಾಗಲಿ' ಎಂದು ಹಾರೈಸಿದರು.

ವಿದೇಶಿಯರೊಬ್ಬರ ಅಭಿಪ್ರಾಯವನ್ನು ಶಿವಕುಮಾರ್ ಪಡೆದರು. ಯುವತಿಯೊಬ್ಬರಿಗೆ, 'ಚೆನ್ನಾಗಿ ವಿದ್ಯಾಭ್ಯಾಸ ಮಾಡಿ' ಎಂದು ಸಲಹೆ ನೀಡಿದರು.



ಭಾನುವಾರ ಮೆಟ್ರೊ ರೈಲಿನಲ್ಲಿ ಪ್ರಯಾಣಿಸಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಸೆಲ್ಫಿ ತೆಗೆದುಕೊಂಡ ಪ್ರಯಾಣಿಕರು

ಸಮಸ್ಯೆ ಆಲಿಸಲು ಅಧಿಕಾರಿಗಳ ನೇಮಕ: ಸಿ.ಎಂ

ಡಾ.ಬಿ.ಆರ್.ಅಂಬೇಡ್ಕರ್ ನಿಲ್ದಾಣದ ಬಳಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಕ್ಷೇತ್ರದ ಜನ ದೊಡ್ಡಆಲಹಳ್ಳಿಯಿಂದ ಇಲ್ಲಿಯವರೆಗೆ ಕರೆತಂದಿದ್ದಾರೆ. ಅವರ ಆಕಾಂಕ್ಷೆ ಮೇರೆಗೆ ಭೇಟಿ ಮಾಡಲು ಹೋಗುತ್ತಿದ್ದೇನೆ. ಅವರ ಸಮಸ್ಯೆ, ಕುಂದುಕೊರತೆಗಳನ್ನು ಆಲಿಸಲು ಪ್ರತ್ಯೇಕ ಅಧಿಕಾರಿಗಳನ್ನು ನೇಮಿಸಲಾಗುವುದು' ಎಂದರು.

'ನನ್ನ ಕ್ಷೇತ್ರದ ಜನ ಎಂದೂ ತೊಂದರೆ ಕೊಟ್ಟವರಲ್ಲ. ಅವರಿಗೆ ರಾಜಕೀಯ ತಿಳಿವಳಿಕೆ ಇದೆ. ಅಪೇಕ್ಷೆ ಪಡದಿದ್ದರೂ ಅವರ ಸೇವೆ ಮಾಡುವುದು ನನ್ನ ಕರ್ತವ್ಯ' ಎಂದರು.

'ಕ್ಷೇತ್ರದ ಜನ ವಿಧಾನಸೌಧದ ಮೆಟ್ಟಿಲು ಹತ್ತಿಸಿದ್ದಾರೆ. 40 ವರ್ಷಗಳಿಂದ ಬೆಳೆಸಿದವರಿಗೆ ಕೃತಜ್ಞತೆ ಸಲ್ಲಿಸುವುದು ನನ್ನ ಕರ್ತವ್ಯ' ಎಂದರು.



ಬೆಂಗಳೂರಿನ ಗಾಲ್ಫ್‌ಕ್ಲಬ್‌ನಲ್ಲಿ ನಡೆದ 'ಗವರ್ನರ್ಸ್ ಕಪ್' ಟೂರ್ನಿಯ 75 ವರ್ಷ ಮೇಲ್ಪಟ್ಟವರ ವಿಭಾಗದಲ್ಲಿ ಪ್ರಥಮ ಬಹುಮಾನ ಪಡೆದ ಶ್ರೀನಿವಾಸ ಬಹದ್ದೂರ್ ಅವರಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಟ್ರೋಫಿ ನೀಡಿದರು. ಗಾಲ್ಫ್ ಕ್ಲಬ್ ಅಧ್ಯಕ್ಷ ರವಿಕುಮಾರ್ ರಾಜು, ಕಾರ್ಯದರ್ಶಿ ಆನಂದ್ ಶ್ರೀನಿವಾಸನ್ ಪಾಲ್ಗೊಂಡಿದ್ದರು

ನಗರದಲ್ಲಿ ಇಂದು



ಸೌಮ್ಯಾ ಸ್ವಾಮಿನಾಥನ್

ಸಾರ್ವಜನಿಕ ಆರೋಗ್ಯ ನೀತಿ ಕುರಿತು ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನ: ಉದ್ಘಾಟನೆ: ಸೌಮ್ಯಾ ಸ್ವಾಮಿನಾಥನ್, ಶ್ರೀನಾಥ್ ರೆಡ್ಡಿ, ರಿತ್ವಿಕ್ ರಂಜನಂ ಪಾಂಡೆ, ಆಯೋಜನೆ: ಸಾರ್ವಜನಿಕ ಆರೋಗ್ಯ ಸಂಸ್ಥೆ (ಐಪಿಎಚ್), ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಬೆಂಗಳೂರು (ಐಐಎಂಬಿ), ಬೆಳಿಗ್ಗೆ 10

ಅಂತರರಾಷ್ಟ್ರೀಯ ಆರ್ಕೈವ್ಸ್ ಸಪ್ತಾಹ: 'ಇಖ್ರಾರ್ ನಾಮಾ', 'ಪಾನಿ ಪಾಟ ಪೋರಾಟಂ' ಸಿನಿಮಾಗಳ ಪ್ರದರ್ಶನ, ಸಂವಾದ: ಫೈಸಲ್ ರೆಹಮಾನ್, ಅರವಿಂದ್ ನಾರಾಯಣ್, ಆಯೋಜನೆ: ಭಾರತೀಯ ಕಲಾ ಪ್ರತಿಷ್ಠಾನ (ಐಎಫ್‌ಎ), ಸ್ಥಳ: 'ಅಪೂರ್ವ' ನೆಲಮಹಡಿ, ನಂ.259, 4ನೇ ಕ್ರಾಸ್, ರಾಜ್ ಮಹಲ್ 4ನೇ ಹಂತ, ಸಂಜಯ್‌ನಗರ, ಬೆಳಿಗ್ಗೆ 11

26ನೇ ವರ್ಷದ ಪ್ರವಚನ ವಾಹಿನಿ: 'ವಿದುರ ನೀತಿ' ವಿಷಯದ ಬಗ್ಗೆ ಪ್ರವಚನ: ಕಡೂರ್ ಶ್ರೀಧರಾಚಾರ್ಯ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ಮರಗಳ ಹನನ: ಬಿಡಿಎ ನಿರ್ಧಾರ ಬದಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್.ಎಸ್.ಆರ್. ಲೇಔಟ್‌ನಲ್ಲಿ ನಿರ್ಮಿಸಲು ಉದ್ದೇಶಿಸಿರುವ ಹೊಸ ವಾಣಿಜ್ಯ ಸಂಕೀರ್ಣಕ್ಕಾಗಿ 184 ಮರಗಳ ತೆರವಿಗೆ ವಿರೋಧ ವ್ಯಕ್ತವಾದ ಬೆನ್ನಲ್ಲೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ತನ್ನ ನಿರ್ಧಾರ ಬದಲಿಸಿದೆ.

ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಕಟ್ಟಡ ಶಿಥಿಲವಾದ ಕಾರಣ ಹೊಸ ಕಟ್ಟಡವನ್ನು ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಲು ನಿರ್ಧರಿಸಲಾಗಿದೆ. ಸುಮಾರು 19,720 ಚದರ ಮೀಟರ್ ವಿಸ್ತೀರ್ಣದ ಸ್ವತ್ತಿನಲ್ಲಿ 8 ಮಹಡಿಯ ಕಟ್ಟಡ ನಿರ್ಮಿಸಲಾಗುತ್ತದೆ.

ಆದರೆ, ಸುತ್ತಲಿನ 184 ಮರಗಳ ತೆರವು ಮಾಡಲು ಪ್ರಾಧಿಕಾರದ ಕಾರ್ಯಪಾಲಕ ಎಂಜಿನಿಯರ್ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಪ್ರಸ್ತಾವನೆ ಸಲ್ಲಿಸಿದ್ದರು.

ಈ ಜಾಗದಲ್ಲಿ ಬೇವು, ಅರಳಿ, ಹೊಂಗೆ ಸೇರಿ ಹಲವು ಪ್ರಭೇದಗಳ ಮರಗಳಿವೆ. ಇವುಗಳಲ್ಲಿ ಅರ್ಧಕ್ಕೂ ಹೆಚ್ಚು ಮರಗಳು 30–40 ವರ್ಷದಷ್ಟು ಹಳೆಯದಾಗಿವೆ. ಇದಕ್ಕೆ ಪರಿಸರ ಪ್ರೇಮಿಗಳು ಮತ್ತು ಸ್ಥಳೀಯರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು.

ಬಿಡಿಎ ಆಯುಕ್ತ ಪಿ.ಮಣಿವಣ್ಣನ್ ಅವರು ಜಿಬಿಎ ಅರಣ್ಯ ಘಟಕದ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಪತ್ರ ಬರೆದು, ಎಚ್‌ಎಸ್‌ಆರ್ ಬಡಾವಣೆಯ ಪ್ರಾಧಿಕಾರದ ವಾಣಿಜ್ಯ ಸಂಕೀರ್ಣದ ಆವರಣದಲ್ಲಿ ಮರಗಳನ್ನು ತೆರವುಗೊಳಿಸುವ ಪ್ರಸ್ತಾವನೆಯನ್ನು ಕೈಬಿಡುವಂತೆ ಕೋರಿದ್ದಾರೆ.

'ನಗರವನ್ನು ಹಸಿರೀಕರಣಗೊಳಿಸುವುದು ಎಲ್ಲರ ಕರ್ತವ್ಯವಾಗಿದ್ದು, ಈ ರೀತಿಯ ಮರ ತೆರವುಗೊಳಿಸುವ ಕಾರ್ಯ ಇದಕ್ಕೆ ವಿರುದ್ಧವಾಗಿದೆ. ಆದ್ದರಿಂದ ಮರಗಳನ್ನು ಹಾಗೆಯೇ ಉಳಿಸಿಕೊಂಡು ವಾಣಿಜ್ಯ ಸಂಕೀರ್ಣ ಕಾಮಗಾರಿಯ ವಿನ್ಯಾಸ ಮಾರ್ಪಾಡುಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗೆ ನಿರ್ದೇಶನ ನೀಡಲಾಗಿದೆ' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಬಿಡಿಎ ಅಧೀನದಲ್ಲಿ ಯಾವುದೇ ಕಾಮಗಾರಿ ಕೈಗೊಂಡರೂ ಮರಗಳನ್ನು ತೆರವುಗೊಳಿಸದಂತೆ ನಿರ್ದೇಶನ ನೀಡಿದ್ದಾರೆ ಎಂದು ಉಲ್ಲೇಖಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಜಿಬಿಎ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸುದರ್ಶನ್, 184 ಮರಗಳನ್ನು ತೆರವುಗೊಳಿಸುವ ಪ್ರಸ್ತಾವನೆ ಕೈ ಬಿಡುವಂತೆ ಬಿಡಿಎ ಆಯುಕ್ತರು ಪತ್ರ ಬರೆದಿದ್ದಾರೆ. ಪರಿಸರ ಸಂರಕ್ಷಣೆ ವಿಚಾರದಲ್ಲಿ ಆಯುಕ್ತರು ಉತ್ತಮ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ತಿಳಿಸಿದ್ದಾರೆ.



ಎಚ್.ಎಸ್.ಆರ್.ಲೇಔಟ್‌ನಲ್ಲಿರುವ ಬಿಡಿಎ ವಾಣಿಜ್ಯ ಕಟ್ಟಡದ ಸುತ್ತಲಿನ ಮರಗಳು

> ಮರಗಳನ್ನು ಉಳಿಸಿಕೊಂಡು ವಾಣಿಜ್ಯ ಸಂಕೀರ್ಣ ನಿರ್ಮಿಸಲು ವಿರೋಧವಿಲ್ಲ. ಬಿಡಿಎ ಮರ ತೆರವು ಪ್ರಸ್ತಾವ ಹಿಂಪಡೆದಿರುವುದು ಒಳ್ಳೆಯ ಬೆಳವಣಿಗೆ
> **ವಿಜಯ್ ನಿಶಾಂತ್,** ಪರಿಸರ ಪ್ರೇಮಿ

ಚಿಟಿಕೆ ಸುದ್ದಿ

ಹಲ್ಲೆ ನಡೆಸಿ ಆಭರಣ ದೋಚಿದ್ದ ಆರೋಪಿ ಸೆರೆ

ಬೆಂಗಳೂರು: ಮನೆಗೆ ನುಗ್ಗಿ ಗೃಹಿಣಿಯ ಮೇಲೆ ಹಲ್ಲೆ ನಡೆಸಿ, ಚಿನ್ನದ ಸರ ಹಾಗೂ ಮೊಬೈಲ್ ದೋಚಿ ಪರಾರಿಯಾಗಿದ್ದ ಆರೋಪಿಯನ್ನು ಹೆಬ್ಬಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಾಗೇನಹಳ್ಳಿಯ ಅಸ್ಲಂ ಪಾಷಾ ಬಂಧಿತ.



ಆರೋಪಿಯಿಂದ ₹6.70 ಲಕ್ಷ ಮೌಲ್ಯದ ಚಿನ್ನಾಭರಣ, ಮೊಬೈಲ್ ಹಾಗೂ ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಠಾಣಾ ವ್ಯಾಪ್ತಿಯ ಸಿಐಎಲ್ ಲೇಔಟ್ ನಿವಾಸಿ ಜಯಶ್ರೀ ಅವರ ಮನೆಗೆ ನುಗ್ಗಿದ್ದ ಆರೋಪಿ ಆಭರಣ ದೋಚಿ ಪರಾರಿ ಆಗಿದ್ದ.

ಜಯಶ್ರೀ ಅವರ ಮನೆ ಬಳಿ ಹೋಗಿ ಆರೋಪಿ ಕಾಲಿಂಗ್ ಬೆಲ್ ಮಾಡಿದ್ದ. ಆಗ ಮನೆಯಲ್ಲಿ ಒಬ್ಬಂಟಿಯಾಗಿದ್ದ ಜಯಶ್ರೀ, ಸಂಬಂಧಿಕರು ಬಂದಿರಬಹುದೆಂದು ಭಾವಿಸಿ ಬಾಗಿಲು ತೆಗೆದಿದ್ದರು. ನಂತರ ಏಕಾಏಕಿ ಒಳ ನುಗ್ಗಿದ್ದ ಆರೋಪಿ, ಒಳಗಿನಿಂದ ಬಾಗಿಲು ಬಂದ್ ಮಾಡಿ ಹಲ್ಲೆ ನಡೆಸಿ ಮಾಂಗಲ್ಯ ಸರ ಮತ್ತು ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದ ಎಂದು ಪೊಲೀಸರು ತಿಳಿಸಿದರು.

ಕೃತ್ಯ ನಡೆದ ಮನೆಯ ಸುತ್ತಮುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದ್ದ ದೃಶ್ಯಾವಳಿ ಆಧರಿಸಿ ಆರೋಪಿಯನ್ನು ಪತ್ತೆ ಮಾಡಿ ಬಂಧಿಸಲಾಯಿತು ಎಂದು ಮೂಲಗಳು ಹೇಳಿವೆ.

ಗ್ಯಾಸ್ ಗೀಸರ್ ಸೋರಿಕೆ: ಉಸಿರುಗಟ್ಟಿ ಯುವತಿ ಸಾವು

ಸೋಮವಾರಪೇಟೆ (ಕೊಡಗು): ಕಲ್ಕಂದೂರು ಗ್ರಾಮದ ಹೋಂ ಸ್ಟೇದಲ್ಲಿ ತಂಗಿದ್ದ ಬೆಂಗಳೂರಿನ ಖಾಸಗಿ ಕಂಪನಿ ಉದ್ಯೋಗಿ ವಿನುತಾ (27) ಭಾನುವಾರ ಸ್ನಾನದ ಕೋಣೆಯಲ್ಲಿ ಗ್ಯಾಸ್ ಗೀಜರ್ ಸೋರಿಕೆಯಾಗಿ ಉಸಿರುಗಟ್ಟಿ ಮೃತಪಟ್ಟಿದ್ದಾರೆ. ಮೈಸೂರಿನ ಸಿದ್ಧಾರ್ಥನಗರದ ನಿವಾಸಿಗಳಾದ ಜಗನ್ನಾಥ್ ಮತ್ತು ರೇಣುಕಾ ದಂಪತಿಯ ಪುತ್ರಿ ವಿನುತಾ ಅವರು 14 ಸಹೋದ್ಯೋಗಿಗಳೊಂದಿಗೆ ಎರಡು ದಿನಗಳ ಪ್ರವಾಸಕ್ಕಾಗಿ ಇಲ್ಲಿಗೆ ಬಂದು ಹೋಂ ಸ್ಟೇದಲ್ಲಿ ತಂಗಿದ್ದರು. ಕೇರಳಂ ದೇವಸ್ಥಾನಕ್ಕೆ ತೆರಳಲು ಭಾನುವಾರ ಬೆಳಗ್ಗೆ ಸ್ನಾನಕ್ಕೆ ಹೋಗಿದ್ದಾಗ ಘಟನೆ ನಡೆದಿದೆ.

ನಕಲಿ ಅಂಕಪಟ್ಟಿ ಸೃಷ್ಟಿಸುವ ಜಾಲ ಪತ್ತೆ

ಹಣ ಪಡೆದು ಕೊರಿಯರ್ ಮೂಲಕ ಅಭ್ಯರ್ಥಿಗಳ ವಿಳಾಸಕ್ಕೆ ರವಾನೆ

● ಆದಿತ್ಯ ಕೆ.ಎ.

ಬೆಂಗಳೂರು: ನಕಲಿ ಅಂಕಪಟ್ಟಿ ಸೃಷ್ಟಿಸಿ, ಅಭ್ಯರ್ಥಿಗಳಿಗೆ ಮಾರಾಟ ಮಾಡುತ್ತಿರುವ ಮತ್ತೊಂದು ಬೃಹತ್ ಜಾಲವು ನಗರದಲ್ಲಿ ಪತ್ತೆಯಾಗಿದೆ.

ಈ ಜಾಲವನ್ನು ಪತ್ತೆ ಹಚ್ಚಿರುವ ಸಿಸಿಬಿ ವಿಶೇಷ ವಿಚಾರಣಾ ದಳದ ಪೊಲೀಸರು, ತನಿಖೆಯನ್ನು ಚುರುಕುಗೊಳಿಸಿದ್ದಾರೆ.

ಸಿಸಿಬಿಯ ಇನ್‌ಸ್ಪೆಕ್ಟರ್ ಎಸ್.ಆರ್.ವೀರೇಂದ್ರ ಪ್ರಸಾದ್ ಅವರು ನೀಡಿದ ದೂರಿನ ಮೇರೆಗೆ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ವಿವಿಧ ಸೆಕ್ಷನ್‌ಗಳಡಿ ಕೋರಮಂಗಲದ 'ಡಿಜಿಟಲ್ ಎಜುಕೇಷನ್ ಸಂಸ್ಥೆ'ಯ ಮಾಲೀಕ ರಾಜಾ ರೆಡ್ಡಿ ಹಾಗೂ ನಕಲಿ ಅಂಕಪಟ್ಟಿ ಮಾರಾಟ ಮಾಡುತ್ತಿದ್ದ ಆರ್ಯನ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ಆರೋಪಿಗಳ ಪತ್ತೆಗೆ ಸಿಸಿಬಿ ಪೊಲೀಸರು ಶೋಧ ನಡೆಸುತ್ತಿದ್ದಾರೆ ಎಂದು ಗೊತ್ತಾಗಿದೆ.

'ನಕಲಿ ಅಂಕಪಟ್ಟಿಯನ್ನು ಆರೋಪಿಗಳು ತಲಾ ₹30 ಸಾವಿರದಿಂದ ₹50 ಸಾವಿರದ ವರೆಗೆ ಮಾರಾಟ ಮಾಡಿರುವುದು ತನಿಖೆಯಿಂದ ಪತ್ತೆಯಾಗಿದೆ' ಎಂದು ಮೂಲಗಳು ಹೇಳಿವೆ.

'ಕೋರಮಂಗಲದ ಕಟ್ಟಡವೊಂದನ್ನು ಬಾಡಿಗೆ ಪಡೆದುಕೊಂಡಿದ್ದ ರಾಜಾರೆಡ್ಡಿ ಅಲ್ಲಿ 'ಡಿಜಿಟಲ್ ಎಜುಕೇಷನ್ ಸಂಸ್ಥೆ' ಸ್ಥಾಪಿಸಿದ್ದರು. ಆರ್ಯನ್ ಆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು. ಆರಂಭದಲ್ಲಿ ವಿದ್ಯಾರ್ಥಿ ಗಳ ಮೊಬೈಲ್ ಸಂಖ್ಯೆಯನ್ನು ಪಡೆದುಕೊಳ್ಳಲಾಗುತ್ತಿತ್ತು. ನಂತರ ಸಂಸ್ಥೆಯ ಉದ್ಯೋಗಿಗಳ ಮೂಲಕ ರಾಜಾರೆಡ್ಡಿ ವಿದ್ಯಾರ್ಥಿಗಳಿಗೆ ಕರೆ ಮಾಡಿಸುತ್ತಿದ್ದರು. ಫ್ಲಾರೆನ್ಸ್, ಕಲಾನಿಕೇತನ್, ಎಂ.ವಿ. ಜೆ, ಟಿಪ್ಪು ಸುಲ್ತಾನ್ ಹಾಗೂ ವಿದ್ಯಾರಣ್ಯ ಕಾಲೇಜುಗಳಿಗೆ ಪ್ರವೇಶ ಕಲ್ಪಿಸುತ್ತೇವೆ ಎಂಬುದಾಗಿ ವಿದ್ಯಾರ್ಥಿಗಳನ್ನು ನಂಬಿಸುತ್ತಿದ್ದರು' ಎಂಬುದು ತನಿಖೆಯಿಂದ ಗೊತ್ತಾಗಿದೆ.

ಯಾರಿಗೆಲ್ಲಾ ಮಾರಾಟ?: 10ನೇ ತರಗತಿ, ಪಿಯು ಹಾಗೂ ಇತರೆ ವ್ಯಾಸಂಗವನ್ನು ಮಾಡದೇ ನೇರವಾಗಿ ಪದವಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಂದ ಆರೋಪಿಗಳು ಹಣ ಪಡೆದುಕೊಳ್ಳುತ್ತಿದ್ದರು. ಬಳಿಕ ಆರ್ಯನ್ ಮೂಲಕ ನಕಲಿ ಅಂಕಪಟ್ಟಿಗಳನ್ನು ಸೃಷ್ಟಿಸಿ, ಆ ಅಂಕಪಟ್ಟಿಗಳನ್ನು ಡಿಟಿಡಿಸಿ ಕೊರಿಯರ್ ಮೂಲಕ ವಿದ್ಯಾರ್ಥಿಗಳ ವಿಳಾಸಕ್ಕೆ ರವಾನೆ ಮಾಡುತ್ತಿದ್ದರು.

'ಇದುವರೆಗೂ ನಡೆದ ತನಿಖೆಯಿಂದ 2025-26ನೇ ಸಾಲಿನಲ್ಲಿ 50ಕ್ಕೂ ಹೆಚ್ಚು ನಕಲಿ ಅಂಕಪಟ್ಟಿಗಳನ್ನು ಮಾರಾಟ ಮಾಡಿರುವುದು ಪತ್ತೆಯಾಗಿದೆ. ನಕಲಿ ಅಂಕಪಟ್ಟಿಗಳನ್ನು ಖಾಸಗಿ ಹಾಗೂ ಸರ್ಕಾರಿ ಇಲಾಖೆಗೆ ಅಭ್ಯರ್ಥಿಗಳು ನೀಡಿ ಉದ್ಯೋಗ ಗಿಟ್ಟಿಸಿಕೊಳ್ಳುತ್ತಿದ್ದರು. ಇದೇ ರೀತಿ ಇನ್ನೂ ಎಷ್ಟು ಮಂದಿಗೆ ನಕಲಿ ಅಂಕಪಟ್ಟಿಗಳನ್ನು ಮಾರಾಟ ಮಾಡಲಾಗಿದೆ ಎಂಬ ಬಗ್ಗೆ ತನಿಖೆ ಮುಂದುವರಿದಿದೆ. ಹೊರ ರಾಜ್ಯಕ್ಕೂ ಈ ಜಾಲ ವಿಸ್ತರಿಸಿದೆಯೇ ಎಂಬುದನ್ನು ಪತ್ತೆ ಹಚ್ಚಲಾಗುತ್ತಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.



ಮೂರನೇ ಪ್ರಕರಣ

ರಾಜ್ಯ ಮಾಧ್ಯಮಿಕ ಮತ್ತು ಉನ್ನತ ಶಿಕ್ಷಣ ಮಂಡಳಿ ಹೆಸರಿನಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯು ನಕಲಿ ಅಂಕಪಟ್ಟಿ ತಯಾರಿಸಿ, ಮಾರಾಟ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಕಳೆದ ವರ್ಷದ ಮಾರ್ಚ್‌ನಲ್ಲಿ ಸಿಸಿಬಿ ಪೊಲೀಸರು ಬಂಧಿಸಿದ್ದರು. ಬಂಧಿತರು 350ಕ್ಕೂ ಹೆಚ್ಚು ನಕಲಿ ಅಂಕಪಟ್ಟಿಗಳನ್ನು ವಿತರಣೆ ಮಾಡಿರುವುದು ತನಿಖೆಯಿಂದ ಗೊತ್ತಾಗಿತ್ತು.

ಅದಾದ ಮೇಲೆ ನಡೆದ ಕಾರ್ಯಾಚರಣೆಯಲ್ಲಿ ನಕಲಿ ಅಂಕಪಟ್ಟಿ ಹಾಗೂ ದಾಖಲಾತಿ ಸಲ್ಲಿಸಿ ಜಲ ಸಂಪನ್ಮೂಲ ಇಲಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕ ಹುದ್ದೆ ಪಡೆಯಲು ಯತ್ನಿಸಿದ್ದ ಪ್ರಕರಣವೊಂದು ಪತ್ತೆ ಆಗಿತ್ತು. ಆ ಪ್ರಕರಣದಲ್ಲಿ 37 ಅಭ್ಯರ್ಥಿಗಳು ಹಾಗೂ ಅವರಿಗೆ ಸಹಕರಿಸಿದ್ದ ಮೂವರು ಸರ್ಕಾರಿ ನೌಕರರೂ ಸೇರಿ 11 ಮಂದಿ ಮಧ್ಯವರ್ತಿಗಳನ್ನು ಸಿಸಿಬಿ ವಿಶೇಷ ವಿಚಾರಣಾ ದಳದ ಪೊಲೀಸರೇ ಬಂಧಿಸಿದ್ದರು.

ಇನ್ನು ರಾಜಾಜಿನಗರದ ನ್ಯೂ ಕ್ವೆಸ್ಟ್ ಟೆಕ್ನಾಲಜಿ, ಜೆ.ಪಿ ನಗರದ ಸಿಸ್ಟಂ ಕ್ವೆಸ್ಟ್, ದಾಸರಹಳ್ಳಿಯ ವಿಶ್ವಜ್ಯೋತಿ ಕಾಲೇಜು, ವಿಜಯನಗರದ ಬೆನಕಾ ಕರಸ್ಪಾಂಡೆನ್ಸ್ ಕಾಲೇಜಿನ ಮೇಲೂ ಈ ಹಿಂದೆ ದಾಳಿ ನಡೆಸಿ 6,846 ನಕಲಿ ಅಂಕಪಟ್ಟಿ ಜಪ್ತಿ ಮಾಡಲಾಗಿತ್ತು. ಇದೀಗ ಅಂತಹದ್ದೇ ಬೃಹತ್ ಅಕ್ರಮ ಬೆಂಗಳೂರಿನಲ್ಲಿ ಪತ್ತೆ ಆಗಿದೆ. ಎಲ್ಲ ಆಯಾಮದಲ್ಲೂ ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

₹25 ಲಕ್ಷ ಸಂಗ್ರಹ

'ಆರೋಪಿಗಳು, ಅಭ್ಯರ್ಥಿಗಳಿಂದ ಅಂದಾಜು ₹25 ಲಕ್ಷ ಸಂಗ್ರಹಿಸಿದ್ದಾರೆ. ಹಣ ಜಪ್ತಿ ಮಾಡಿಕೊಳ್ಳುವ ಪ್ರಕ್ರಿಯೆ ಆರಂಭಿಸಿದ್ದೇವೆ. ನಕಲಿ ಅಂಕಪಟ್ಟಿ ಜಾಲದಿಂದಾಗಿ ಪ್ರಾಮಾಣಿಕವಾಗಿ ಕಾಲೇಜಿಗೆ ತೆರಳಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಮೋಸ ಆಗುತ್ತಿತ್ತು. ಕೆಲವು ದಿನಗಳ ಹಿಂದೆ ಖಚಿತ ಮಾಹಿತಿ ಬಂದಿತ್ತು. ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರಿಗೆ ತಿಳಿಸಲಾಯಿತು. ಕಮಿಷನರ್ ಆದೇಶದಂತೆ ಕಾರ್ಯಾಚರಣೆ ನಡೆಸಿ, ಜಾಲವನ್ನು ಪತ್ತೆ ಹಚ್ಚಲಾಯಿತು' ಎಂದು ಸಿಸಿಬಿ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಸಂವಾದಕ್ಕಿಂತ ವಾಗ್ವಾದ ಹೆಚ್ಚು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿನ ದಿನಗಳಲ್ಲಿ ಸಂವಾದಗಳಿಗಿಂತ ವಾಗ್ವಾದಗಳೇ ಜಾಸ್ತಿಯಾಗುತ್ತಿವೆ. ವಾಗ್ವಾದಗಳು ಬೀದಿ ಜಗಳವಾಗಬಾರದು. ಬದಲಿಗೆ ಅವು ವೈಚಾರಿಕ ಮುಖಾಮುಖಿಯಾಗಬೇಕು ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಬೆಂಗಳೂರು ಆರ್ಟ್ ಫೌಂಡೇಷನ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಡಾ.ಅ.ಲ.ನರಸಿಂಹನ್ ಮತ್ತು ಎನ್.ಮರಿಶಾಮಾಚಾರ್ ಕುರಿತು ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿ, ವಾಗ್ವಾದಗಳು ಸಂವಾದಗಳಾಗಿ ರೂಪಾಂತರಗೊಳ್ಳಬೇಕಾದಕಾಲಘಟ್ಟದಲ್ಲಿದ್ದೇವೆ ಎಂದರು.

ಕಲೆಯು ಕೇವಲ ಒಂದು ನಿರ್ದಿಷ್ಟ ಕಾಲಕ್ಕೆ ಸೀಮಿತವಾಗಬಾರದು, ಅದು ಕಾಲದೊಳಗಿದ್ದುಕೊಂಡೇ ಕಾಲವನ್ನು ಮೀರಿ ನಿಲ್ಲುವ ಶಕ್ತಿಯನ್ನು ಹೊಂದಿರಬೇಕು. ಕಲೆ ಎನ್ನುವುದು ಎರಡು ಕಾಲಗಳ ನಡುವೆ ನಡೆಯುವ ಒಂದು ಕಾಲಾನುಸಂಧಾನ. ಇದರ ಮುಖಾಂತರವೇ ಅಭಿವ್ಯಕ್ತಿ ಸಾಧಿಸಲು ಸಾಧ್ಯ ಎಂದರು.

> **ಅಪರೂಪದ ಕಲಾಕೃತಿ, ದಾಖಲೆಗಳು, ಪುಸ್ತಕಗಳನ್ನು ಸಂರಕ್ಷಿಸುವ ಕೆಲಸವನ್ನು ಸರ್ಕಾರ ಮಾಡಬೇಕು. ಅಮೂಲ್ಯವಾದ ವಸ್ತುಗಳನ್ನು ವಿದೇಶಿಯರು ಕಡಿಮೆ ಬೆಲೆಗೆ ಕೊಂಡು ಹೋಗುತ್ತಿದ್ದಾರೆ**
> **ಟಿ.ಗೋವಿಂದರಾಜ್,** ಜಾನಪದ ತಜ್ಞ

ನರಸಿಂಹನ್ ಅವರು ಚಿತ್ರಕಲೆಯ ಇತಿಹಾಸವನ್ನು ಪುಸ್ತಕಗಳ ಮೂಲಕ ಪರಿಚಯಿಸಿದರೆ, ಮರಿಶಾಮಾಚಾರ್ ಅವರು ಚಿತ್ರಕಲಾವಿದರಾಗಿ ಹಾಗೂ ಲೇಖಕರಾಗಿ ಇತಿಹಾಸ ಕಟ್ಟುವ ಕೆಲಸ ಮಾಡಿದ್ದಾರೆ ಎಂದರು.

'ಇತಿಹಾಸ ಪ್ರಜ್ಞೆ ಇಲ್ಲದಿದ್ದರೆ ಸಂಸ್ಕೃತಿ, ಕಲೆ ಹಾಗೂ ಸಾಹಿತ್ಯ ತನ್ನ ಚಲನಶೀಲತೆಯನ್ನು ಕಳೆದುಕೊಳ್ಳುತ್ತವೆ. ಭೂತಕಾಲ, ವರ್ತಮಾನ ಮತ್ತು ಭವಿಷ್ಯತ್ತಿನ ನಡುವೆ ಯಾವುದೇ ಕಂದಕಗಳು ಇರಬಾರದು. ಇಂದಿನ ದಿನಗಳಲ್ಲಿ ಸಮಾಜದಲ್ಲಿ ಕಟ್ಟುವ ಕೆಲಸಗಳಿಗಿಂತ ಕೆಡವುವ ಕೆಲಸಗಳೇ ಹೆಚ್ಚಾಗುತ್ತಿರುವುದು ವಿಷಾದನೀಯ ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ಲಲಿತ ಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ಸಿ.ಚಂದ್ರಶೇಖರ್ ಮಾತನಾಡಿ, 'ಹಿಂದಿನ ಕಾಲದಲ್ಲಿ ಕಲೆಯ ಆಳವನ್ನು ಅರಿತು ಬರೆಯುವ ಪತ್ರಿಕಾ ಬರಹಗಾರರ ಸಂಖ್ಯೆ ವಿರಳವಾಗಿತ್ತು. ಬಿ.ವಿ.ಕೆ.ಶಾಸ್ತ್ರಿ (ಮುರಳಿ), ಎಸ್.ಎ. ಚಂದ್ರಶೇಖರ್ ಹಾಗೂ ಎಸ್.ಎನ್. ಸುರೇಶ್ ಅವರಂತಹ ಬೆರಳಣಿಕೆಯಷ್ಟು ಜನ ಮಾತ್ರ ಕಲೆಯ ಕುರಿತು ಗಂಭೀರವಾಗಿ ಬರೆಯುತ್ತಿದ್ದರು. ಉಳಿದಂತೆ ಬಹುತೇಕರು ಕೇವಲ ಪತ್ರಿಕೆಗಳ ಮುಖಪುಟ ಅಲಂಕರಿಸಲು ಹಾಗೂ ವಾಣಿಜ್ಯ ಉದ್ದೇಶದ ಮಾರಾಟದ ವಸ್ತುವಾಗಿ ಕಲೆಯನ್ನು ಬಳಸಿಕೊಂಡರೇ ಹೊರತು, ಕಲೆಯ ಆಳವಾದ ಅಧ್ಯಯನ ನಡೆಸಿದವರು ಬಹಳ ಕಡಿಮೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕರ್ನಾಟಕ ಲಲಿತ ಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ಡಾ.ಎಂ.ಎಸ್.ಮೂರ್ತಿ, ಬೆಂಗಳೂರು ಆರ್ಟ್ ಫೌಂಡೇಷನ್ ಕಾರ್ಯದರ್ಶಿ ಓ.ವೆಂಕಟೇಶ್ ಸೇರಿ ಮತ್ತಿತರರು ಉಪಸ್ಥಿತರಿದ್ದರು.



ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ಮಾವು– ಹಲಸು ಮೇಳಕ್ಕೆ ಭಾನುವಾರ ಭೇಟಿ ನೀಡಿದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಬೆಳೆಗಾರರ ಸಮಸ್ಯೆಗಳನ್ನು ಆಲಿಸಿದರು. ತೋಟಗಾರಿಕೆ ಇಲಾಖೆ ಹೆಚ್ಚುವರಿ ನಿರ್ದೇಶಕ ಎಂ.ಜಗದೀಶ್, ಕೋಲಾರ ಮಾವು ಬೆಳೆಗಾರರ ಸಂಘದ ಅಧ್ಯಕ್ಷ ಚಿನ್ನಪ್ಪ ರೆಡ್ಡಿ ಪಾಲ್ಗೊಂಡಿದ್ದರು

ಸುದ್ದಿ 2 ನಿಮಿಷ

ಮಳೆ: 'ಅಸ್ತ್ರಂ' ಆ್ಯಪ್ ಬಳಸಲು ಸಂಚಾರ ಪೊಲೀಸರ ಸಲಹೆ

ಬೆಂಗಳೂರು: ನಗರದಲ್ಲಿ ಜೂನ್ 8 ಹಾಗೂ 9ರಂದು ಹೆಚ್ಚಿನ ಮಳೆ ಆಗುವ ಸಾಧ್ಯತೆಯಿದ್ದು, ಆ ಸಮಯದಲ್ಲಿ ಅನಾವಶ್ಯಕ ಪ್ರಯಾಣವನ್ನು ತಪ್ಪಿಸಲು ಹಾಗೂ ಸುಗಮ ಸಂಚಾರ, ಇತರೆ ನೈಜ ಮಾಹಿತಿಗಾಗಿ 'ಬಿಟಿಪಿ ಅಸ್ತ್ರಂ' ಆ್ಯಪ್ ಹಾಗೂ ಬಿಟಿಪಿ ಸಾಮಾಜಿಕ ಜಾಲತಾಣ ಬಳಸುವಂತೆ ಸಂಚಾರ ಪೊಲೀಸರು ಸಲಹೆ ಮಾಡಿದ್ದಾರೆ.

ನಗರದಲ್ಲಿ ಎರಡು ದಿನ ಹೆಚ್ಚಿನ ಮಳೆ ಆಗಲಿದೆ ಎಂದು ರಾಜ್ಯ ಪ್ರಕೃತಿ ವಿಕೋಪ ಉಸ್ತುವಾರಿ ಕೇಂದ್ರವು ಮುನ್ಸೂಚನೆ ನೀಡಿದೆ. ಸುರಕ್ಷತೆ ಹಾಗೂ ಸುಗಮ ಸಂಚಾರದ ದೃಷ್ಟಿಯಿಂದ ಮಳೆಯ ನೀರು ನಿಂತಿರುವ ಪ್ರದೇಶದಲ್ಲಿ ಸಾರ್ವಜನಿಕರು ಎಚ್ಚರಿಕೆಯಿಂದ ವಾಹನ ಚಾಲನೆ ಮಾಡಬೇಕು ಎಂದು ಕೋರಿದ್ದಾರೆ. ಮಳೆ ಬಂದಾಗ ಮರಗಳ ಆಶ್ರಯ ಪಡೆಯುವುದನ್ನು ತಪ್ಪಿಸಬೇಕು. ಅಲ್ಲದೆ ರಕ್ಷಣೆ ಪಡೆಯಲು ಅಂಡರ್‌ಪಾಸ್‌ಗಳಲ್ಲಿ ನಿಲ್ಲುವುದರಿಂದ ಇತರೆ ವಾಹನಗಳ ಸುಗಮ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ. ಇದನ್ನು ತಪ್ಪಿಸಿ, ಸಂಚಾರಕ್ಕೆ ಅಡಚಣೆ ಆಗದಂತೆ ನೋಡಿಕೊಳ್ಳಬೇಕು ಎಂದು ಹೇಳಿದ್ದಾರೆ.



ಜೈಲು ಸಿಬ್ಬಂದಿ ಮೇಲೆ ಹಲ್ಲೆ ಯತ್ನ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಸಿಬ್ಬಂದಿ ಮೇಲೆ ಬಾಂಬ್ ಸ್ಫೋಟ ಪ್ರಕರಣಗಳ ಶಂಕಿತ ಉಗ್ರರು ಹಲ್ಲೆಗೆ ಯತ್ನಿಸಿರುವ ಘಟನೆ ನಡೆದಿದೆ. ಅಲ್ಲದೆ, ಶಂಕಿತ ಉಗ್ರರು ಘೋಷಣೆ ಕೂಗಿ ಪ್ರತಿಭಟನೆ ಸಹ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ. ನಾಲ್ಕು ದಿನಗಳ ಹಿಂದೆ ಜೈಲಿನ ಆಸ್ಪತ್ರೆಯಲ್ಲಿ ಈ ಘಟನೆ ನಡೆದಿದೆ.

ಸ್ಫೋಟ ಪ್ರಕರಣದ ಮೂವರು ಕೈದಿಗಳು ಚಿಕಿತ್ಸೆಗಾಗಿ ಜೈಲು ಆಸ್ಪತ್ರೆಗೆ ಬಂದಿದ್ದರು. ಈ ವೇಳೆ ನಿಯಮ ಉಲ್ಲಂಘಿಸಿದ್ದ ಆರೋಪದ ಮೇರೆಗೆ ಜೈಲು ವಾರ್ಡರ್ ಪ್ರಶ್ನಿಸಿದ್ದರು. ಆಗ ಕೋಪಗೊಂಡ ಕೈದಿಗಳು, ವಾರ್ಡರ್ ಜತೆ ವಾಗ್ವಾದ ನಡೆಸಿ ಹಲ್ಲೆಗೂ ಯತ್ನಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಬೇರೆ ಕೈದಿಗಳ ಹೆಸರು ಬರೆಸಿ ನೀವು ಏಕೆ ಆಸ್ಪತ್ರೆಗೆ ಬಂದಿದ್ದೀರಿ? ಎಂದು ವಾರ್ಡರ್ ಪ್ರಶ್ನಿಸಿದಾಗ, ಕೈದಿಗಳು ಮತ್ತು ವಾರ್ಡರ್ ಮಧ್ಯೆ ತೀವ್ರ ಮಾತಿನ ಚಕಮಕಿ ಆರಂಭವಾಗಿತ್ತು. ಈ ವಿಚಾರ ತಿಳಿದಿದ್ದ 50ಕ್ಕೂ ಹೆಚ್ಚು ಕೈದಿಗಳು ಒಂದೆಡೆ ಜಮಾಯಿಸಿ, ಘೋಷಣೆ ಕೂಗುತ್ತಾ ಪ್ರತಿಭಟನೆ ಆರಂಭಿಸಿದ್ದರು ಎಂದು ಮೂಲಗಳು ಹೇಳಿವೆ. ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಜೈಲಿನ ಹಿರಿಯ ಅಧಿಕಾರಿಗಳು, ಪರಪ್ಪನ ಅಗ್ರಹಾರ ಠಾಣೆಯ ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು ಪರಿಸ್ಥಿತಿ ನಿಯಂತ್ರಿಸಿದ್ದಾರೆ. ಘಟನೆ ಸಂಬಂಧ ಜೈಲು ಅಧಿಕಾರಿಗಳು ಯಾವುದೇ ದೂರು ನೀಡಿಲ್ಲ. ದೂರು ನೀಡಿದರೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಪೊಲೀಸ್ ಮೂಲಗಳು ಹೇಳಿವೆ.


ಕ್ವಾರಿಯಲ್ಲಿ ಬಿದ್ದು ಮೂವರು ಸಾವು

ವಡಗೇರಾ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ಬಸವನಗರ ಗ್ರಾಮದ ಮರಮ್ ಕ್ವಾರಿಯ ಗುಂಡಿಯಲ್ಲಿ ಕಾಲುಜಾರಿ ಬಿದ್ದು ನೀರಿನಲ್ಲಿ ಮುಳುಗಿ ಭಾನುವಾರ ಸಂಜೆ ಮೂವರು ಮೃತಪಟ್ಟಿದ್ದಾರೆ. ಗುಂಡಮ್ಮ (35), ಸುಜಾತಾ (9) ಶಿವಲೀಲಾ (ಶಿವಕಾಂತಮ್ಮ) (10) ಮೃತರು ಎಂದು ತಿಳಿದು ಬಂದಿದೆ.

ಘಟನೆಯ ವಿವರ: ಗ್ರಾಮದಲ್ಲಿ ಸಮರ್ಪಕವಾಗಿ ನೀರು ಬಾರದ ಕಾರಣ ಭಾನುವಾರ ಸಂಜೆ 4 ಗಂಟೆ ಸುಮಾರಿಗೆ ಬಟ್ಟೆ ತೊಳೆಯಲೆಂದು ಗುಂಡಮ್ಮ, ಸುಜಾತಾ ಹಾಗೂ ಶಿವಲೀಲಾ ಕ್ವಾರಿ ಗುಂಡಿಗೆ ಹೋಗಿದ್ದಾರೆ. ಬಟ್ಟೆ ತೊಳೆಯುವಾಗ ಸುಜಾತಾ ಮತ್ತು ಶಿವಲೀಲಾ ಕಾಲುಜಾರಿ ಗುಂಡಿಯಲ್ಲಿ ಬಿದ್ದಿದ್ದಾರೆ. ಗುಂಡಮ್ಮ ನೀರಿಗೆ ಜಿಗಿದು ಇಬ್ಬರು ಬಾಲಕಿಯರನ್ನು ರಕ್ಷಿಸಲು ಪ್ರಯತ್ನಿಸಿದ್ದಾರೆ. ಸಾಧ್ಯವಾಗದೇ ಮೂವರೂ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಈ ಕುರಿತು ವಡಗೇರಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ

ನಿಧನ ವಾರ್ತೆ

ಪ್ರಭಾಕರ ಬೆಳವಾಡಿ



ಬೆಂಗಳೂರು: ಬಿಎಂಶ್ರೀ ಪ್ರತಿಷ್ಠಾನದ ಮಾಜಿ ಕೋಶಾಧಿಕಾರಿ, 'ಹೊಂಗನಸು' ವಾರ್ತಾಪತ್ರದ ಸಂಪಾದಕ ಪ್ರಭಾಕರ ಬೆಳವಾಡಿ (80) ವಯೋಸಹಜ ಅನಾರೋಗ್ಯದಿಂದ ಶನಿವಾರ ನಿಧನರಾದರು. ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಮೃತರ ಅಂತ್ಯಕ್ರಿಯೆ ಚಾಮರಾಜಪೇಟೆಯ ಟಿ.ಆರ್.ಮಿಲ್ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ವಿಕ್ರಮ್ ರಾಜು



ಬೆಂಗಳೂರು: ಮೈಸೂರಿನ ಕುವೆಂಪು ನಗರ ನಿವಾಸಿ ವಿ.ವಿಕ್ರಮ್ ರಾಜು (93) ಅವರು ವಯೋಸಹಜ ಅನಾರೋಗ್ಯದಿಂದ ಭಾನುವಾರ ನಿಧನರಾಗಿದ್ದಾರೆ. ಅವರಿಗೆ ಪತ್ನಿ ದ್ರಾಕ್ಷಯಿಣಿ, ಪುತ್ರ ಚರಣ್ ವಿಕ್ರಮ್ ರಾಜು, ಪುತ್ರಿ ಇದ್ದಾರೆ. 'ಡೆಕ್ಕನ್ ಹೆರಾಲ್ಡ್', 'ಪ್ರಜಾವಾಣಿ' ಪತ್ರಿಕೆಗಳ ಪ್ರಸರಣ ವಿಭಾಗದಲ್ಲಿ 1962 ರಿಂದ 1995ರವರೆಗೆ ಅವರು ಕೆಲಸ ಮಾಡಿದ್ದರು. ಸಂಜೆ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.



ಪುರುಷರ ರಾಜ್ಯಮಟ್ಟದ ಹೊನಲುಬೆಳಕಿನ ಆಹ್ವಾನಿತ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಪ್ರಶಸ್ತಿ ಗೆದ್ದ ಯಂಗ್ ಓರಿಯನ್ಸ್ ತಂಡಕ್ಕೆ ಫಿಬಾ ಏಷ್ಯಾ ಮತ್ತು ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಕೆ. ಗೋವಿಂದರಾಜ್ ಟ್ರೋಫಿ ಹಸ್ತಾಂತರಿಸಿದರು

ಯಂಗ್ ಓರಿಯನ್ಸ್ ಚಾಂಪಿಯನ್

ಬ್ಯಾಸ್ಕೆಟ್‌ಬಾಲ್

ಬೆಂಗಳೂರು: ಸಾಂಘಿಕ ಆಟ ಪ್ರದರ್ಶಿಸಿದ ಯಂಗ್ ಓರಿಯನ್ಸ್ ಎಸ್.ಸಿ ತಂಡವು ಪುರುಷರ ರಾಜ್ಯಮಟ್ಟದ ಹೊನಲು ಬೆಳಕಿನ ಆಹ್ವಾನಿತ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಪಾರಮ್ಯ ಮೆರೆದು ಪ್ರೊ. ಎನ್.ಸಿ. ಪರಪ್ಪ ಸ್ಮಾರಕ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು.

ದೇವಾಂಗ ಯೂನಿಯನ್‌ನ ಕೋರ್ಟ್‌ನಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಯಂಗ್ ಓರಿಯನ್ಸ್ ತಂಡವು 84–71ರಿಂದ ಜಿಎಸ್‌ಟಿ ಮತ್ತು ಕಸ್ಟಮ್ಸ್ ತಂಡವನ್ನು ಮಣಿಸಿತು. ಓರಿಯನ್ಸ್ ತಂಡದ ಸುಮಂತ್ 20 ಮತ್ತು ಅಭಿಷೇಕ್ ಗೌಡ 16 ಅಂಕ ಗಳಿಸಿ ಗೆಲುವಿನಲ್ಲಿ ಮಿಂಚಿದರು. ಜಿಎಸ್‌ಟಿ ತಂಡದ ಧೀರಜ್ ರೆಡ್ಡಿ 23 ಮತ್ತು ಪ್ರತ್ಯಾಂಶು ತೋಮರ್ 22 ಪಾಯಿಂಟ್ಸ್ ಕಲೆಹಾಕಿದರು.

ಇದಕ್ಕೂ ಮೊದಲು ಸೆಮಿಫೈನಲ್ ಪಂದ್ಯಗಳಲ್ಲಿ ಯಂಗ್ ಓರಿಯನ್ಸ್ 80–72ರಿಂದ ಡಿವೈಇಎಸ್ ಬೆಂಗಳೂರು ವಿರುದ್ಧ; ಜಿಎಸ್‌ಟಿ ಮತ್ತು ಕಸ್ಟಮ್ಸ್ ತಂಡವು 71–63ರಿಂದ ಬ್ಯಾಂಕ್ ಆಫ್ ಬರೋಡಾ ವಿರುದ್ಧ ಗೆಲುವು ಸಾಧಿಸಿತ್ತು.

ಚಾಂಪಿಯನ್ ಓರಿಯನ್ಸ್ ತಂಡಕ್ಕೆ ₹75 ಸಾವಿರ ಮತ್ತು ರನ್ನರ್ಸ್ ಅಪ್ ಜಿಎಸ್‌ಟಿ ತಂಡಕ್ಕೆ ₹50 ಸಾವಿರ ನಗದು ಬಹುಮಾನ ಲಭಿಸಿತು. ಫಿಬಾ ಏಷ್ಯಾ ಮತ್ತು ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಕೆ. ಗೋವಿಂದರಾಜ್, ದೇವಾಂಗ ಯೂನಿಯನ್ ಅಧ್ಯಕ್ಷ ಜಯರಾಮ್, ಕಾರ್ಯದರ್ಶಿ ವರದರಾಜು ಬಹುಮಾನ ವಿತರಿಸಿದರು.

'ವೃತ್ತಿ ಪರಿಪೂರ್ಣತೆ ರೂಢಿಸಿಕೊಳ್ಳಿ'

ನೆಲಮಂಗಲ: ಪ್ರಯೋಗಾಲಯದ ತಪ್ಪು ವರದಿಗಳಿಂದ ರೋಗಿಗೆ ತೊಂದರೆ ಆಗುವುದರಿಂದ ಅರೆ ವೈದ್ಯಕೀಯ ಸಿಬ್ಬಂದಿ ವೃತ್ತಿ ಪರಿಪೂರ್ಣತೆಯನ್ನು ರೂಢಿಸಿಕೊಳ್ಳಬೇಕು ಎಂದು ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಯಶೋಧಾ ದರ್ಶನ್ ತಿಳಿಸಿದರು.

ಹರ್ಷ ಸಮೂಹ ಶಿಕ್ಷಣ ಸಂಸ್ಥೆಯು ಆಯೋಜಿಸಿದ್ದ ನರ್ಸಿಂಗ್ ಫಿಸಿಯೋಥೆರಪಿ, ಅರೆವೈದ್ಯಕೀಯ, ವಿವಿಧ ಪ್ರಯೋಗಾಲಯದ ಪದವೀಧರರಿಗೆ ಪ್ರಮಾಣ ವಚನ ಬೋಧಿಸಿ ಮಾತನಾಡಿದರು.

ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಮುಖ್ಯಸ್ಥ ಡಾ. ರಾಮಚಂದ್ರ ಶೆಟ್ಟಿ ಹಾಗೂ ನರ್ಸಿಂಗ್ ಕೌನ್ಸಿಲ್ ರಿಜಿಸ್ಟ್ರಾರ್ ಶ್ರೀಕಾಂತ್ ಫುಲಾರಿ ಅವರು ಚಿನ್ನದ ಪದಕ ಪುರಸ್ಕೃತರಾದ ಅಂಜಲಿದೇವಿ, ವಿವೇಕ ರೆಡ್ಡಿ, ಮೋನಿಕಾ, ಸುತಾರ್, ನಿಖಿತಾ ಅವರನ್ನು ಪುರಸ್ಕರಿಸಿದರು.

ಫಿಸಿಯೋಥೆರಪಿ ರಾಷ್ಟ್ರೀಯ ಸಂಘದ ಅಧ್ಯಕ್ಷೆ ಡಾ.ರುಚಿ ವರ್ಷಿಣಿ, ಹರ್ಷ ಸಮೂಹದ ಅಧ್ಯಕ್ಷ ಡಾ.ಎಸ್.ಶಿವಕುಮಾರ್, ಉಪಾಧ್ಯಕ್ಷೆ ಗಿರಿಜಾ, ನಿರ್ದೇಶಕ ಡಾ.ವಸಂತಕುಮಾರ್, ಕಾರ್ಯದರ್ಶಿ ಹರ್ಷ, ಯಶಸ್ ಇದ್ದರು.



ನೆಲಮಂಗಲ ಹರ್ಷ ಸಮೂಹ ಶಿಕ್ಷಣ ಸಂಸ್ಥೆಯು ಆಯೋಜಿಸಿದ್ದ ನರ್ಸಿಂಗ್ ಫಿಜಿಯೋಥೆರಪಿ, ಅರೆವೈದ್ಯಕೀಯ, ವಿವಿಧ ಪ್ರಯೋಗಾಲಯದ ಪದವೀಧರರಿಗೆ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಮುಖ್ಯಸ್ಥ ಡಾ. ರಾಮಚಂದ್ರ ಶೆಟ್ಟಿ ಪ್ರಮಾಣ ಪತ್ರ ನೀಡಿದರು. ಉಪಾಧ್ಯಕ್ಷೆ ಗಿರಿಜಾ, ಅಧ್ಯಕ್ಷ ಎಸ್.ಶಿವಕುಮಾರ್, ನರ್ಸಿಂಗ್ ಕೌನ್ಸಿಲ್ ರಿಜಿಸ್ಟ್ರಾರ್ ಶ್ರೀಕಾಂತ್ ಫುಲಾರಿ, ನಿರ್ದೇಶಕ ಡಾ.ವಸಂತಕುಮಾರ್ ಇದ್ದಾರೆ

ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಚಾಲನೆ ● ನೂರಾರು ಮಂದಿ ಭಾಗಿ

ಕ್ಯಾನ್ಸರ್ ಅರಿವಿಗೆ ಜಾಗೃತಿ ಓಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕಂಠೀರವ ಕ್ರೀಡಾಂಗಣದ ಹೊರಾಂಗಣದಲ್ಲಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ಭಾನುವಾರ ಆಯೋಜಿಸಿದ್ದ 'ಕ್ಯಾನ್ಸರ್ ಮುಕ್ತ ಸಮಾಜಕ್ಕಾಗಿ ಜಾಗೃತಿ ಓಟ'ದಲ್ಲಿ ನೂರಾರು ಮಂದಿ ಪಾಲ್ಗೊಂಡರು.

ಕ್ರೀಡಾಂಗಣದಿಂದ ಆರಂಭವಾದ ಓಟವು ಕಸ್ತೂರಬಾ ರಸ್ತೆ, ಕಬ್ಬನ್‌ರಸ್ತೆ, ಜಿಪಿಒ, ಹೈಕೋರ್ಟ್, ಯುಬಿ ಸಿಟಿ ಮಾರ್ಗದಲ್ಲಿ ಸಾಗಿತು. 2 ಕಿ.ಮೀ, 5 ಕಿ.ಮೀ ಮತ್ತು 10 ಕಿ.ಮೀ ಓಟದಲ್ಲಿ ವಿದ್ಯಾರ್ಥಿಗಳು, ನಾಗರಿಕರು ಸ್ಪರ್ಧಿಸಿದ್ದರು. ಗೆದ್ದವರಿಗೆ ಬಹುಮಾನ, ಪ್ರಮಾಣ ಪತ್ರ ನೀಡಲಾಯಿತು.

ಓಟಕ್ಕೆ ಚಾಲನೆ ನೀಡಿದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲಾಭಿವೃದ್ಧಿ ಸಚಿವ ಡಾ.ಶರಣ ಪ್ರಕಾಶ ಪಾಟೀಲ, 'ರಾಜ್ಯದಲ್ಲಿ ಕ್ಯಾನ್ಸರ್ ನಿಯಂತ್ರಣಕ್ಕೆ ತಪಾಸಣಾ ಶಿಬಿರಗಳನ್ನು ನಡೆಸಲಾಗುತ್ತಿದೆ. ಜನರು ಆರೋಗ್ಯಕರ ಜೀವನ ಶೈಲಿ ಅಳವಡಿಸಿಕೊಳ್ಳಬೇಕು. ನಾಗರಿಕರಲ್ಲಿ ಅರಿವು ಮೂಡಿಸಲು ಪ್ರತಿ ಜಿಲ್ಲೆಗಳಲ್ಲೂ ಜಾಗೃತಿ ಓಟಗಳನ್ನು ನಡೆಸಲಾಗುತ್ತಿದೆ. ಆರೋಗ್ಯಪೂರ್ಣ ಸಮಾಜ ನಿರ್ಮಾಣ ಇಲಾಖೆಯ ಗುರಿಯಾಗಿದೆ' ಎಂದರು.

ಸಂಸ್ಥೆಯ ನಿರ್ದೇಶಕ ಡಾ.ಟಿ. ನವೀನ್ ಮಾತನಾಡಿ, 'ಕ್ಯಾನ್ಸರ್ ಬಂದರೆ ರೋಗಿಯ ಜೊತೆ ಇಡೀ ಕುಟುಂಬ ಮಾನಸಿಕವಾಗಿ ಕುಗ್ಗಿ ಹೋಗುತ್ತದೆ. ಆರಂಭದಲ್ಲಿಯೇ ಪತ್ತೆಯಾದರೆ ಚಿಕಿತ್ಸೆ ಮತ್ತು ಆರೈಕೆ ಸುಲಭ. ಹೀಗಾಗಿ, ಆತಂಕ ಪಡುವ ಅಗತ್ಯವಿಲ್ಲ. ಕಿದ್ವಾಯಿ ಸಂಸ್ಥೆಯು ರೋಗಿಗಳು ಮತ್ತು ಕುಟುಂಬಕ್ಕೆ ಆಶಾಕಿರಣವಾಗಿದೆ. ಸರ್ಕಾರದ ವಿವಿಧ ಯೋಜನೆಗಳಡಿ ಬಡವರಿಗೆ ಉಚಿತ ಚಿಕಿತ್ಸೆ ಲಭ್ಯವಿದೆ' ಎಂದು ಹೇಳಿದರು.

ಕ್ಯಾನ್ಸರ್ ಗೆದ್ದವರು ಅನುಭವ ಹಂಚಿಕೊಂಡರು. ಸಂಸ್ಥೆಯ ಸ್ತ್ರೀ ಗಂಥಿವಿಜ್ಞಾನ ವಿಭಾಗದ ಮುಖ್ಯಸ್ಥೆ ಡಾ.ಕೆ.ಶೋಭಾ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.



ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ಭಾನುವಾರ ಆಯೋಜಿಸಿದ್ದ ಕ್ಯಾನ್ಸರ್ ಜಾಗೃತಿ ಓಟಕ್ಕೆ ಸಚಿವ ಡಾ.ಶರಣ ಪ್ರಕಾಶ ಪಾಟೀಲ ಚಾಲನೆ ನೀಡಿದರು

ಮುಖ್ಯಾಂಶಗಳು

- ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಆಯೋಜನೆ
- 2, 5, 10 ಕಿ.ಮೀ ಓಟ; ಗೆದ್ದವರಿಗೆ ಬಹುಮಾನ ವಿತರಣೆ
- 'ಆರಂಭದಲ್ಲಿ ರೋಗ ಪತ್ತೆ; ಚಿಕಿತ್ಸೆ ಸುಲಭ'

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256



'ರಸ್ತೆ ದುರಸ್ತಿ ಮಾಡಿ'

ಕೆಂಗೇರಿ ಉಪನಗರದ ಶಿರ್ಕೆ ಸಮೀಪದ ಪ್ಲಾಟಿನಂ ಅಪಾರ್ಟ್‌ಮೆಂಟ್ ಎದುರು, ವಿಶ್ವೇಶ್ವರಯ್ಯ ಬಡಾವಣೆಯ 1ನೇ ಹಂತದ 2ನೇ ಕ್ರಾಸ್‌ನಲ್ಲಿನ ರಸ್ತೆಗಳು ಡಾಂಬರ್ ಇಲ್ಲದೇ ದುಃಸ್ಥಿತಿಯಿಂದ ಕೂಡಿವೆ. ವಾಹನ ಸವಾರರು ಅಪಘಾತದಲ್ಲಿ ಗಾಯಗೊಳ್ಳುತ್ತಿದ್ದಾರೆ. ಸಂಬಂಧಪಟ್ಟ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರಿಗಳು ಗಮನ ಹರಿಸಿ ದುರಸ್ತಿ ಮಾಡಬೇಕು. ಶಾಸಕ ಎಸ್.ಟಿ.ಸೋಮಶೇಖರ್ ಸ್ಥಳಕ್ಕೆ ಭೇಟಿ ನೀಡಿ ತ್ವರಿತವಾಗಿ ಕ್ರಮಕೈಗೊಳ್ಳಬೇಕು.

ಸಿ.ಎನ್.ಭಂಡಾರೆ, ಗೌರವಾಧ್ಯಕ್ಷ, ಹಿರಿಯ ನಾಗರಿಕರ ವೇದಿಕೆ, ಕೆಂಗೇರಿ



'ಕಸ ತೆರವು ಮಾಡಿ'

ಸಿ.ವಿ.ರಾಮನ್ ನಗರದ ಕೋಡಿಹಳ್ಳಿಯ 10ನೇ ಕ್ರಾಸ್ ರಸ್ತೆ ಬದಿಯಲ್ಲಿ ನಾಲ್ಕು ದಿನಗಳಿಂದ ಕಸ ಸಂಗ್ರಹವಾಗಿದ್ದು, ವಿಲೇವಾರಿ ಮಾಡಿಲ್ಲ. ಈ ಬಗ್ಗೆ ಘನ ತ್ಯಾಜ್ಯ ನಿರ್ವಹಣೆ ತಂಡಕ್ಕೆ ದೂರು ನೀಡಲಾಗಿದೆ. ಆದರೆ, ಇದುವರೆಗೆ ಯಾವ ಸಿಬ್ಬಂದಿಯೂ ಇತ್ತ ಸುಳಿದಿಲ್ಲ, ಕಸ ತೆರವು ಮಾಡಿಲ್ಲ.

ಸ್ಥಳೀಯ ನಿವಾಸಿ

'ಸಿಗ್ನಲ್‌ಗೆ ಬ್ಯಾನರ್ ಅಳವಡಿಕೆ'

ವಿಜಯನಗರದ ಮಾಗಡಿ ರಸ್ತೆ ಟೋಲ್‌ಗೇಟ್ ವೃತ್ತದಲ್ಲಿನ ಟ್ರಾಫಿಕ್ ಸಿಗ್ನಲ್‌ಗೆ ಬ್ಯಾನರ್ ಅಳವಡಿಸಿರುವುದರಿಂದ ವಾಹನ ಸವಾರರಿಗೆ ಸಿಗ್ನಲ್ ದೀಪಗಳು ಕಾಣುತ್ತಿಲ್ಲ. ಕಳೆದ ಒಂದು ತಿಂಗಳಿಂದ ಸಮಸ್ಯೆ ಎದುರಿಸುತ್ತಿದ್ದರೂ ಸಂಚಾರ ಪೊಲೀಸರು ಕ್ರಮ ಕೈಗೊಂಡಿಲ್ಲ. ಬೆಂಗಳೂರಿನ ಎಲ್ಲ ಕಡೆಯೂ ಫ್ಲೆಕ್ಸ್ ಬ್ಯಾನರ್ ಹಾವಳಿಯಿದ್ದು, ಅಪಘಾತಗಳಿಗೆ ಕಾರಣವಾಗುತ್ತಿವೆ.

ಬಿ.ಎಲ್.ರತ್ನಾಕರ್, ಸುಂಕದಕಟ್ಟೆ





'ಕಠಿಣ ಕ್ರಮ ಕೈಗೊಳ್ಳಿ'

ಸಂಪಂಗಿರಾಮನಗರದ ಬಡಾವಣೆಗಳ ರಸ್ತೆಯಲ್ಲಿ ಕಸ ವಿಲೇವಾರಿ ಆಗುತ್ತಿಲ್ಲ. ಅಕ್ಕ–ಪಕ್ಕದ ಜನರೂ ಎಲ್ಲೆಂದರಲ್ಲಿ ಕಸ ಬಿಸಾಡುತ್ತಿದ್ದು, ಪಾಲಿಕೆಯ ಸೂಚನೆಗಳನ್ನು ಪಾಲಿಸುತ್ತಿಲ್ಲ. ಇವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಪಕ್ಕದಲ್ಲಿಯೇ ಶಾಲೆಯಿದ್ದು, ಮಕ್ಕಳ ಆರೋಗ್ಯದ ಮೇಲೂ ಪರಿಣಾಮ ಬೀರುತ್ತಿದೆ.

ಮಹಾಲಿಂಗಪ್ಪ, ಸಂಪಂಗಿರಾಮನಗರ



'ಫುಟ್‌ಪಾತ್‌ನಲ್ಲಿ ಒಡೆದ ಗಾಜುಗಳು'

ಗೋವಿಂದರಾಜ ನಗರದ ಸುಮನಹಳ್ಳಿ ಜಂಕ್ಷನ್ ಮತ್ತು ಸತ್ವ ಅಪಾರ್ಟ್‌ಮೆಂಟ್ ಎದುರಿನ ರಸ್ತೆಯು ಸ್ವಚ್ಛ ಭಾರತ್ ಮಿಷನ್ ಹೇಗೆ ಕೆಲಸ ಮಾಡುತ್ತದೆ ಎಂಬುದರ ಪ್ರತಿಬಿಂಬವಾಗಿದೆ. ಫುಟ್‌ಪಾತ್‌ನ ಟೈಲ್ಸ್‌ಗಳ ಮೇಲೆ ಒಡೆದ ಗಾಜುಗಳನ್ನು ಸುರಿಯಲಾಗಿದೆ. ಟೈಲ್ಸ್‌ಗಳು ಎದ್ದು ಬಂದಿವೆ. ಪಾದಚಾರಿ ಮಾರ್ಗಗಳು ಕಟ್ಟಡ ತ್ಯಾಜ್ಯ, ಕಸ ಸುರಿಯುವ ತಾಣಗಳಾಗಿವೆ. ಇದರಿಂದ ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ.

ಮಾಧವರಾವ್, ಗೋವಿಂದರಾಜ ನಗರ

ಮಲೇಷ್ಯಾ ಸರ್ಕಾರದ ವಿದ್ಯಾರ್ಥಿ ವೇತನ

ಮಲೇಷ್ಯಾ ಸರ್ಕಾರವು ಅಭಿವೃದ್ಧಿಶೀಲ ದೇಶಗಳ ವಿದ್ಯಾರ್ಥಿಗಳಿಗೆ ತನ್ನ ದೇಶದಲ್ಲಿ ಸ್ನಾತಕೋತ್ತರ ಶಿಕ್ಷಣವನ್ನು ಉತ್ತೇಜಿಸುವ ಉದ್ದೇಶದಿಂದ ಎಂಟಿಸಿಪಿ ವಿದ್ಯಾರ್ಥಿವೇತನವನ್ನು ನೀಡುತ್ತಿದೆ.
ಅರ್ಹತೆ: ಅರ್ಜಿ ಸಲ್ಲಿಸುವ ದಿನಾಂಕದವರೆಗೆ ಅಭ್ಯರ್ಥಿಗಳು 45 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು. ಈ ವಿದ್ಯಾರ್ಥಿವೇತನಕ್ಕೆ ಅರ್ಹರಾಗಲು ಪದವಿ ಮಟ್ಟದಲ್ಲಿ ಸೆಕೆಂಡ್- ಕ್ಲ್ಯಾಸ್ ಅಪ್ಪರ್ (ಆನರ್ಸ್) ಅಥವಾ 3.0 ಸಿಜಿಪಿಎ ಅಥವಾ ಸಮಾನ ಅರ್ಹತೆ ಹೊಂದಿರಬೇಕು. ಐಇಎಲ್‌ಟಿಎಸ್‌ನಲ್ಲಿ ಒಟ್ಟು ಅಂಕ 6.0 ಅಥವಾ ಅದಕ್ಕಿಂತ ಹೆಚ್ಚು ಅಥವಾ ಟೋಫೆಲ್ ಐಬಿಟಿಯಲ್ಲಿ ಒಟ್ಟು ಅಂಕ 60 ಅಥವಾ ಅದಕ್ಕಿಂತ ಹೆಚ್ಚು ಇರಬೇಕು ಇಲ್ಲವೇ ಹಿಂದಿನ ಪದವಿಯನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಪೂರ್ಣಗೊಳಿಸಿರಬೇಕು.
ಆರ್ಥಿಕ ನೆರವು: ಮಾಸಿಕ ಭತ್ಯೆ ಆರ್‌ಎಂ 3,500 (ಸುಮಾರು ₹ 84 ಸಾವಿರ) **ಅರ್ಜಿ ಸಲ್ಲಿಸಲು ಕೊನೇ ದಿನ:** 12-06-2026 **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್ **ಮಾಹಿತಿಗೆ:** Short Url: www.b4s.in/praja/MTCP2

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ದಿಕ್ಸೂಚಿ

ಸಮಾಜವಿಜ್ಞಾನ (ಇತಿಹಾಸ)

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

ಬಹುಆಯ್ಕೆ ಪ್ರಶ್ನೆಗಳು

10) ಕರಿಮೆಣಸಿನ ಆಸೆಯಿಂದ ವಿದೇಶಿಯರು ನಡೆಸಿದ್ದ ನಿರಂತರ ಆಕ್ರಮಣವನ್ನು ಮತ್ತು ಸಾಮ್ರಾಜ್ಯದಾಹವನ್ನು ಮೆಟ್ಟಿನಿಂತ ವೈನಾಡ್ ಅರಸ ಯಾರು?
ಎ) ರಾಮ ವರ್ಮಾ ಬಿ) ಮಾರ್ತಾಂಡ ವರ್ಮ
ಸಿ) ಅನಂತ ವರ್ಮಾ ಡಿ) ಮೇಲಿನ ಯಾರೂ ಅಲ್ಲ
ಉತ್ತರ:–(ಬಿ) ಮಾರ್ತಾಂಡ ವರ್ಮ

ಬಿಟ್ಟ ಸ್ಥಳ ತುಂಬಿರಿ

1) ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕ ....
ಉತ್ತರ:– ಆಲ್ಫೋನ್ಸೊ–ಡಿ–ಅಲ್ಬುಕರ್ಕ್

2) 1510ರಲ್ಲಿ ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಪರಿವರ್ತಿಸಿದವನು ....
ಉತ್ತರ:– ಆಲ್ಫೋನ್ಸೊ–ಡಿ–ಅಲ್ಬುಕರ್ಕ್

3) ....ರಲ್ಲಿ ಡಚ್ ಈಸ್ಟ್ ಇಂಡಿಯಾ ಕಂಪೆನಿಯು ಭಾರತಕ್ಕೆ ವ್ಯಾಪಾರಕ್ಕಾಗಿ ಬಂತು.
ಉತ್ತರ:– 1602

4) ಕರಿಮೆಣಸಿನ ಆಸೆಯಿಂದ ವಿದೇಶಿಯರು ನಡೆಸಿದ್ದ ನಿರಂತರ ಆಕ್ರಮಣವನ್ನು ಮತ್ತು ಸಾಮ್ರಾಜ್ಯದಾಹವನ್ನು ಮೆಟ್ಟಿನಿಂತ ವೈನಾಡ್ ಅರಸ ....
ಉತ್ತರ:– ಮಾರ್ತಾಂಡ ವರ್ಮ

5) ಇಂಗ್ಲೆಂಡಿನ ಎಲಿಜಬೆತ್ ರಾಣಿಯು ಸಾ.ಶ. 1600 ಡಿಸೆಂಬರ್ 31ರಂದು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ....ಗಳೊಂದಿಗೆ ವ್ಯಾಪಾರ ನಡೆಸಲು 15 ವರ್ಷಗಳ ಪರವಾನಗಿ ನೀಡಿದಳು.
ಉತ್ತರ:– ಪೂರ್ವದೇಶ

6) ಇಂಗ್ಲಿಷರು..............................ಎಂಬಲ್ಲಿ ಸೆಂಟ್ ಜಾರ್ಜ್ ಫೋರ್ಟ್ ಎಂಬ ಬಲಿಷ್ಠ ಕೋಟೆಯನ್ನು ಕಟ್ಟಿದರು
ಉತ್ತರ:– ಮದ್ರಾಸ್

7) ಹೂಗ್ಲಿ ನದಿ ದಂಡೆಯ ಮೇಲೆ ಸುತನುತಿ, ಕಲ್ಕತ್ತ ಮತ್ತು ....ಎಂಬ ಮೂರು ಹಳ್ಳಿಗಳನ್ನು ಇಂಗ್ಲಿಷರು ಖರೀದಿಸಿ ಫೋರ್ಟ್ ವಿಲಿಯಂ ಎಂಬ ಕೋಟೆಯನ್ನು ಕಟ್ಟಿದರು. ಇದರ ಸುತ್ತ ಕಲ್ಕತ್ತಾ ನಗರ ಬೆಳೆಯಿತು.
ಉತ್ತರ:– ಗೋವಿಂದಪುರ

8) ಡೂಪ್ಲೆಯ ಕೋರಿಕೆಯ ಮೇರೆಗೆ ಲಾಬೋರ್ಡಿನಾ ಎಂಬ ಫ್ರೆಂಚ್ ಸೇನಾ ಮುಖ್ಯಸ್ಥನು ಮಾರಿಷಸ್‌ನಿಂದ ಬಂದು ....ರಿಂದ ಮದ್ರಾಸನ್ನು ವಶಪಡಿಸಿಕೊಂಡನು.
ಉತ್ತರ:– ಬ್ರಿಟಿಷ್

9) ಎರಡನೆಯ ಕಾರ್ನಾಟಿಕ್ ಯುದ್ಧವು .... ಒಪ್ಪಂದದೊಂದಿಗೆ ಮುಕ್ತಾಯವಾಯಿತು.
ಉತ್ತರ:– ಪಾಂಡಿಚೇರಿ

10)..............................ವರ್ಷ ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಆರಂಭವಾಯಿತು.
ಉತ್ತರ:– 1664

11)...................ವರ್ಷ ಡೂಪ್ಲೆ ಪಾಂಡಿಚೇರಿಯ ಗವರ್ನರ್ ಆಗಿ ಬಂದ
ಉತ್ತರ:– 1746

12) 1724ರಲ್ಲಿ ಹೈದರಾಬಾದ್ ಸಂಸ್ಥಾನವನ್ನು ಸ್ಥಾಪಿಸಿದನು ....
ಉತ್ತರ:– 'ಅಸಫ್ ಜಾ'

13) .... ಒಪ್ಪಂದದೊಂದಿಗೆ ಮೊದಲ ಕಾರ್ನಾಟಿಕ್ ಯುದ್ಧ ಅಂತ್ಯವಾಯಿತು?
ಉತ್ತರ:– 'ಏಕ್ಸ್–ಲಾ–ಚಾಪೆಲ್'

14) ಅಸಫ್‌ಜಾನ ಮತ್ತೊಬ್ಬ ಮಗನಾದ ಸಲಾಬತ್ ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿದವರು ....
ಉತ್ತರ:– ಫ್ರೆಂಚರು

15) ಸಲಾಬತ್ ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿ ಅವನ ರಕ್ಷಣೆಗಾಗಿ ಆಸ್ಥಾನದಲ್ಲಿ ಫ್ರೆಂಚರು ತಮ್ಮ ಸೈನ್ಯ ಸಹಿತ ....ಎಂಬ ಅಧಿಕಾರಿಯನ್ನು ನೇಮಿಸಿದ್ದರು
. ಉತ್ತರ:– ಬುಸ್ಸಿ

16) ಎರಡನೆಯ ಕಾರ್ನಾಟಿಕ್ ಯುದ್ಧವು .... ಒಪ್ಪಂದದೊಂದಿಗೆ ಮುಕ್ತಾಯವಾಯಿತು.
ಉತ್ತರ:– ಪಾಂಡಿಚೇರಿ

17) ಫ್ರೆಂಚರ................ಯು 1760ರಲ್ಲಿ ವಾಂಡಿವಾಷ್ ಕೋಟೆಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದನು.
ಉತ್ತರ:– ಕೌಂಟ್– ಡಿ– ಲಾಲಿ

18) 1763ರಲ್ಲಿ ನಡೆದ 'ಪ್ಯಾರಿಸ್ ಒಪ್ಪಂದ'ದ ಪ್ರಕಾರ ಮೂರನೆಯ ಕಾರ್ನಾಟಿಕ್ ಯುದ್ಧ ಮುಕ್ತಾಯವಾಯಿತು ಮತ್ತು ಫ್ರೆಂಚರಿಗೆ ....ಯನ್ನು ಹಿಂತಿರುಗಿಸಲಾಯಿತು
ಉತ್ತರ:– ಪಾಂಡಿಚೇರಿ

19) ಸಿರಾಜ–ಉದ್–ದೌಲ್‌ನು ಪೋರ್ಟ್ ....ಯನ್ನು ಗೆದ್ದು ಕೆಲವರನ್ನು ಸೆರೆಹಿಡಿದನು. ಸಿರಾಜನು ಆಕ್ರಮಣದಲ್ಲಿ ಸೆರೆ ಸಿಕ್ಕಿದ 146 ಬ್ರಿಟಿಷರನ್ನು ಚಿಕ್ಕ ಕೊಠಡಿಯೊಂದರಲ್ಲಿ ಬಂಧಿಸಿಟ್ಟನು. ಅವರಲ್ಲಿ 123 ಮಂದಿ ಅಸುನೀಗಿದರು
ಉತ್ತರ:– ವಿಲಿಯಂ ಕೋಟೆ

20) ಯಾವುದೇ ತೆರಿಗೆ ಇಲ್ಲದೆ, ಸರಕುಗಳ ಆಮದು ಮತ್ತು ರಫ್ತು ಮಾಡಲು ಹಾಗೂ ಸರಕುಗಳ ಸಾಗಾಣೆ ಮಾಡಲು ಬೇಕಾದ ಪರವಾನಿಗೆ ಪತ್ರವೇ.......................
ಉತ್ತರ:– ದಸ್ತಕ್

21) 1757ರ ....ವಿಜಯದಿಂದಾಗಿ ಬಂಗಾಳದ ನವಾಬನ ಮೇಲೆ ಹಿಡಿತವನ್ನು ಸಾಧಿಸಿದನು. ಇದರಿಂದ ಅಪಾರ ಸಂಪತ್ತನ್ನು ಕ್ಲೈವನು ಸಂಪಾದಿಸಿದ್ದಲ್ಲದೇ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೂ ಲಾಭವನ್ನು ತಂದುಕೊಟ್ಟನು
ಉತ್ತರ:– ಪ್ಲಾಸಿ ಕದನದ

22) ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ .... ರೂಪಾಯಿಗಳನ್ನು ನೀಡಿದನು.
ಉತ್ತರ:– ಹದಿನೇಳು ಕೋಟಿ ಎಪ್ಪತ್ತು ಲಕ್ಷ

23) ಯುವ ನವಾಬನಾದ ಸಿರಾಜ್–ಉದ್–ದೌಲನಿಗೂ ಮತ್ತು ಬ್ರಿಟಿಷರಿಗೂ 1757ರಲ್ಲಿ ಇತಿಹಾಸ ಪ್ರಸಿದ್ಧ ....ಕದನ ನಡೆಯಿತು.
ಉತ್ತರ:– ಪ್ಲಾಸಿ

24) ದಸ್ತಕ್‌ಗಳನ್ನು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯ ....ತಮ್ಮ ಖಾಸಗಿ ವ್ಯಾಪಾರ–ವ್ಯವಹಾರಕ್ಕಾಗಿ ದುರುಪಯೋಗಪಡಿಸಿಕೊಳ್ಳ ತೊಡಗಿದರು
ಉತ್ತರ:– ನೌಕರರು

'ನೀಟ್' ಮರುಪರೀಕ್ಷೆ ಕೇಂದ್ರಗಳ ವಿವರ ಪ್ರಕಟ

ನವದೆಹಲಿ (ಪಿಟಿಐ): ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಜೂನ್ 21ರಂದು ನಡೆಸಲಿರುವ 'ನೀಟ್–ಯುಜಿ 2026' ಮರು ಪರೀಕ್ಷೆ ಕುರಿತ ಪರೀಕ್ಷಾ ಕೇಂದ್ರಗಳ ವಿವರಗಳನ್ನು ಪ್ರಕಟಿಸಿದೆ.

ಪರೀಕ್ಷಾರ್ಥಿಗಳು ವೆಬ್‌ಸೈಟ್‌ನಲ್ಲಿ ಅರ್ಜಿ ಸಂಖ್ಯೆ ಬಳಸಿ ಪರೀಕ್ಷಾ ಕೇಂದ್ರಗಳ ವಿವರ ವೀಕ್ಷಿಸಬಹುದು ಮತ್ತು ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು 'ಎಕ್ಸ್'ನಲ್ಲಿ ಪ್ರಕಟಿಸಿದೆ.


ಮರುಪರೀಕ್ಷೆ ಜೂನ್ 21ರ ಮಧ್ಯಾಹ್ನ 2ರಿಂದ 5.15ರ ವರೆಗೆ 'ಪೆನ್–ಪೇಪರ್' ಸ್ವರೂಪದಲ್ಲಿ ವಿವಿಧ 551 ನಗರಗಳು, ವಿದೇಶಗಳ 14 ನಗರಗಳಲ್ಲಿ ನಡೆಯಲಿದೆ ಎಂದು ಸಂಸ್ಥೆ ಪ್ರಕಟಿಸಿದೆ.

ಪರೀಕ್ಷಾ ಕೇಂದ್ರದ ವಿವರಗಳ ಪತ್ರವನ್ನು ಪ್ರವೇಶ ಪತ್ರ ಎಂದು ಪರಿಗಣಿಸಲಾಗುವುದಿಲ್ಲ. ಪ್ರವೇಶಪತ್ರಗಳನ್ನು ನಂತರ ನೀಡಲಾಗುತ್ತದೆ. ವಿವರಗಳಿಗೆ ಅಧಿಕೃತ ವೆಬ್‌ಸೈಟ್ ವೀಕ್ಷಿಸುತ್ತಿರಬೇಕು ಎಂದು ಮನವಿ ಮಾಡಿದೆ.

ನೀಟ್–ಯುಜಿ ಪರೀಕ್ಷೆ ಮೇ 3ರಂದು ನಡೆದಿತ್ತು. ಆದರೆ, ಪ್ರಶ್ನೆಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ಪರೀಕ್ಷೆಯನ್ನು ರದ್ದುಪಡಿಸಲಾಗಿತ್ತು. ಸೋರಿಕೆ ಪ್ರಕರಣ ಕುರಿತು ಸಿಬಿಐ ತನಿಖೆ ನಡೆಯುತ್ತಿದೆ.

ಪಿಎಚ್.ಡಿಗೆ ಅರ್ಜಿ: ಅವಧಿ ವಿಸ್ತರಣೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯವು ಪಿಎಚ್.ಡಿ



ನೋಂದಣಿಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಜೂನ್ 14ರವರೆಗೆ ವಿಸ್ತರಿಸಿದೆ. ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯ ಒಂದು ಪ್ರತಿಯನ್ನು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರಿಗೆ ಸಲ್ಲಿಸಬೇಕು. **ಹೆಚ್ಚಿನ ಮಾಹಿತಿಗಾಗಿ** https://bangaloreuniversity.karnataka.gov.in ಸಂಪರ್ಕಿಸಬಹುದು ಎಂದು ಕುಲಸಚಿವರು (ಪರೀಕ್ಷಾಂಗ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಷಿಪ್

ಬಿಸಿನೆಸ್ ಡೆವಲಪ್‌ಮೆಂಟ್ ಎಕ್ಸಿಕ್ಯುಟಿವ್
ಅಕ್ರಾಸ್ ದಿ ಗ್ಲೋಬ್ (ಎಟಿಜಿ): ಬಿಸಿನೆಸ್ ಡೆವಲಪ್‌ಮೆಂಟ್ ಎಕ್ಸಿಕ್ಯುಟಿವ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ವಿದ್ಯಾರ್ಥಿಗಳಿಗೆ ಇಂಗ್ಲಿಷ್‌ನಲ್ಲಿ ಮಾತನಾಡುವ ಸಾಮರ್ಥ್ಯ ಇರಬೇಕು. ಲಿಂಕ್ಡ್‌ಇನ್ ಮಾರ್ಕೆಟಿಂಗ್ ಮತ್ತು ಎಂಎಸ್ ಎಕ್ಸೆಲ್ ವಿಷಯಗಳಲ್ಲಿ ಜ್ಞಾನ ಇರಬೇಕು. ಜೂನ್ 25ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 1,500–5,000. ಸಂಪರ್ಕ: internshala.com/i/9cd868.

ಕಂಟೆಂಟ್ ಆ್ಯಂಡ್ ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್

ಲೂಪ್‌ಡೇ ಲ್ಯಾಬ್ಸ್: ಕಂಟೆಂಟ್ ಆ್ಯಂಡ್ ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್ ಇಂಟರ್ನಿಗಳನ್ನು ಆಹ್ವಾನಿಸಿದೆ. ವಿದ್ಯಾರ್ಥಿಗಳಿಗೆ ಕ್ಯಾನ್ವ, ಕ್ಯಾಪ್‌ಕಟ್, ಚಾಟ್‌ಜಿಪಿಟಿ, ಕ್ಲಾಡ್, ಜೆಮಿನಿ ಮತ್ತು ಇನ್‌ಸ್ಟಾಗ್ರಾಂ ಮಾರ್ಕೆಟಿಂಗ್ ಬಗ್ಗೆ ಜ್ಞಾನ ಇರಬೇಕು. ಜೂನ್ 24ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 12,000–18,000. ಸಂಪರ್ಕ: internshala.com/i/9e9cd3.

ಬೆಂಗಳೂರು ಕೇಂದ್ರಿತ ಇಂಟರ್ನ್‌ಷಿಪ್

ಡೇಟಾ ರಿಸರ್ಚ್ ಎಕ್ಸಿಕ್ಯುಟಿವ್
ಟ್ರೇಡ್‌ಪಾಸ್: ಡೇಟಾ ರಿಸರ್ಚ್ ಎಕ್ಸಿಕ್ಯುಟಿವ್ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ವಿದ್ಯಾರ್ಥಿಗಳಿಗೆ ಹಬ್‌ಸ್ಪಾಟ್ ಮತ್ತು ಎಂಎಸ್ ಎಕ್ಸೆಲ್‌ನಲ್ಲಿ ಜ್ಞಾನ ಇರಬೇಕು ಹಾಗೂ ಪರಿಣಾಮಕಾರಿ ಸಂವಹನ ಸಾಮರ್ಥ್ಯ ಉಳ್ಳವರಾಗಿರಬೇಕು. ಅರ್ಜಿ ಸಲ್ಲಿಕೆಗೆ ಜೂನ್ 25 ಕಡೇ ದಿನ. ಸ್ಟೈಪೆಂಡ್– ತಿಂಗಳಿಗೆ ₹ 10,000–12,000. ಸಂಪರ್ಕ: internshala.com/i/c310fb.

ವಿಡಿಯೊ ಎಡಿಟಿಂಗ್/ ಮೇಕಿಂಗ್
ಸಬ್‌ಸ್ಪೇಸ್: ವಿಡಿಯೊ ಎಡಿಟಿಂಗ್/ ಮೇಕಿಂಗ್ ಇಂಟರ್ನಿಗಳನ್ನು ಆಹ್ವಾನಿಸಿದೆ. ವಿದ್ಯಾರ್ಥಿಗಳಿಗೆ ಅಡೋಬ್ ಪ್ರೀಮಿಯರ್ ಪ್ರೊ ಮತ್ತು ವಿಡಿಯೊ ಮೇಕಿಂಗ್ ತಿಳಿದಿರಬೇಕು. ಜೂನ್ 25ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 20,001–35,000. ಸಂಪರ್ಕ: internshala.com/i/705e7c.







ತವರಲ್ಲಿ ಮುಖ್ಯಮಂತ್ರಿಗೆ ಅದ್ದೂರಿ ಸ್ವಾಗತ

ಕನಕಪುರ ಕ್ಷೇತ್ರದ ಜನರಿಗೆ ಕೃತಜ್ಞತೆ ಸಮರ್ಪಿಸಿದ ಡಿಕೆಶಿ

• ಬೆಳ್ಳುಳ್ಳಿ, ಮೆಣಸಿನಕಾಯಿ, ಸೇಬಿನ ಹಾರ ಅರ್ಪಣೆ

ಪ್ರಜಾವಾಣಿ ವಾರ್ತೆ

ಹಾರೋಹಳ್ಳಿ/ ಕನಕಪುರ (ರಾಮನಗರ): ಮುಖ್ಯಮಂತ್ರಿಯಾದ ಬಳಿಕ ಮೊದಲ ಸಲ ಜಿಲ್ಲೆಯ ಹಾರೋಹಳ್ಳಿ ಮತ್ತು ಕನಕಪುರ ತಾಲ್ಲೂಕಿಗೆ ಭಾನುವಾರ ಭೇಟಿ ನೀಡಿದ ಡಿ.ಕೆ.ಶಿವಕುಮಾರ್ ಅವರನ್ನು ಕಾಂಗ್ರೆಸ್ ಕಾರ್ಯಕರ್ತರು ಅದ್ದೂರಿಯಾಗಿ ಸ್ವಾಗತಿಸಿದರು. ಸುಮಾರು 20 ಕಡೆ ಹಮ್ಮಿಕೊಂಡಿದ್ದ ಕೃತಜ್ಞತಾ ಸಮರ್ಪಣಾ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿದರು.

ಅವರನ್ನು ಸ್ವಾಗತಿಸುವ ಬೃಹತ್ ಕಟೌಟ್, ಫ್ಲೆಕ್ಸ್, ಬ್ಯಾನರ್, ಕಾಂಗ್ರೆಸ್ ಬಾವುಟಗಳು ಮಾರ್ಗ ದುದ್ದಕ್ಕೂ ರಾರಾಜಿಸಿ ದವು. ನೂತನ ಮುಖ್ಯಮಂತ್ರಿಯನ್ನು ಕಣ್ತುಂಬಿಕೊಳ್ಳಲು ಪಕ್ಷದ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರು.

ತೆರೆದ ವಾಹನದಲ್ಲಿ ನಡೆದ ಮೆರವಣಿಗೆಯಲ್ಲಿ ಸಾಗಿದ ಶಿವಕುಮಾರ್ ಜನರತ್ತ ಕೈಮುಗಿದರು. ಡೊಳ್ಳು ಕುಣಿತ, ಪೂಜಾ ಕುಣಿತ, ಹುಲಿ ಕುಣಿತ, ಬೊಂಬೆ ಕುಣಿತ ಸೇರಿದಂತೆ ವಿವಿಧ ಕಲಾತಂಡಗಳು ಮೆರವಣಿಗೆಗೆ ಮೆರಗು ತಂದವು. ಮಹಿಳೆಯರು ಪೂರ್ಣ ಕುಂಭದೊಂದಿಗೆ ಹೆಜ್ಜೆ ಹಾಕಿದರು.

ಮುಖಂಡರು ತಮ್ಮ ನೆಚ್ಚಿನ ನಾಯಕನಿಗೆ ಬೆಳ್ಳುಳ್ಳಿ, ಮೆಣಸಿನಕಾಯಿ ಹಾಗೂ ಸೇಬುಗಳಿಂದ ಮಾಡಿದ ಬೃಹತ್ ಹಾರ ಹಾಕಿ ಅಭಿಮಾನ ಮೆರೆದರು. ಪಟಾಕಿಗಳ ಶಬ್ದ ಕಿವಿಗಡಚಿಕ್ಕುವಂತೆ ಮಾಡಿತು. ಕಾರ್ಯಕರ್ತರು ಜಯ ಘೋಷಣೆ ಮೊಳಗಿಸಿದರು.

ಶಿವಕುಮಾರ್ ಅವರು ಹಾರೋಹಳ್ಳಿಯಲ್ಲಿ ಚಾಮುಂಡೇಶ್ವರಿ ದೇವಾಲಯಕ್ಕೆ ಭೇಟಿ ನೀಡಿದರು. ನಂತರ ಕನಕಪುರದ ತುಂಗಣಿಯಲ್ಲೂ ಅದ್ದೂರಿ ಸ್ವಾಗತ ಕೋರಲಾಯಿತು. ಅಲ್ಲಿಂದ ಬೇಕುಪ್ಪೆಯಲ್ಲಿರುವ ಮನೆ ದೇವರು ಕೆಂಕೇರಮ್ಮ ದೇವಾಲಯಕ್ಕೆ ತೆರಳಿ ದರ್ಶನ ಪಡೆದರು. ಈಡುಗಾಯಿ ಒಡೆದು, ದೇಗುಲದ ಎದುರು ಸಸಿ ನೆಟ್ಟರು.

ಅಲ್ಲಿಂದ ನಾರಾಯಣಪುರಕ್ಕೆ ಭೇಟಿ ನೀಡಿ, ಕೋಡಿಹಳ್ಳಿಯಲ್ಲಿ ಊಟದ ವಿರಾಮ ಪಡೆದರು. ಬಳಿಕ ಹೇರಿಂದ್ಯಾಪನಹಳ್ಳಿ, ಕೊಳಗೊಂಡನಹಳ್ಳಿ, ಹುಣಸನಹಳ್ಳಿ, ಹೊಸದುರ್ಗ, ಹೂಕುಂದ, ಮುಳ್ಳಹಳ್ಳಿ, ನಲ್ಲಹಳ್ಳಿ, ದೊಡ್ಡಆಲಹಳ್ಳಿ, ಸಾತನೂರು, ಕಬ್ಬಾಳು, ಕುರುಬರಹಳ್ಳಿ ಗೇಟ್, ಸೋಮದ್ಯಾಪನಹಳ್ಳಿ, ಹಳ್ಳಿಮಾರನಹಳ್ಳಿಗೆ ಭೇಟಿ ನೀಡಿದ ಮುಖ್ಯಮಂತ್ರಿ, ರಾತ್ರಿ ಕನಕಪುರದ ಹಳೆ ಪೊಲೀಸ್ ಸ್ಟೇಷನ್ ಸರ್ಕಲ್, ಮೇಗಳ ಬೀದಿ ಹಾಗೂ ಚನ್ನಬಸಪ್ಪ ಸರ್ಕಲ್‌ನಲ್ಲಿ ಜನರಿಗೆ ಕೃತಜ್ಞತೆ ಸಲ್ಲಿಸಿದರು.

ಬಮುಲ್ ಅಧ್ಯಕ್ಷ ಡಿ.ಕೆ.ಸುರೇಶ್, ಶಾಸಕ ಎಚ್.ಎ.ಇಕ್ಬಾಲ್ ಹುಸೇನ್, ವಿಧಾನ ಪರಿಷತ್ ಸದಸ್ಯರಾದ ಎಸ್. ರವಿ, ಸುಧಾಮ್ ದಾಸ್, ಗ್ಯಾರಂಟಿ ಸಮಿತಿ ಜಿಲ್ಲಾಧ್ಯಕ್ಷ ಕೆ.ರಾಜು ಸೇರಿದಂತೆ ಹಾರೋಹಳ್ಳಿ ಮತ್ತು ಕನಕಪುರದ ಕಾಂಗ್ರೆಸ್ ಪದಾಧಿಕಾರಿಗಳು ಹಾಗೂ ಮುಖಂಡರು ಮುಖ್ಯಮಂತ್ರಿಗೆ ಸಾಥ್ ನೀಡಿದರು. ಮಾರ್ಗದುದ್ದಕ್ಕೂ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಜೆಡಿಎಸ್ ಕಾರ್ಯಕರ್ತರಿಗೆ ಆಹ್ವಾನ

‘ಜೆಡಿಎಸ್ ಕಾರ್ಯಕರ್ತರಿಗೂ ಈ ಡಿ.ಕೆ.ಶಿವಕುಮಾರ್ ಇದ್ದಾನೆ. ನನ್ನ ಮನೆ ಬಾಗಿಲು ನಿಮಗೆ ಸದಾ ತೆರೆದಿದೆ. ನೀವು ನನ್ನನ್ನು ಬಳಸಿಕೊಂಡು ಸಹಾಯ ಪಡೆಯಬಹುದು. ನಿಮಗೆ ಒಳ್ಳೆಯದು ಮಾಡಲು ನಾನು ಸಿದ್ಧನಿದ್ದೇನೆ’ ಎಂದು ಹಾರೋಹಳ್ಳಿ ಮತ್ತು ಕನಕಪುರದಲ್ಲಿ ಮಾತನಾಡಿದ ಮುಖ್ಯಮಂತ್ರಿ ಶಿವಕುಮಾರ್, ಕಾಂಗ್ರೆಸ್‌ಗೆ ಬರುವಂತೆ ಜೆಡಿಎಸ್ ಕಾರ್ಯಕರ್ತರಿಗೆ ಮುಕ್ತ ಆಹ್ವಾನ ನೀಡಿದರು.

‘ಬಿಜೆಪಿಯನ್ನು ದೂರ ಇಡಬೇಕೆಂದು ಹಿಂದೆ ಅನಿತಾ ಕುಮಾರಸ್ವಾಮಿ ಹಾಗೂ ಎಚ್.ಡಿ.ಕುಮಾರಸ್ವಾಮಿ ಅವರನ್ನು ನಾವು ಬೆಂಬಲಿಸಿದೆವು. ಆದರೆ, ಮುಂದೆ ನಡೆದಿದ್ದೇ ಬೇರೆ. ನಾವೀಗ ಯಾರನ್ನೂ ದ್ವೇಷಿಸುವುದಿಲ್ಲ. ಎಲ್ಲರನ್ನೂ ಒಟ್ಟಾಗಿ ಕರೆದುಕೊಂಡು ಹೋಗುತ್ತೇವೆ’ ಎಂದು ಭರವಸೆ ನೀಡಿದರು.

‘ಈ ಜಿಲ್ಲೆಯಲ್ಲಿ ಮತ್ತೊಬ್ಬ ಡಿ.ಕೆ.ಶಿವಕುಮಾರ್‌ನನ್ನು ಹುಟ್ಟುಹಾಕಲು ಬಿಜೆಪಿ, ಜೆಡಿಎಸ್ ಪಕ್ಷದಿಂದ ಸಾಧ್ಯವೇ? ಖಂಡಿತಾ ಇಲ್ಲ. ಇದನ್ನು ಬಿಜೆಪಿ, ದಳದ ಕಾರ್ಯಕರ್ತರು ಮನದಟ್ಟು ಮಾಡಿಕೊಳ್ಳಬೇಕು. ‘ನನಗೆ ಜಾತಿ, ಧರ್ಮ ಬೇಧ ಭಾವದ ಮೇಲೆ ನಂಬಿಕೆ ಇಲ್ಲ. ಕುವೆಂಪು ಅವರು ಹೇಳಿರುವಂತೆ ಈ ರಾಜ್ಯವನ್ನು ಸರ್ವಜನಾಂಗದ ಶಾಂತಿಯ ತೋಟವಾಗಿ ಮಾಡಬೇಕು. ಎಲ್ಲ ಸಮುದಾಯದವರನ್ನು ನನ್ನ ಅಣ್ಣ ತಮ್ಮಂದಿರಂತೆ ಕಂಡಿದ್ದೇನೆ’ ಎಂದು ಹೇಳಿದರು.

‘2028ರಲ್ಲೂ ನನ್ನ ಆಶೀರ್ವದಿಸಿ’

‘ಸಿದ್ದರಾಮಯ್ಯ ನುಡಿದಂತೆ ನಡೆದಿದ್ದಾರೆ. ಇಬ್ಬರೂ ದುಡಿದು ಪಕ್ಷವನ್ನು ಅಧಿಕಾರಕ್ಕೆ ತಂದಿದ್ದೇವೆ. ನಿಮ್ಮೆಲ್ಲರ ಪ್ರಾರ್ಥನೆ ಫಲವಾಗಿ ನಾನೀಗ ಸಿ.ಎಂ ಆಗಿದ್ದೇನೆ. ಇದು ಕೇವಲ ಎರಡು ವರ್ಷಕ್ಕಷ್ಟೇ ಅಲ್ಲ. 2028ಕ್ಕೂ ನಿಮ್ಮ ಆಶೀರ್ವಾದ ನನ್ನ ಮೇಲಿರಬೇಕು. ಅದಕ್ಕಾಗಿ ನಿಮಗೆ ಕೃತಜ್ಞತೆ ಹೇಳಿ ಆಶೀರ್ವಾದ ಪಡೆಯಲು ಬಂದಿದ್ದೇನೆ’ ಎಂದು ಹೂಕುಂದದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಿ.ಕೆ.ಶಿವಕುಮಾರ್ ಮುಂದಿನ ಸಲವೂ ಮುಖ್ಯಮಂತ್ರಿ ಯಾಗುವ ಆಕಾಂಕ್ಷೆ ವ್ಯಕ್ತಪಡಿಸಿದರು.



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದೊಡ್ಡ ಆಲಹಳ್ಳಿಯಲ್ಲಿ ನಡೆದ ಕೃತಜ್ಞತಾ ಸಮರ್ಪಣೆ ಕಾರ್ಯಕ್ರಮದಲ್ಲಿ ಜನರನ್ನು ಉದ್ದೇಶಿಸಿ ಮಾತನಾಡಿದರು

ಮೆಟ್ರೊದಲ್ಲಿ ಸಿ.ಎಂ ಸಂಚಾರ

ಬೆಂಗಳೂರು: ಕನಕಪುರ, ಹಾರೋಹಳ್ಳಿ ಸೇರಿದಂತೆ ಬೆಂಗಳೂರು ದಕ್ಷಿಣ ಜಿಲ್ಲೆಯ ವಿವಿಧೆಡೆ ಭಾನುವಾರ ಪ್ರವಾಸ ಕೈಗೊಂಡಿದ್ದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಜೀರೊ ಟ್ರಾಫಿಕ್‌ನಿಂದ ಸಾರ್ವಜನಿಕರಿಗೆ ತೊಂದರೆ ಆಗಬಾರದು ಎಂಬ ಉದ್ದೇಶದಿಂದ ಮೆಟ್ರೊದಲ್ಲಿ ಸಂಚರಿಸಿದರು.

ವಿಧಾನಸೌಧದ ನಿಲ್ದಾಣದಲ್ಲಿ ಬೆಳಿಗ್ಗೆ 9ಕ್ಕೆ ಮೆಟ್ರೊ ರೈಲು ಹತ್ತಿದ ಅವರು ಕನಕಪುರ ರಸ್ತೆಯ ಸಿಲ್ಕ್ ಇನ್‌ಸ್ಟಿಟ್ಯೂಟ್‌ವರೆಗೂ ಪ್ರಯಾಣ ಮಾಡಿದರು. ಅಲ್ಲಿಂದ ಕಾರಿನಲ್ಲಿ ತೆರಳಿದರು.



ಮೆಟ್ರೊದಲ್ಲಿ ಪ್ರಯಾಣಿಸಿದ ಡಿ.ಕೆ.ಶಿವಕುಮಾರ್ ಅವರ ಕೈಕುಲುಕಿ ಯುವತಿಯೊಬ್ಬರು ಸಂಭ್ರಮಿಸಿದರು

ಮುಖ್ಯಮಂತ್ರಿ ನಿವಾಸದ ಬಳಿ ನಿಂಬೆಹಣ್ಣು, ಸತ್ತ ಕೋಳಿ

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸದಾಶಿವನಗರದ ಮನೆಯ ಹಿಂಭಾಗದ ರಸ್ತೆಯಲ್ಲಿ ನಾಟಿ ಕೋಳಿಯ ಕತ್ತು ಕೊಯ್ದು ಹಾಕಿರುವುದು ಹಾಗೂ ಮೂರು ನಿಂಬೆಹಣ್ಣು ಇಟ್ಟಿರುವುದು ಭಾನುವಾರ ಮಧ್ಯಾಹ್ನ ಕಂಡುಬಂದಿದೆ.

ಮುಖ್ಯಮಂತ್ರಿ ಮನೆಯ ಬಳಿ ಕೂಡು ರಸ್ತೆ ಇದ್ದು (ಜಿಬಿಎ ಮೈದಾನದ ಎದುರು) ಆ ರಸ್ತೆಯ ಬದಿಯಲ್ಲಿ ವೃತ್ತಾಕಾರ ಹಾಕಿ ನಾಟಿ ಕೋಳಿ ಕೊಯ್ದು ಹಾಕಲಾಗಿತ್ತು. ಅದರ ಪಕ್ಕ ನಿಂಬೆಹಣ್ಣು ಹಾಕಲಾಗಿತ್ತು. ಕೋಳಿ ತಲೆಯನ್ನು ನಾಯಿ ಎತ್ತಿಕೊಂಡು ಹೋಗಿದೆ. ಆ ಮಾರ್ಗದಲ್ಲಿ ತೆರಳಿದ ವಾಹನ ಚಾಲಕರು ಹಾಗೂ ಸವಾರರು ಕುತೂಹಲದಿಂದ ವೀಕ್ಷಿಸಿ ಹೋಗುತ್ತಿದ್ದರು.

‘ವಾಮಾಚಾರ ನಡೆಸಲಾಗಿದೆ’ ಎಂದು ಶಂಕೆ ವ್ಯಕ್ತಪಡಿಸಿ ಸ್ಥಳೀಯರೊಬ್ಬರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ತೆರಳಿ ಪರಿಶೀಲಿಸಲಾಯಿತು. ಕೋಳಿಯನ್ನು ಸ್ಥಳದಿಂದ ತೆಗೆದು ಹಾಕಲಾಗಿದೆ. ಶನಿವಾರ ತಡರಾತ್ರಿ ಕೃತ್ಯ ಎಸಗಿರುವ ಸಾಧ್ಯತೆ ಇದೆ. ಕಿಡಿಗೇಡಿಗಳ ಪತ್ತೆಗೆ ಆ ಮಾರ್ಗದಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಗುಪ್ತಚರ ವಿಭಾಗಕ್ಕೆ ಚಂದ್ರಗುಪ್ತ ಮುಖ್ಯಸ್ಥ

ಬೆಂಗಳೂರು: ಹಿರಿಯ ಐಪಿಎಸ್ ಅಧಿಕಾರಿ ಚಂದ್ರಗುಪ್ತ ಅವರನ್ನು ರಾಜ್ಯ ಗುಪ್ತಚರ ವಿಭಾಗದ ಮುಖ್ಯಸ್ಥರನ್ನಾಗಿ (ಐಜಿಪಿ) ಆಗಿ ವರ್ಗಾವಣೆ ಮಾಡಲಾಗಿದೆ. ಸದ್ಯ ಅವರು ಭದ್ರತಾ (ಗುಪ್ತಚರ) ವಿಭಾಗದ ಐಜಿಪಿ ಆಗಿದ್ದಾರೆ.

ಗುಪ್ತಚರ ವಿಭಾಗದ ಮುಖ್ಯಸ್ಥ ಲಾಬೂ ರಾಮ್ ಅವರನ್ನು ವರ್ಗಾವಣೆ ಮಾಡಲಾಗಿದೆ.

ಆಂತರಿಕ ಭದ್ರತಾ ವಿಭಾಗದ ಡಿಜಿಪಿ ಪ್ರಣವ್ ಮೊಹಂತಿ ಅವರನ್ನು ಸಿಐಡಿ (ವಿಶೇಷ ಘಟಕ ಮತ್ತು ಆರ್ಥಿಕ ಅಪರಾಧಗಳು) ಡಿಜಿಪಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಅವರಿಗೆ ಸಿಐಡಿ (ಸೈಬರ್ ಅಪರಾಧಗಳು) ಡಿಜಿಪಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಹೊಸ ಹುದ್ದೆ ಸೃಜನೆ: ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವಿಶೇಷ ಆಯುಕ್ತ (ಆಡಳಿತ, ಕಂದಾಯ ಮತ್ತು ಐಟಿ) ಮೌನೀಶ್ ಮೌದ್ಗಿಲ್ ಅವರಿಗೆ ಹೊಸದಾಗಿ ಸೃಜಿಸಿರುವ ಮುಖ್ಯಮಂತ್ರಿಯ ಪ್ರಧಾನ ಕಾರ್ಯದರ್ಶಿ (ಕಾರ್ಯಕ್ರಮ ಮತ್ತು ಯೋಜನೆಗಳ ಅನುಷ್ಠಾನ) ಹುದ್ದೆಯ ಹೊಣೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ನಿಕಟಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಆಗಿದ್ದ (ಎಸಿಎಸ್) ಅಂಜುಂ ಪರ್ವೇಜ್ ಅವರನ್ನು ಅರಣ್ಯ ಇಲಾಖೆ ಎಸಿಎಸ್ ಆಗಿ ವರ್ಗಾಯಿಸಲಾಗಿದೆ.

ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ದೀಪಾ ಚೋಳನ್ ಅವರನ್ನು ಸಾರಿಗೆ ಇಲಾಖೆ ಸರ್ಕಾರದ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯಾಗಿ ಬಿ.ಬಿ. ಕಾವೇರಿ, ಸಹಕಾರ ಸಂಘಗಳ ರಿಜಿಸ್ಟ್ರಾರ್ ಆಗಿ ಎಂ.ವಿ. ವೆಂಕಟೇಶ್ , ಸಾರಿಗೆ ಮತ್ತು ರಸ್ತೆ ಸುರಕ್ಷತೆ ಘಟಕದ ಆಯುಕ್ತರಾಗಿ ಆರ್. ಸೆಲ್ವಮಣಿ ಅವರನ್ನು ವರ್ಗಾವಣೆ ಮಾಡಲಾಗಿದೆ.



ಗೃಹ ಸಚಿವರ ಅವಹೇಳನ: ಸೆರೆ

ಉಡುಪಿ: ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಫೇಸ್‌ಬುಕ್‌ನಲ್ಲಿ ಅವಹೇಳನಕಾರಿಯಾಗಿ ನಿಂದಿಸಿ, ಜೀವ ಬೆದರಿಕೆಯೊಡ್ಡಿದ ಆರೋಪದ ಮೇಲೆ ವ್ಯಕ್ತಿಯೊಬ್ಬರನ್ನು ಕಾರ್ಕಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಾರ್ಕಳ ಕೇರ್ವಾಶೆ ನಲ್ಕೆದಬೆಟ್ಟು ನಿವಾಸಿ ಸುಧೀರ ಬಂಗೇರ (48) ಬಂಧಿತ ಆರೋಪಿ. ‘ನಮ್ಮ ಕಾರ್ಲ’ ಎಂಬ ಫೇಸ್‌ಬುಕ್ ಖಾತೆಯಲ್ಲಿ ಪ್ರಿಯಾಂಕ್ ಖರ್ಗೆ ಅವರ ಫೋಟೊ ಹಾಕಿ ‘ಆರ್‌ಎಸ್‌ಎಸ್ ಇನ್ನು ಎರಡು ವರ್ಷ ಕೋಮುವಾದ ಉಸಿರಾಡುವುದಿಲ್ಲ. ಕಾರಣ ಗೃಹಮಂತ್ರಿ ಸ್ಥಾನದಲ್ಲಿ ಸೌಮ್ಯ ಸ್ವಭಾವದ ಸಚಿವರಿಲ್ಲ’ ಎಂಬ ಖರ್ಗೆ ಅವರ ಹೇಳಿಕೆಯನ್ನು ಪೋಸ್ಟ್ ಮಾಡಲಾಗಿತ್ತು. ಆ ಪೋಸ್ಟ್‌ಗೆ ಅವಹೇಳನಕಾರಿಯಾಗಿ ಕಮೆಂಟ್ ಹಾಕಿರುವುದಾಗಿ ದೂರಲಾಗಿದೆ.

ಕಾರ್ಕಳದ ನಿಟ್ಟೆ ಅತ್ತೂರಿನ ಸುರೇಶ ಚೇತನಹಳ್ಳಿ ಎಂಬವರು ಕಾರ್ಕಳ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

ಠಾಣಾ ಹಂತದಲ್ಲಿ ‘ರೌಡಿ ನಿಗ್ರಹ ಪಡೆ’

ರಾಜ್ಯ ಪೊಲೀಸ್ ಮಹಾನಿರ್ದೇಶಕರಿಂದ ಮಾರ್ಗಸೂಚಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ವೃತ್ತ, ಪೊಲೀಸ್ ಠಾಣಾ ಹಂತದಲ್ಲಿ ‘ರೌಡಿ ನಿಗ್ರಹ ಪಡೆ’ ಸ್ಥಾಪಿಸುವಂತೆ ಆದೇಶಿಸಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಮಾರ್ಗಸೂಚಿ ಹೊರಡಿಸಿದ್ದಾರೆ.



ಎಂ.ಎ.ಸಲೀಂ

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಗುರುವಾರ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ರೌಡಿ ನಿಗ್ರಹ ಪಡೆ ಸ್ಥಾಪಿಸಲು ಸೂಚಿಸಿದ್ದರು. ಅದರ ಬೆನ್ನಲ್ಲೇ ಆದೇಶ ಹೊರಬಿದ್ದಿದೆ.

ರೌಡಿಗಳ ಚಟುವಟಿಕೆ ನಿಗ್ರಹಿಸಿ ಸಮಾಜದಲ್ಲಿ ಶಾಂತಿ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಈ ಪಡೆ ಸ್ಥಾಪಿಸಲಾಗುತ್ತಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ರೌಡಿಗಳು ಭಯದ ವಾತಾವರಣ ಸೃಷ್ಟಿಸಿ, ಸೌಹಾರ್ದ ಹಾಳು ಮಾಡುತ್ತಿದ್ದಾರೆ. ಮುಖ್ಯಮಂತ್ರಿ ಅವರ ನಿರ್ದೇಶನದಂತೆ, ರೌಡಿ ಚಟುವಟಿಕೆ ನಿಗ್ರಹಿಸಲು ಕಠಿಣ ಕ್ರಮಕ್ಕೆ ಸೂಚಿಸಲಾಗಿದೆ. ಕರ್ನಾಟಕ ಪೊಲೀಸ್ ಕೈಪಿಡಿ ಪ್ರಕಾರ ರೌಡಿಗಳ ಪತ್ತೆ, ನೋಂದಣಿ ಮತ್ತು ನಿಗಾ ವಹಿಸುವಂತೆ ಆದೇಶದಲ್ಲಿ ತಿಳಿಸಲಾಗಿದೆ.

ಮಾರ್ಗಸೂಚಿ ಏನಿದೆ: ರೌಡಿ ನಿಗ್ರಹ ಪಡೆ ಸ್ಥಾಪಿಸಿ, ಆಯಾ ವಿಭಾಗದ ಇನ್‌ಸ್ಪೆಕ್ಟರ್ ಮೇಲ್ವಿಚಾರಣೆ ನಡೆಸಬೇಕು. ರೌಡಿಗಳ ವಿರುದ್ಧ ದಾಖಲಾದ ಕ್ರಿಮಿನಲ್ ಪ್ರಕರಣಗಳ ಪರಿಶೀಲನೆ, ರೌಡಿ ಪಟ್ಟಿಗೆ ಹೊಸ ಹೆಸರು ಸೇರ್ಪಡೆ ಮಾಡುವುದು ಪಡೆಯ ಜವಾಬ್ದಾರಿ ಆಗಿದೆ. ಸಮಾಜ ಘಾತುಕ ಶಕ್ತಿಗಳನ್ನೂ ಈ ಪಡೆಯೇ ಗುರುತಿಸಬೇಕು. ಈ ಕೆಲಸದಲ್ಲಿ ಲೋಪದೋಷಗಳು ಕಂಡು ಬಂದರೆ ಮುಖ್ಯಸ್ಥರನ್ನೇ ಹೊಣೆ ಮಾಡಲಾಗುವುದು ಎಂದು ಎಚ್ಚರಿಸಲಾಗಿದೆ.

ಎಲ್ಲಾ ಅಧಿಕಾರಿಗಳು ರೌಡಿಗಳ ವಿರುದ್ಧ ಶೂನ್ಯ ಸಹಿಷ್ಣುತೆ ನೀತಿ ಅನುಸರಿಸಬೇಕು. ಹೊಸ ರೌಡಿಗಳು, ರೌಡಿ ಗುಂಪುಗಳು ಹಾಗೂ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿ ಆಗುವ ಗುಂಪುಗಳನ್ನು ಗುರುತಿಸಿ ಕಾನೂನು ಕ್ರಮ ತೆಗೆದುಕೊಳ್ಳಬೇಕು. ರೌಡಿಗಳ ವಿರುದ್ಧ ಮುಂಜಾಗ್ರತಾ ಕ್ರಮದ ವರದಿ (ಪಿಎಆರ್), ಗೂಂಡಾ ಹಾಗೂ ಕೋಕಾ ಕಾಯ್ದೆಯಡಿ ಪ್ರಕರಣ ದಾಖಲಿಸಿ ಬಂಧಿಸಬೇಕು. ಗಸ್ತು ಸಿಬ್ಬಂದಿ ಮತ್ತು ಸ್ಥಳೀಯ ಗುಪ್ತಚರ ಮೂಲಗಳೊಂದಿಗೆ ರೌಡಿ ನಿಗ್ರಹ ಪಡೆಯ ಸಿಬ್ಬಂದಿ ನಿರಂತರ ಸಂಪರ್ಕದಲ್ಲಿದ್ದು, ಸೂಕ್ಷ್ಮ ಪ್ರದೇಶದಲ್ಲಿ ವಿಶೇಷ ಕಾರ್ಯಾಚರಣೆ ನಡೆಸಬೇಕು. ದಿಢೀರ್ ದಾಳಿ ನಡೆಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಬೆದರಿಕೆ, ಬಲವಂತದ ಹಣ ಸಂಗ್ರಹಣೆ, ಅಶಾಂತಿ ಸೃಷ್ಟಿಸುವುದು ಕಂಡುಬಂದರೆ ಅಂತಹವರ ವಿರುದ್ಧ ಎಫ್‌ಐಆರ್ ದಾಖಲು ಮಾಡಬೇಕು ಎಂದು ಸೂಚಿಸಲಾಗಿದೆ.

15 ದಿನಕ್ಕೊಮ್ಮೆ ಪರಿಶೀಲನೆ

ವೃತ್ತ ನಿರೀಕ್ಷಕರು, ಆಯಾ ಠಾಣಾಧಿಕಾರಿಗಳು ಪ್ರತಿ 15 ದಿನಕ್ಕೊಮ್ಮೆ ಪಡೆಯ ಕಾರ್ಯವೈಖರಿ ಪರಿಶೀಲಿಸಬೇಕು. ಪ್ರತಿ ತಿಂಗಳು ಎಸ್‌ಡಿಪಿಒ ಮತ್ತು ಎಸಿಪಿ ಪಡೆ ಕಾರ್ಯಕ್ಷಮತೆ ವಿಮರ್ಶಿಸಬೇಕು. ಪ್ರತ್ಯೇಕ ನೋಂದಣಿ ಪುಸ್ತಕ ಹೊಂದಿರಬೇಕು. ಅಲ್ಲದೇ ಪಡೆ ರಚನೆಯಾದ ಮೇಲೆ ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿಗೆ ವರದಿ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

ಮುಖ್ಯಾಂಶಗಳು

- ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿ– ಕಠಿಣ ಕ್ರಮ
- ಸೂಕ್ಷ್ಮ ಪ್ರದೇಶದಲ್ಲಿ ವಿಶೇಷ ಕಾರ್ಯಾಚರಣೆ

ಸಿ.ಎಂ.ಗೆ ಪಾರಂಪರಿಕ ಕಟ್ಟಡ...

ಒಂದನೇ ಪುಟದಿಂದ...

ಅದರಲ್ಲಿ ವಿಧಾನಸಭೆಯ ಉಪಾಧ್ಯಕ್ಷರ ವಾಸ್ತವ್ಯಕ್ಕೆ ಕೊಠಡಿ ಮತ್ತು ಕೋವಿಡ್–19ರ ಅಕ್ರಮಗಳ ಕುರಿತ ವಿಚಾರಣಾ ಆಯೋಗಕ್ಕೆ ಮೂರು ಕೊಠಡಿಗಳನ್ನು ಹಂಚಿಕೆ ಮಾಡಲಾಗಿದೆ. ಅನೆಕ್ಸ್ ಕಟ್ಟಡದಲ್ಲಿ 28 ಕೊಠಡಿಗಳಿವೆ. ಕಟ್ಟಡದ ಹಿಂಭಾಗದಲ್ಲಿ ರಾಜ್ಯ ಆತಿಥ್ಯ (ಶಿಷ್ಟಾಚಾರ) ಸಂಸ್ಥೆಯ ಕಟ್ಟಡ ಇದೆ.

ಈ ಕಟ್ಟಡಗಳಲ್ಲಿ ಶಿವಕುಮಾರ್ ಅವರು ಸೂಚಿಸಿರುವ ನವೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಅನುಮತಿ ದೊರಕಿಸಿಕೊಡುವಂತೆ ಕಾರ್ಯಪಾಲಕ ಎಂಜಿನಿಯರ್ (ಕಟ್ಟಡಗಳ ವಿಭಾಗ) ಲೋಕೋಪಯೋಗಿ ಇಲಾಖೆಯ ಮುಖ್ಯ ಎಂಜಿನಿಯರ್ (ಸಂಪರ್ಕ ಮತ್ತು ಕಟ್ಟಡಗಳು ದಕ್ಷಿಣ) ಅವರಿಗೆ ಜೂನ್ 1ರಂದು ಪ್ರಸ್ತಾವ ಸಲ್ಲಿಸಿದ್ದಾರೆ.

ಕಾರ್ಯಪಾಲಕ ಎಂಜಿನಿಯರ್ ಪ್ರಸ್ತಾವ ಸಲ್ಲಿಸಿದ ದಿನವೇ ಲೋಕೋಪಯೋಗಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಪ್ರಸ್ತಾವ ಸಲ್ಲಿಸಿದ ಮುಖ್ಯ ಎಂಜಿನಿಯರ್, ‘ಈ ಕಟ್ಟಡಗಳಲ್ಲಿ ತುರ್ತಾಗಿ ನವೀಕರಣ ಕೈಗೊಳ್ಳಬೇಕೆಂದು ಮುಖ್ಯಮಂತ್ರಿ ಸೂಚನೆ ನೀಡಿರುವ ಕಾರಣ, ಆ ಕಟ್ಟಡಗಳಲ್ಲಿರುವ ಕಚೇರಿಗಳನ್ನು ಬದಲಿ ಸ್ಥಳಕ್ಕೆ ಸ್ಥಳಾಂತರಿಸಲು ಅನುಮತಿ ನೀಡಬೇಕು. ಈ ಉದ್ದೇಶಕ್ಕೆ ಈ ಕಟ್ಟಡಗಳನ್ನು ಲೋಕೋಪಯೋಗಿ ಇಲಾಖೆಗೆ ಡಿಪಿಎಆರ್ ಹಸ್ತಾಂತರಿಸಬೇಕೆಂದು ಡಿಪಿಎಆರ್‌ಗೆ ಸರ್ಕಾರದ ವತಿಯಿಂದ ಪತ್ರ ಬರೆಯಬೇಕು’ ಎಂದು ಕೋರಿದ್ದಾರೆ. ಕಾರ್ಯಪಾಲಕ ಎಂಜಿನಿಯರ್ ಸಲ್ಲಿಸಿದ್ದ ಪ್ರಸ್ತಾವವನ್ನು ಉಲ್ಲೇಖಿಸಿ ಮುಖ್ಯ ಎಂಜಿನಿಯರ್ ಪತ್ರ ಬರೆದಿದ್ದ ದಿನವೇ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಪತ್ರ ಬರೆದ ಇಲಾಖೆಯ ಪ್ರಧಾನ ಕಾರ್ಯದರ್ಶಿ, ‘ಪ್ರಸ್ತಾಪಿಸಿರುವ ನವೀಕರಣ ಕಾಮಗಾರಿಗಳಿಗಾಗಿ ಅವಕಾಶ ಕಲ್ಪಿಸಲು, ಮುಖ್ಯ ಕಟ್ಟಡ ಮತ್ತು ಅನೆಕ್ಸ್ ಕಟ್ಟಡವು ಪುರಾತತ್ವ ಕಟ್ಟಡಗಳ ಪಟ್ಟಿಯಲ್ಲಿ ಸೇರಿರುವುದರ ಬಗ್ಗೆ ಅಭಿಪ್ರಾಯ ನೀಡಬೇಕು’ ಎಂದು ಕೋರಿದ್ದರು.

ಡಿಪಿಎಆರ್‌ನಿಂದ ಅನುಮತಿ ಸಿಕ್ಕಿದ ಕ್ಷಣದಿಂದಲೇ ಲೋಕೋಪಯೋಗಿ ಇಲಾಖೆಯು ಮುಖ್ಯ ಕಟ್ಟಡ, ಅನೆಕ್ಸ್ ಕಟ್ಟಡ ಮತ್ತು ರಾಜ್ಯ ಆತಿಥ್ಯ (ಶಿಷ್ಟಾಚಾರ) ಸಂಸ್ಥೆಯ ಆಡಳಿತ ಕಚೇರಿ ಇರುವ ಕಟ್ಟಡವನ್ನು ಸೇರಿಸಿಕೊಂಡು ಸುತ್ತ ಕಾಂಪೌಂಡ್ ನಿರ್ಮಿಸುತ್ತಿದೆ. ಅಲ್ಲದೆ, ಈ ಕಟ್ಟಡಗಳಲ್ಲಿರುವ ಕೊಠಡಿಗಳ ಒಳಭಾಗದ ಗೋಡೆಗಳಿಗೆ ಹಾಕಿದ್ದ ಗಾರೆಯನ್ನು ಕೆತ್ತಿ ತೆಗೆದು ತೆರವುಗೊಳಿಸುವ ಕಾಮಗಾರಿಯೂ ತ್ವರಿತಗತಿಯಲ್ಲಿ ನಡೆಯುತ್ತಿದೆ.

ಆತಿಥ್ಯ ಸಂಸ್ಥೆಯ ಸಿಬ್ಬಂದಿ ಅತಂತ್ರ

ಒಂದನೇ ಪುಟದಿಂದ...

‘ವಿಧಾನಸೌಧ, ವಿಕಾಸಸೌಧದಲ್ಲಿ ನಡೆಯುವ ಸಭೆ, ಕಾರ್ಯಕ್ರಮಗಳು, ಸಚಿವ ಸಂಪುಟ ಸಭೆ, ಲೋಕಭವನ, ಹೈಕೋರ್ಟ್ ಹಾಗೂ ಲೋಕಾಯುಕ್ತದಲ್ಲಿ ನಡೆಯುವ ಎಲ್ಲ ಸಮಾರಂಭಗಳಿಗೆ ಊಟ, ತಿಂಡಿ ಪೂರೈಸುವ, ಎಲ್ಲ ಇಲಾಖೆಗಳಿಗೆ ಸಾರಿಗೆ ವಾಹನಗಳನ್ನು ಒದಗಿಸುವ ಕೆಲಸಗಳು ಶಿಷ್ಟಾಚಾರ ಸಂಸ್ಥೆಯ ಮೂಲಕ ನಡೆಯುತ್ತದೆ’ ಎಂದರು.

ಪ್ರಕಾಶ ನಾರ್ವೇಕರ ನಿಧನ

ಅಂಕೋಲಾ (ಉತ್ತರ ಕನ್ನಡ ಜಿಲ್ಲೆ): ಭಾರತೀಯ ವಾಯುಪಡೆಯ ನಿವೃತ್ತ ವಿಂಗ್ ಕಮಾಂಡರ್, ತಾಲ್ಲೂಕಿನ ಲಕ್ಷ್ಮೇಶ್ವರದ ಪ್ರಕಾಶ ಮಂಗೇಶ ನಾರ್ವೇಕರ (82) ಅನಾರೋಗ್ಯದಿಂದ ಬೆಳಗಾವಿಯಲ್ಲಿ ಶನಿವಾರ ನಿಧನರಾದರು.



ಪ್ರಕಾಶ ನಾರ್ವೇಕರ

1967ರಲ್ಲಿ ಭಾರತೀಯ ವಾಯುಪಡೆಗೆ ಸೇರ್ಪಡೆಗೊಂಡಿದ್ದ ಪ್ರಕಾಶ ಅವರು, ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದರು. 1994ರಲ್ಲಿ ನಿವೃತ್ತಿ ಬಳಿಕ ಬೆಳಗಾವಿಯಲ್ಲಿ ವಾಸವಾಗಿದ್ದರು.

ಪರೀಕ್ಷೆ, ರಜೆಯಿಂದಾಗಿ ರಾಜ್ಯದಲ್ಲಿ ಶೇ 45.8ರಷ್ಟು ಮಾತ್ರ ಗುರಿ ಸಾಧನೆ

ಎಚ್‌ಪಿವಿ ಲಸಿಕೆ– ನೀರಸ ಸ್ಪಂದನೆ

• ವರುಣ ಹೆಗಡೆ

ಬೆಂಗಳೂರು: ಗರ್ಭಕಂಠದ ಕ್ಯಾನ್ಸರ್ ತಡೆಗೆ ಸಹಕಾರಿಯಾದ ‘ಹ್ಯೂಮನ್ ಪ್ಯಾಪಿಲೋಮ ವೈರಸ್’ (ಎಚ್‌ಪಿವಿ) ಲಸಿಕೆಗೆ ರಾಜ್ಯದಲ್ಲಿ ಕಿಶೋರಿಯರಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮೂರು ತಿಂಗಳು ಹಮ್ಮಿಕೊಂಡಿದ್ದ ಈ ಲಸಿಕಾ ಅಭಿಯಾನದಲ್ಲಿ ಶೇ 45.8ರಷ್ಟು ಗುರಿ ಸಾಧಿಸಿದೆ.

ಕೇಂದ್ರ ಸರ್ಕಾರವು ದೇಶದಾದ್ಯಂತ ಹಮ್ಮಿಕೊಂಡಿರುವ ಲಸಿಕಾ ಅಭಿಯಾನಕ್ಕೆ ಫೆಬ್ರುವರಿ 28ರಂದು ಚಾಲನೆ ನೀಡಲಾಗಿದೆ. ರಾಜ್ಯದಲ್ಲಿ ಆರೋಗ್ಯ ಇಲಾಖೆ ಅಭಿಯಾನವನ್ನು ಅನುಷ್ಠಾನಗೊಳಿಸುವ ಹೊಣೆಹೊತ್ತಿದೆ. 14ರಿಂದ 15 ವರ್ಷದೊಳಗಿನ ಹೆಣ್ಣು ಮಕ್ಕಳು ಫಲಾನುಭವಿಗಳಾಗಿದ್ದಾರೆ. ರಾಜ್ಯದಲ್ಲಿ 6.89 ಲಕ್ಷ ಕಿಶೋರಿಯರನ್ನು ಅಭಿಯಾನದಡಿ ಗುರುತಿಸಲಾಗಿದ್ದು, ಪರೀಕ್ಷೆ, ಬೇಸಿಗೆ ರಜೆಯ ಕಾರಣದಿಂದಾಗಿ ಹೆಚ್ಚಿನವರು ಅಭಿಯಾನದಿಂದ ಹೊರಗುಳಿದಿದ್ದರು. ಮಾರ್ಚ್‌ನಿಂದ ಮೇ ಅವಧಿಯಲ್ಲಿ 2.32 ಲಕ್ಷ ಫಲಾನುಭವಿಗಳು ಮಾತ್ರ ಲಸಿಕೆ ಪಡೆದಿದ್ದಾರೆ.

ಅರ್ಧಕ್ಕೂ ಅಧಿಕ ಮಂದಿ ನಿಗದಿತ ಅವಧಿಯಲ್ಲಿ ಲಸಿಕೆ ಪಡೆಯದ ಕಾರಣ, ಅಭಿಯಾನದ ಅವಧಿಯನ್ನು ಮತ್ತೆ 90 ದಿನಗಳಿಗೆ (ಜೂನ್‌ನಿಂದ ಆಗಸ್ಟ್) ವಿಸ್ತರಿಸಲಾಗಿದೆ. ಈ ಲಸಿಕಾ ಅಭಿಯಾನದ ಯಶಸ್ವಿಗೆ ಆರೋಗ್ಯ ಇಲಾಖೆಯು ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯ ಸಹಕಾರವನ್ನು ಈಗ ಪಡೆದುಕೊಂಡಿದೆ. ಬಾಲಕಿಯರು 15 ವರ್ಷ ದಾಟಿದಲ್ಲಿ ಈ ಲಸಿಕೆಯಿಂದ ವಂಚಿತರಾಗುವ ಕಾರಣ, ಶಿಕ್ಷಣ ಸಂಸ್ಥೆಗಳೇ ಶಾಲಾ ವಾಹನಗಳ ಮೂಲಕ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕರೆತರುವಂತೆ ಇಲಾಖೆ ಸುತ್ತೋಲೆ ಹೊರಡಿಸಿದೆ.

ಉಚಿತ ವಿತರಣೆ: ಅಭಿಯಾನದಡಿ ‘ಗಾರ್ಡಾಸಿಲ್’ ಕಂಪನಿಯು ಉತ್ಪಾದಿಸಿರುವ ಲಸಿಕೆಯನ್ನು ನೀಡಲಾಗುತ್ತಿದೆ. ಒಂದು ಡೋಸ್‌ನ ಈ ಲಸಿಕೆ ಖಾಸಗಿ ವ್ಯವಸ್ಥೆಯಡಿ ₹ 5 ಸಾವಿರ ಇದೆ. ಅಭಿಯಾನದ ಅವಧಿಯಲ್ಲಿ 14 ರಿಂದ 15 ವರ್ಷದೊಳಗಿನವರಿಗೆ ಉಚಿತವಾಗಿ ನೀಡಲಾಗುತ್ತದೆ. ಕೇಂದ್ರ ಸರ್ಕಾರ ಫಲಾನುಭವಿಗಳ ಸಂಖ್ಯೆಯ ಅನುಸಾರ ಅಗತ್ಯ ಪ್ರಮಾಣದಲ್ಲಿ ಲಸಿಕೆಯನ್ನು ಪೂರೈಸಿದೆ. ಇದನ್ನು ಜಿಲ್ಲಾವಾರು ಹಂಚಿಕೆ ಮಾಡಿ, ಸರ್ಕಾರಿ ಆರೋಗ್ಯ ಕೇಂದ್ರಗಳಿಗೆ ಪೂರೈಸಲಾಗಿದೆ. ಅರಿವಿನ ಕೊರತೆ ಸೇರಿ ವಿವಿಧ ಕಾರಣಗಳಿಂದ ರಾಜ್ಯದ ಕೆಲವೆಡೆ ಫಲಾನುಭವಿಗಳನ್ನು ತಲುಪುವುದು ಇಲಾಖೆಗೆ ಕಷ್ಟಸಾಧ್ಯವಾಗಿದೆ.

‘ಈ ಲಸಿಕಾ ಅಭಿಯಾನ ಯಶಸ್ವಿಯಾಗಲು ಶಿಕ್ಷಣ ಇಲಾಖೆಯ ಪಾಲ್ಗೊಳ್ಳುವಿಕೆಯೂ ಮುಖ್ಯ. ಶಿಕ್ಷಣ ಸಂಸ್ಥೆಗಳಿಗೆ ಸೂಕ್ತ ನಿರ್ದೇಶನ ನೀಡಿ, ಫಲಾನುಭವಿಗಳನ್ನು ಹತ್ತಿರದ ಸರ್ಕಾರಿ ಆರೋಗ್ಯ ಕೇಂದ್ರಗಳಿಗೆ ಕರೆತರಲು ಕ್ರಮಕೈಗೊಳ್ಳಬೇಕು. ಅಭಿಯಾನ ಮೂರು ತಿಂಗಳು ನಡೆಯಲಿದೆಯೆಂದು ಕಾದು ಕುಳಿತಲ್ಲಿ 15 ವರ್ಷ ದಾಟಿ, ಲಸಿಕೆ ಪಡೆಯಲು ಅನರ್ಹರಾಗುವ ಸಾಧ್ಯತೆ ಇರುತ್ತದೆ. ಮಕ್ಕಳ ಆರೋಗ್ಯದ ದೃಷ್ಟಿಯಿಂದ ಪಾಲಕರು ಆದಷ್ಟು ಬೇಗ ಈ ಲಸಿಕೆ ಕೊಡಿಸಲು ಕ್ರಮವಹಿಸಬೇಕು’ ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.



“ಗರ್ಭಕಂಠ ಕ್ಯಾನ್ಸರ್ ತಡೆಗೆ ಎಚ್‌ಪಿವಿ ಲಸಿಕೆ ಸಹಕಾರಿ. ಹದಿಹರೆಯದ ಹುಡುಗಿಯರು ಇದನ್ನು ಪಡೆಯಬೇಕು. ಮಹಿಳೆಯರು ನಿಯಮಿತವಾಗಿ ತಪಾಸಣೆಗೆ ಒಳಗಾಗಬೇಕು

ಡಾ.ಟಿ.ನವೀನ್, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

18 ಜಿಲ್ಲೆಗಳು ಹಿಂದೆ

ಅಭಿಯಾನದಡಿ ಎಚ್‌ಪಿವಿ ಲಸಿಕೆ ವಿತರಣೆಯಲ್ಲಿ ಕಲಬುರಗಿ ಮುಂಚೂಣಿಯಲ್ಲಿದ್ದು, ಶೇ 94.2ರಷ್ಟು ಗುರಿ ಸಾಧಿಸಿದೆ. ಯಾದಗಿರಿ (ಶೇ 79.5), ಶಿವಮೊಗ್ಗ (ಶೇ 71.5), ಜಿಲ್ಲೆ ಉತ್ತಮ ಸಾಧನೆ ಮಾಡಿವೆ. ಬಾಗಲಕೋಟೆ ಕೊನೆ ಸ್ಥಾನದಲ್ಲಿದ್ದು, ಶೇ 26.9ರಷ್ಟು ಗುರಿ ಸಾಧಿಸಲಾಗಿದೆ. ಜಿಬಿಎ ವ್ಯಾಪ್ತಿಯಲ್ಲಿ 86,500 ಫಲಾನುಭವಿಗಳಿದ್ದು 24 ಸಾವಿರಕ್ಕೂ ಅಧಿಕ ಬಾಲಕಿಯರಿಗೆ ಲಸಿಕೆ ಹಾಕಲಾಗಿದೆ.

ಪ್ರಗತಿ: ಯಾವ ಜಿಲ್ಲೆಯಲ್ಲಿ, ಎಷ್ಟು?

ಜಿಲ್ಲೆ	ವಿತರಿಸಿದ ಲಸಿಕೆಯ ಡೋಸ್	ಪ್ರಗತಿ (ಶೇ)
ಬಾಗಲಕೋಟೆ	4,194	26.9
ಜಿಬಿಎ	24,042	28
ದಕ್ಷಿಣ ಕನ್ನಡ	4,868	29.8
ತುಮಕೂರು	6,109	32.2
ಮೈಸೂರು	8,660	35.9
ಉತ್ತರ ಕನ್ನಡ	3,981	37.3
ಹಾವೇರಿ	4,906	38.6
ಬೀದರ್	5,285	38.7
ಕೊಡಗು	1,581	40


PHYSICS ಪಿಯುಸಿ ದಿಕ್ಸೂಚಿ

ಎಸ್‌ಎಸ್‌ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

Chapter – 1

ELECTRIC CHARGES AND FIELDS

5. A pendulum consisting of an insulating bob of mass *m* and charge *q* hung as shown in the figure. What is the time period of the pendulum if uniform electric field $\vec{E}$ is set up between the plates.




Soln:- Let the pendulum be at an angle θ with the vertical.

Net force acting on the bob = $(mg - qE)$.

(…….Contd)

Torque experienced by the body about point of suspension is, is in the direction is in the direction $\tau = -(mg - qE)\, l \sin\theta$. Negative sign shows that torque is restoring torque.



As the amplitude of oscillation is small,

$$\sin\theta = \theta$$

$$\therefore\ \tau = -(mg - qE)\, l\, \theta$$

But $\tau = I\alpha$ (or) $\alpha = \dfrac{\tau}{I}$,

$$= \frac{-(mg - qE)\, l\,\theta}{I}$$

Where I = moment of inertia of pendulum about the point of suspension = ml^2

$$\therefore\ \alpha = \frac{-(mg - qE)\, l\,\theta}{ml^2}$$

$$= \frac{-(g - qE/m)\,\theta}{l}$$

(or) $\alpha \propto -\theta$

Therefore, the bob of the pendulum has simple harmonic motion.

Now, time period of pendulum, $T = 2\pi\sqrt{\dfrac{\theta}{|\alpha|}}$

$$= 2\pi\sqrt{\frac{l}{g - qE/m}}$$

6. Find electric intensity due to uniformly charged disc of radius a having surface charge density σ at any point on the axis of the disc.

Soln:- Let P be the point on the axis of disc and its distance from the centre of disc is r. disc is assumed to be formed by concentric rings.


Consider one such ring of radius x and thickness dx.

Area of the ring is given by

$$dA = 2\pi x\, dx$$

and change on ring,

$$dq = \sigma\, dA = \sigma\, 2\pi x\, dx$$



Electric field due to considered ring at a distance r from its centre,

$$dE = \frac{1}{4\pi\varepsilon_0}\frac{dq\, r}{(x^2 + r^2)^{3/2}}$$

$$= \frac{1}{4\pi\varepsilon_0}\frac{(2\pi\sigma\ x\ dx)r}{(x^2 + r^2)^{3/2}}$$

$$\therefore E = \int_0^a dE = \frac{2\pi\sigma r}{4\pi\varepsilon_0}\int_0^a \frac{x\,dx}{(x^2 + r^2)^{3/2}}$$

Put $x^2 + r^2 = y$

$\therefore\ 2x\,dx = dy$

(or) $x\,dx = \dfrac{dy}{2}$


$$\therefore\ E = \frac{\sigma r}{2\epsilon_0}\int_{r^2}^{a^2 + r^2}\frac{dy}{2y^{3/2}}$$

$$= \frac{\sigma r}{2\epsilon_0}\left[\frac{1}{r} - \frac{1}{(a^2 + r^2)^{1/2}}\right]$$

$$= \frac{\sigma}{2\epsilon_0}\left[1 - \frac{1}{\left(\frac{a^2}{r^2} + 1\right)^{1/2}}\right]$$

For $a \gg x$, we get $E = \dfrac{\sigma}{2\varepsilon_0}$.

7. In the given figure $q_A = -256$ C, $q_B = 299$ C and $q_C = 81$ C. Calculate net electric field along DA



Soln : – Here, $AC = \sqrt{4^2 + 3^2} = 5\text{ cm}$

$= 5 \times 10^{-2}\text{ m}$

$BD = BC\sin\theta = 3 \times \dfrac{4}{5} = 2.4\text{ cm}$

$= 2.4 \times 10^{-2}\text{ m}$

$CD = BC\cos\theta = 3 \times \dfrac{3}{5} = 1.8\text{ cm}$

$= 1.8 \times 10^{-2}\text{ m}$

Then $AD = AC - CD = 5 - \dfrac{9}{5}$

$= 3.2\text{ cm} = 3.2 \times 10^{-2}\text{ m}$

(Contd….)

ವಿದ್ಯುತ್ ಸಂಪರ್ಕಕ್ಕೆ ಷರತ್ತು: ಅಸಮಾಧಾನ

ಮೇ 31ರ ಒಳಗೆ ಅರ್ಜಿ ಸಲ್ಲಿಸಿರಬೇಕು ಎಂಬ ಷರತ್ತು ಸಡಿಲಿಸಲು ಗ್ರಾಹಕರು, ಗುತ್ತಿಗೆದಾರರ ಆಗ್ರಹ

• ಎ.ಎಂ.ಸುರೇಶ

ಬೆಂಗಳೂರು: ವಸತಿ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಸ್ವಾಧೀನಾನುಭವ ಪ್ರಮಾಣಪತ್ರ (ಒ.ಸಿ) ನೀಡುವ ಅಗತ್ಯವಿಲ್ಲ ಎಂದು ಸರ್ಕಾರ ಹೇಳಿದೆ. ಆದರೆ, ಮೇ 31ರ ಒಳಗೆ ಅರ್ಜಿ ಸಲ್ಲಿಸಿರಬೇಕು ಎಂಬುದೂ ಸೇರಿ ಹಲವು ಷರತ್ತುಗಳನ್ನು ವಿಧಿಸಿದೆ. ಇದರಿಂದಾಗಿ ಹೆಚ್ಚು ಅನುಕೂಲವಾಗುವುದಿಲ್ಲ ಎಂದು ಗ್ರಾಹಕರು, ಗುತ್ತಿಗೆದಾರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಒ.ಸಿ ಇಲ್ಲದೆ ಇದ್ದರೆ ನೀರು ಮತ್ತು ವಿದ್ಯುತ್ ಸಂಪರ್ಕ ನೀಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದು ಇದನ್ನು ರಾಜ್ಯದಲ್ಲೂ ಜಾರಿಗೊಳಿಸಲಾಗಿದೆ. ಹೀಗಾಗಿ 2025ರ ಏಪ್ರಿಲ್ 5ರಿಂದ ಒ.ಸಿ ಇಲ್ಲದವರು ವಿದ್ಯುತ್ ಸಂಪರ್ಕಕ್ಕೆ ಅರ್ಜಿಯನ್ನೇ ಸಲ್ಲಿಸಿಲ್ಲ. ಆದರೆ, ನಗರಾಭಿವೃದ್ಧಿ ಇಲಾಖೆ ಇದೇ 6ರಂದು ಹೊರಡಿಸಿರುವ ಆದೇಶದಲ್ಲಿ 2025ರ ಮೇ 31ರ ಒಳಗೆ ಅರ್ಜಿ ಸಲ್ಲಿಸಿದವರಿಗೆ ಮಾತ್ರ ವಿದ್ಯುತ್ ಸಂಪರ್ಕ ನೀಡಬಹುದು ಎಂದು ತಿಳಿಸಲಾಗಿದೆ.

ಒ.ಸಿ ಇಲ್ಲ ಎಂಬ ಕಾರಣದಿಂದ 14 ತಿಂಗಳಿಂದ ವಿದ್ಯುತ್ ಸಂಪರ್ಕ ಕೋರಿ ಹೊಸದಾಗಿ ಅರ್ಜಿಯನ್ನೇ ಸಲ್ಲಿಸಿಲ್ಲ. ಒ.ಸಿ ಇಲ್ಲದಿದ್ದರೂ, ವಿದ್ಯುತ್ ಸಂಪರ್ಕ ನೀಡುವ ಸರ್ಕಾರದ ತೀರ್ಮಾನ ಸ್ವಾಗತಾರ್ಹ. ಆದರೆ, ಹೊಸದಾಗಿ ಅರ್ಜಿ ಸಲ್ಲಿಸಲು ಅವಕಾಶ ನೀಡಬೇಕು ಎಂದು ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ಸಿ.ರಮೇಶ್ ಒತ್ತಾಯಿಸಿದರು.

ಅರ್ಜಿ ಸಲ್ಲಿಸಲು ಕನಿಷ್ಠ ಒಂದು ತಿಂಗಳು ಅವಕಾಶ ನೀಡಬೇಕು. ಅಥವಾ ಈಗಾಗಲೇ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದವರಿಗೆ ಕಾಯಂ ಸಂಪರ್ಕ ನೀಡಬೇಕು ಎಂಬುದು ಅವರ ಬೇಡಿಕೆ.

ಒ.ಸಿ ಇಲ್ಲ ಎಂಬ ಕಾರಣಕ್ಕೆ ವಿದ್ಯುತ್ ಸಂಪರ್ಕ ಕೋರಿ ಯಾರೂ ಅರ್ಜಿಯನ್ನೇ ಸಲ್ಲಿಸಿಲ್ಲ. ಒಮ್ಮೆ ಅರ್ಜಿ ಸಲ್ಲಿಸಿದರೆ, ಒಂದು ತಿಂಗಳು ಅದಕ್ಕೆ ಜೀವ ಇರುತ್ತದೆ. ಒಂದು ತಿಂಗಳಲ್ಲಿ ನಿರ್ಧಾರ ತೆಗೆದುಕೊಳ್ಳದೆ ಇದ್ದರೆ, ಅರ್ಜಿ ಜೊತೆಗೆ ಪಾವತಿಸಿದ ಹಣ ನಷ್ಟವಾಗುತ್ತದೆ. ಹೀಗಾಗಿ 14 ತಿಂಗಳಿಂದ ಯಾರೂ ಅರ್ಜಿ ಸಲ್ಲಿಸಿಲ್ಲ ಎಂದು ಗುತ್ತಿಗೆದಾರ ಚಂದ್ರಶೇಖರ್ 'ಪ್ರಜಾವಾಣಿ'ಗೆ ತಿಳಿಸಿದರು.

'ನಾವು 20 ಮನೆಗಳಿಗೆ ವಿದ್ಯುತ್ ಸಂಪರ್ಕ ಕೊಡಿಸಬೇಕಾಗಿದೆ. ಒ.ಸಿ ಇಲ್ಲದ ಕಾರಣ ಇನ್ನೂ ಅರ್ಜಿ ಹಾಕಿಲ್ಲ. ಒಮ್ಮೆಗೆ ಅನ್ವಯವಾಗುವಂತೆ ಒ.ಸಿ ನೀಡಲು ಈಗ ವಿನಾಯಿತಿ ನೀಡಿರುವುದರಿಂದ ವಿದ್ಯುತ್ ಸಂಪರ್ಕ ಕೋರಿ ಅರ್ಜಿ ಸಲ್ಲಿಸಲು ಅವಕಾಶ ನೀಡಬೇಕು. ಇಲ್ಲದಿದ್ದರೆ, ಸರ್ಕಾರದ ತೀರ್ಮಾನದಿಂದ ಯಾವುದೇ ಉಪಯೋಗ ಆಗಲ್ಲ' ಎಂದರು.

ವಸತಿ ಕಟ್ಟಡಗಳಿಗೆ ಮಾತ್ರ ಒ.ಸಿ.ಯಿಂದ ವಿನಾಯಿತಿ ನೀಡಲಾಗಿದೆ. ಆದರೆ, ನೆಲಮಹಡಿಯಲ್ಲಿ ಅಂಗಡಿ ಮಳಿಗೆಗಳಿದ್ದು ಅದರ ಮೇಲೆ ಮನೆಗಳನ್ನು ಕಟ್ಟಲಾಗಿದೆ. ಅಂತಹವರು ವಿದ್ಯುತ್ ಸಂಪರ್ಕ ಪಡೆಯಲು ಏನು ಮಾಡಬೇಕು? ಇದಲ್ಲದೆ ಪಿ.ಜಿ ಹಾಸ್ಟೆಲ್, ವಾಣಿಜ್ಯ ಮಳಿಗೆಗಳ ಬಗ್ಗೆಯೂ ಆದೇಶದಲ್ಲಿ ಯಾವುದೇ ಪ್ರಸ್ತಾಪ ಮಾಡಿಲ್ಲ. ಹೀಗಾಗಿ ಅವರೆಲ್ಲ ಗೊಂದಲದಲ್ಲಿದ್ದಾರೆ. ಈ ಬಗ್ಗೆ ಸರ್ಕಾರ ಸ್ಪಷ್ಟವಾದ ನಿರ್ಧಾರ ತೆಗೆದುಕೊಳ್ಳಬೇಕು ಎಂಬುದು ಅವರ ಆಗ್ರಹ.

'ಒ.ಸಿ ಇಲ್ಲ ಎಂಬ ಕಾರಣಕ್ಕೆ ನಾವು ಇದುವರೆಗೆ ಅರ್ಜಿ ಸಲ್ಲಿಸಿರಲಿಲ್ಲ. ಈಗ ಅರ್ಜಿ ಹಾಕಲು ಅವಕಾಶ ನೀಡಬೇಕು' ಎಂದು 'ಪ್ರಜಾವಾಣಿ' ಜೊತೆ ಮಾತನಾಡಿದ ಬೆಂಗಳೂರಿನ ಜಯನಗರದ ಲಕ್ಷ್ಮಿನಾರಾಯಣ, ಯಲಹಂಕದ ನಾಗರಾಜ್, ಹಲಸೂರಿನ ಮುನಿಸ್ವಾಮಿ ಒತ್ತಾಯಿಸಿದರು.

'ಈಗಾಗಲೇ ಹಲವರು ಅರ್ಜಿ ಹಾಕಿದ್ದಾರೆ. ಅಗತ್ಯವಿದ್ದರೆ ಆದೇಶ ಬದಲಾವಣೆಗೆ ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆಯುತ್ತೇವೆ' ಎಂದು ಬೆಸ್ಕಾಂನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

14 ತಿಂಗಳ ಹಿಂದೆ ಅರ್ಜಿ ಸಲ್ಲಿಸಿದವರಿಗೆ ಅನುಕೂಲ

'ರಾಜ್ಯದಲ್ಲಿ ಸುಮಾರು ಮೂರೂವರೆ ಲಕ್ಷ ತಾತ್ಕಾಲಿಕ ವಿದ್ಯುತ್ ಸಂಪರ್ಕಗಳಿವೆ. 2025ರ ಮೇ 31ರ ಒಳಗೆ ಅರ್ಜಿ ಸಲ್ಲಿಸಿರಬೇಕು ಎಂಬ ಷರತ್ತಿನಿಂದ ಹೆಚ್ಚಿನವರಿಗೆ ಉಪಯೋಗ ಆಗುವುದಿಲ್ಲ' ಎನ್ನುತ್ತಾರೆ ವಿದ್ಯುತ್ ಗುತ್ತಿಗೆದಾರರು.

'ಬೆಸ್ಕಾಂನಿಂದ ಅಧಿಕೃತವಾಗಿ ಇನ್ನೂ ಆದೇಶ ಬಂದಿಲ್ಲ. ಹೀಗಾಗಿ ಗೊಂದಲ ಮುಂದುವರಿದಿದೆ. ಅವರು ಯಾವ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂಬುದನ್ನು ಕಾದು ನೋಡುತ್ತೇವೆ' ಎಂದು ಗುತ್ತಿಗೆದಾರರೊಬ್ಬರು ತಿಳಿಸಿದರು.



ಷರತ್ತುಗಳು ಏನು?

- ವಿದ್ಯುತ್ ಸಂಪರ್ಕ ಕೋರಿ ಈ ವರ್ಷದ ಮೇ 31ರ ಒಳಗೆ ಅರ್ಜಿ ಸಲ್ಲಿಸಿರಬೇಕು
- 2,400 ಚದರ ಅಡಿವರೆಗಿನ (ಶೇ 20ರಷ್ಟು ಹೆಚ್ಚುವರಿ ವ್ಯತ್ಯಾಸದ ಮಿತಿಯೊಂದಿಗೆ) ನಿವೇಶನಗಳಲ್ಲಿ ನಿರ್ಮಿಸಿರುವ ಜಿ + 3 ಅಥವಾ ಸ್ಟಿಲ್ಟ್ ಪಾರ್ಕಿಂಗ್ + 4 ಮಹಡಿಗಳಿರುವ ವಸತಿ ಕಟ್ಟಡಗಳಿಗೆ ಮಾತ್ರ ಅನ್ವಯ
- ಕಟ್ಟಡ ಪೂರ್ಣಗೊಂಡಿರುವ ಮತ್ತು ನಿಯಮಾನುಸಾರ ಇದೆಯೇ ಎಂಬುದನ್ನು ಖಚಿತತೆಗೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಕಟ್ಟಡದ ಚಿತ್ರ ಲಗತ್ತಿಸಿ ವಿದ್ಯುತ್ ಸಂಪರ್ಕ ನೀಡಬೇಕು

'ಬ್ರಾಹ್ಮಣ ಮಹಾಸಭಾದಿಂದ ₹100 ಕೋಟಿ ಶಾಶ್ವತ ನಿಧಿ ಸ್ಥಾಪಿಸುವ ಗುರಿ'

ಗದಗ: 'ಬ್ರಾಹ್ಮಣ ಸಮುದಾಯದವರಿಗೆ ನೆರವಾಗಲು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದಿಂದ ₹100 ಕೋಟಿ ಶಾಶ್ವತ ನಿಧಿ ಸ್ಥಾಪಿಸಲಾಗುತ್ತಿದ್ದು, ಈಗಾಗಲೇ ₹81 ಲಕ್ಷ ಸಂಗ್ರಹವಾಗಿದೆ' ಎಂದು ಮಹಾಸಭಾದ ಅಧ್ಯಕ್ಷ ಎಸ್.ರಘುನಾಥ ಹೇಳಿದರು.

'ದಾನಿಯೊಬ್ಬರು ಈಗಾಗಲೇ ₹2.50 ಕೋಟಿಯನ್ನು ಮಹಾಸಭಾಕ್ಕೆ ನೀಡಿದ್ದಾರೆ. ಅದರಿಂದ ಬರುವ ಬಡ್ಡಿ ಹಣದಲ್ಲಿ ವಿದ್ಯಾರ್ಥಿವೇತನ, ವೃದ್ಧಾಪ್ಯ ವೇತನ, ವೇದ ಪಾಠಶಾಲೆಯ ವಿದ್ಯಾರ್ಥಿಗಳಿಗೆ ನೆರವು ನೀಡಲಾಗುತ್ತದೆ' ಎಂದು ನಗರದಲ್ಲಿ ಭಾನುವಾರ ಗದಗ ಜಿಲ್ಲಾ ಬ್ರಾಹ್ಮಣ ಸಂಘದಿಂದ ನಡೆದ ಕಾರ್ಯಕ್ರಮದಲ್ಲಿ ತಿಳಿಸಿದರು.

ಬಳ್ಳಾರಿ: ಹಳ್ಳದ ನೀರಿನಲ್ಲಿ ಕೊಚ್ಚಿ ಹೋಗಿ ಮಹಿಳೆ ಸಾವು

ಹುಬ್ಬಳ್ಳಿ, ಬೆಳಗಾವಿಯಲ್ಲಿ ಮಳೆ ಬಿರುಸು

ಪ್ರಜಾವಾಣಿ ವಾರ್ತೆ



ಬಳ್ಳಾರಿ ನಗರದಲ್ಲಿ ಶನಿವಾರ ರಾತ್ರಿ ಸುರಿದ ಭಾರಿ ಮಳೆಗೆ ಕೊಲ್ಮಿ ಚೌಕ್ ಬಳಿಯ ಜನವಸತಿ ಪ್ರದೇಶಗಳಿಗೆ ನೀರು ನುಗ್ಗಿತ್ತು



ಅನೀಸ್ ಫಾತಿಮಾ

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಬಳ್ಳಾರಿ, ಉತ್ತರ ಕನ್ನಡ ಸೇರಿ ವಿವಿಧೆಡೆ ಭಾನುವಾರ ಧಾರಾಕಾರ ಮಳೆ ಸುರಿಯಿತು. ಬಳ್ಳಾರಿಯಲ್ಲಿ ಹಳ್ಳದ ನೀರಿನಲ್ಲಿ ಕೊಚ್ಚಿ ಹೋಗಿ ಬ್ಯಾಂಕ್ ಉದ್ಯೋಗಿ ಅನೀಸ್ ಫಾತಿಮಾ (38) ಎಂಬುವರು ಮೃತಪಟ್ಟಿದ್ದಾರೆ.

ಸೂರಿ ಕಾಲೊನಿ (ಲೋಟಸ್ ಕಾಲೋನಿ) ನಿವಾಸಿಯಾದ ಅನೀಸ್ ಫಾತಿಮಾ, ಶನಿವಾರ ರಾತ್ರಿ 11 ಗಂಟೆ ವೇಳೆಗೆ ಮೊಪೆಡ್ ಚಲಾಯಿಸಿಕೊಂಡು ಕೌಲ್ ಬಜಾರ್‌ನ ತಾಹಾ ಶಾಲೆ ಸಮೀಪದ ಹಳ್ಳದ ಬ್ರಿಡ್ಜ್ ದಾಟುತ್ತಿದ್ದರು. ಮಳೆ ನೀರು ರಭಸವಾಗಿ ಹರಿಯುತ್ತಿದ್ದರಿಂದ, ನಿಯಂತ್ರಣ ತಪ್ಪಿ ಅವರು ಕೊಚ್ಚಿ ಹೋಗಿದ್ದಾರೆ. ಭಾನುವಾರ ಬೆಳಿಗ್ಗೆ ಅವರ ಮೃತದೇಹ ಬಳ್ಳಾರಿ ನಗರದ ಅಂದ್ರಾಳ್ ಬಳಿಯ ಕಾಲುವೆಯ ಜಾಲಿ ಪೊದೆಯಲ್ಲಿ ಪತ್ತೆಯಾಗಿದೆ.

ಮಳೆಯಿಂದಾಗಿ ಬಳ್ಳಾರಿ ಜಿಲ್ಲೆಯಾದ್ಯಂತ 8 ಮನೆಗಳು ಭಾಗಶಃ ಹಾನಿಗೀಡಾಗಿವೆ. ನಾಲ್ಕು ವಿದ್ಯುತ್ ಪರಿವರ್ತಕಗಳು ಹಾಳಾಗಿದ್ದು, 16 ಕಂಬಗಳು ಉರುಳಿ ಬಿದ್ದಿವೆ. ನಗರಕ್ಕೆ ವಿದ್ಯುತ್ ಪೂರೈಸುವ ಸ್ಟೇಷನ್‌ಗಳಿಗೆ ನೀರು ನುಗ್ಗಿ ಇಡೀ ನಗರ 12 ಗಂಟೆಗೂ ಅಧಿಕ ಸಮಯ ಕತ್ತಲಲ್ಲಿ ಮುಳುಗಿತ್ತು.

ಬಳ್ಳಾರಿಯ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದ (ಬಿಎಂಸಿಆರ್‌ಸಿ- ವಿಮ್ಸ್) ವಾರ್ಡ್‌ಗಳಿಗೆ ನೀರು ನುಗ್ಗಿ ರೋಗಿಗಳು, ಆಸ್ಪತ್ರೆ ಸಿಬ್ಬಂದಿ ಪರದಾಡಿದರು. ರೋಗಿಗಳನ್ನು ಬೇರೆಡೆಗೆ ಸ್ಥಳಾಂತರಿಸಲಾಯಿತು. ಹೊಸಪೇಟೆಯಲ್ಲಿ ಗಾಳಿ ಸಹಿತ ಜೋರು ಮಳೆ ಸುರಿಯಿತು.

ಉತ್ತರ ಕನ್ನಡ ಜಿಲ್ಲೆಯಾದ್ಯಂತ ಬಿರುಸಿನ ಮಳೆ ಸುರಿಯಿತು. ಕರಾವಳಿ ಭಾಗದ ಭಟ್ಕಳ, ಮಲೆನಾಡಿನ ಶಿರಸಿ, ಸಿದ್ದಾಪುರದಲ್ಲಿ ಕೆಲ ಕಾಲ ರಭಸದೊಂದಿಗೆ ಮಳೆ ಸುರಿಯಿತು. ಬೆಳಗಾವಿ ನಗರ ಮತ್ತು ಕಾಗವಾಡ, ಯರಗಟ್ಟಿ, ಬೈಲಹೊಂಗಲ, ರಾಯಬಾಗದಲ್ಲಿ ಉತ್ತಮ ಮಳೆಯಾದರೆ, ರಾಮದುರ್ಗ, ಹುಕ್ಕೇರಿ, ಚನ್ನಮ್ಮನ ಕಿತ್ತೂರಿನಲ್ಲಿ ಸಾಧಾರಣ ಮಳೆ ಆಗಿದೆ.

ಹುಬ್ಬಳ್ಳಿ-ಧಾರವಾಡದಲ್ಲಿ ಭಾರಿ ಗಾಳಿ ಸಹಿತ ಧಾರಾಕಾರ ಮಳೆ ಸುರಿಯಿತು. ಅವಳಿ ನಗರದ ವಿವಿಧೆಡೆ 6 ಮರಗಳು ಧರೆಗುರುಳಿದವು.

ಷಡ್ಯಂತ್ರ; ಲಿಂಗಾಯತಕ್ಕೆ ಸಿಗದ ಪ್ರತ್ಯೇಕ ಧರ್ಮದ ಮಾನ್ಯತೆ– ತೋಂಟದ ಶ್ರೀ



ಸಿದ್ಧರಾಮ ಸ್ವಾಮೀಜಿ

ಹುಬ್ಬಳ್ಳಿ: 'ಲಿಂಗಾಯತ ಕೋಟಾದಡಿ ಟಿಕೆಟ್ ಪಡೆದು ಆಯ್ಕೆಯಾಗುವ ಜನಪ್ರತಿನಿಧಿಗಳು, ಲಿಂಗಾಯತಕ್ಕೆ ಪ್ರತ್ಯೇಕ ಧರ್ಮದ ವಿಷಯದಲ್ಲಿ ನಿರಾಸಕ್ತಿ ತೋರುತ್ತಿದ್ದಾರೆ. ಅಂಥವರಿಗೆ ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕು' ಎಂದು ಡಂಬಳ-ಗದಗ ತೋಂಟದಾರ್ಯ ಸಂಸ್ಥಾನಮಠದ ತೋಂಟದ ಸಿದ್ಧರಾಮ ಸ್ವಾಮೀಜಿ ಹೇಳಿದರು.

ನಗರದಲ್ಲಿ ಭಾನುವಾರ ಏರ್ಪಡಿಸಿದ್ದ ಅಲ್ಪಸಂಖ್ಯಾತ ಲಿಂಗಾಯತ ಮಾನ್ಯತೆಗಾಗಿ ಹೋರಾಟ ವೇದಿಕೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿ, 'ಜನಪ್ರತಿನಿಧಿಗಳ ಷಡ್ಯಂತ್ರದಿಂದ ಲಿಂಗಾಯತಕ್ಕೆ ಪ್ರತ್ಯೇಕ ಧರ್ಮದ ಮಾನ್ಯತೆ ಸಿಗುತ್ತಿಲ್ಲ. ಲಿಂಗಾಯತರಲ್ಲಿ ಒಗ್ಗಟ್ಟಿನ ಕೊರತೆ ಇದ್ದು, ಎಲ್ಲ ಒಳಪಂಗಡಗಳು ಒಂದಾಗಬೇಕು' ಎಂದು ಹೇಳಿದರು.

'ಪ್ರಸ್ತುತ ಕೇಸರಿ ಶಾಲು ಧರಿಸಿ ಧರ್ಮದ ಹೆಸರಿನಲ್ಲಿ ಕೋಮುವಾದ ಹರಡುವ ಕೆಲಸ ನಡೆದಿದೆ. ಅದನ್ನು ತಡೆಗಟ್ಟುವ ಜತೆಗೆ, ಅಂತಹ ಸಂಘಟನೆಗಳಲ್ಲಿ ಲಿಂಗಾಯತ ಯುವಕರು ಪಾಲ್ಗೊಳ್ಳದಂತೆ ನೋಡಿಕೊಳ್ಳಬೇಕು' ಎಂದು ಹೇಳಿದರು.

₹2,400 ಕೋಟಿ ಸಂಗ್ರಹಿಸಿ ವಂಚನೆ

ಒಂದನೇ ಪುಟದಿಂದ...

'ಶಿವಂ ಅಸೋಸಿಯೇಟ್ಸ್ ಮತ್ತು ಆದಿತ್ಯರಾಜ್ ಕ್ಯಾಪಿಟಲ್ ಕಂಪನಿಯವರು ಆರ್‌ಬಿಐನಿಂದ ಅನುಮತಿ ಪಡೆಯದೆ ಠೇವಣಿ ಸಂಗ್ರಹಿಸಿದ್ದಾರೆ. ಠೇವಣಿ ಮೊತ್ತಕ್ಕೆ ಶೇ 36 ಹಾಗೂ ಶೇ 60ರಷ್ಟು ಬಡ್ಡಿ ಕೊಡುವ ವ್ಯವಹಾರ ಎಲ್ಲಿಯೂ ಇಲ್ಲ' ಎಂದರು.

'ಶಿವಂ ಅಸೋಸಿಯೇಟ್ಸ್ ಕಂಪನಿಯಲ್ಲಿ ಗ್ರಾಹಕರು ಠೇವಣಿ ಇರಿಸಿದ್ದ ಹಣದಲ್ಲಿ, ತನಿಖೆ ವೇಳೆ ₹660 ಕೋಟಿ ಕಡಿಮೆ ಇರುವುದು ಕಂಡುಬಂದಿದೆ. ಶಿವಾನಂದ ಬಳಿ ಇರುವ ಆಸ್ತಿ, ವಸ್ತುಗಳನ್ನೆಲ್ಲ ಮುಟ್ಟುಗೋಲು ಹಾಕಿಕೊಂಡರೆ, ₹330 ಕೋಟಿ ರಿಕವರಿ ಆಗುತ್ತದೆ' ಎಂದರು.

'ಶಿವಾನಂದ ಅವರ 30 ಬ್ಯಾಂಕ್ ಖಾತೆಗಳು ಸಿಕ್ಕಿವೆ. ಇದರಲ್ಲಿ 7 ಖಾತೆಗಳಲ್ಲಿ ಹೆಚ್ಚಿನ ಹಣ ವರ್ಗಾವಣೆಯಾಗಿದೆ. ಒಂದು ಖಾತೆಯಲ್ಲಿ ಹಣ ವರ್ಗಾವಣೆಗೆ ಸಂಬಂಧಿಸಿದಂತೆ 36,200 ಪುಟಗಳಷ್ಟು ಹಿಸ್ಟರಿ ಸಿಕ್ಕಿದೆ' ಎಂದರು.

'ರೆಡ್ ಅಲರ್ಟ್': ಇಂದು ಭಾರಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವೆಡೆ ಸೋಮವಾರ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, 'ರೆಡ್ ಅಲರ್ಟ್' ನೀಡಿದೆ.

ಹಲವು ಜಿಲ್ಲೆಗಳಲ್ಲಿ ಗಾಳಿ ಸಹಿತ ಜೋರು ಮಳೆಯಾಗುವ ಸಾಧ್ಯತೆ ಇದೆ. ಉಡುಪಿ, ದಕ್ಷಿಣ ಕನ್ನಡಕ್ಕೆ 'ರೆಡ್ ಅಲರ್ಟ್' ಘೋಷಿಸಿದರೆ, ರಾಯಚೂರು, ಧಾರಾವಾಡ, ಹಾವೇರಿ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಘೋಷಿಸಿದೆ.

ಬೀದರ್, ಕಲಬುರ್ಗಿ, ಯಾದಗಿರಿ, ವಿಜಯಪುರ, ಬಾಗಲಕೋಟೆ, ಗದಗ, ಕೊಪ್ಪಳ, ಬೆಳಗಾವಿ, ತುಮಕೂರು, ಹಾಸನ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಂಭವ ಇದೆ ಎಂದು ಇಲಾಖೆ ತಿಳಿಸಿದೆ.

ಜಿಲ್ಲೆಗಳಲ್ಲಿ ಹಲವೆಡೆ ಗಂಟೆಗೆ 40 ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಬೀಸಬಹುದು. ಕರಾವಳಿಯಲ್ಲಿ ಪ್ರತಿ ಗಂಟೆಗೆ 50 ರಿಂದ 60 ಕಿ.ಮೀ. ವೇಗದಲ್ಲಿ ಗಾಳಿ ಬೀಸಲಿದ್ದು, ಮೀನುಗಾರರು ಸಮುದ್ರ ಪ್ರದೇಶಗಳಿಗೆ ಇಳಿಯದಂತೆ ಸೂಚಿಸಲಾಗಿದೆ.

ಬೆಂಗಳೂರಿನಲ್ಲಿ ಸಂಜೆ ಮೋಡ ಕವಿದ ವಾತಾವರಣ ಇರಲಿದ್ದು, ಹಲವು ಪ್ರದೇಶಗಳಲ್ಲಿ ಗಾಳಿ ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಗರಿಷ್ಠ ಉಷ್ಣಾಂಶ 30 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 21 ಡಿಗ್ರಿ ಸೆಲ್ಸಿಯಸ್ ಇರಲಿದೆ ಎಂದು ಇಲಾಖೆ ತಿಳಿಸಿದೆ.

'ಯಾರಿಂದಲೂ ಆಕ್ರೋಶ ಇರಲಿಲ್ಲ'

ಪ್ರಜಾವಾಣಿ ವಾರ್ತೆ



ಯತೀಂದ್ರ ಸಿದ್ಧರಾಮಯ್ಯ

ಹುಬ್ಬಳ್ಳಿ: 'ಮುಖ್ಯಮಂತ್ರಿ ಬದಲಾವಣೆ ಪಕ್ಷದ ಆಂತರಿಕ ವಿಷಯ. ಹೈಕಮಾಂಡ್ ನಿರ್ಣಯದಂತೆ ಸಿದ್ಧರಾಮಯ್ಯ ರಾಜೀನಾಮೆ ನೀಡಿದ್ದಾರೆ. ಯಾರಿಂದಲೂ ಆಕ್ರೋಶ ವ್ಯಕ್ತವಾಗಿರಲಿಲ್ಲ' ಎಂದು ನಗರಾಭಿವೃದ್ಧಿ ಸಚಿವ ಯತೀಂದ್ರ ಸಿದ್ಧರಾಮಯ್ಯ ಹೇಳಿದರು.

'ಕರ್ನಾಟಕದಲ್ಲಿ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲು ಕಾಂಗ್ರೆಸ್ ಸರ್ಕಾರದ ವಿರುದ್ಧ ಇದ್ದ ಜನಾಕ್ರೋಶ ಕಾರಣ' ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆಗೆ ಭಾನುವಾರ ನಗರದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಜನರ ಕಲ್ಯಾಣ ನಮಗೆ ಮುಖ್ಯ' ಎಂದರು.

'ಎಲ್ಲರಿಗೂ ಅವರವರ ಧರ್ಮದ ಬಗ್ಗೆ ಅಭಿಮಾನ, ಗೌರವ ಇರುತ್ತದೆ. ಅದೇ ಕಾರಣಕ್ಕೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಾನು ಹಿಂದೂ ಎಂದು ಹೇಳಿದ್ದಾರೆ. ಅದರಲ್ಲಿ ಯಾವುದೇ ತಪ್ಪಿಲ್ಲ' ಎಂದು ಹೇಳಿದರು.

'ಪೆಟ್ರೋಲ್, ಅಡುಗೆ ಅನಿಲ ದರ ಹೆಚ್ಚಳ ಮಾಡುವ ಮೂಲಕ ಕೇಂದ್ರ ಸರ್ಕಾರ ಜನವಿರೋಧಿ ಆಡಳಿತ ನಡೆಸುತ್ತಿದೆ' ಎಂದು ಆರೋಪಿಸಿದರು.

ಇದೇನಾ ಅಚ್ಛೇ ದಿನ್- ಈಶ್ವರ ಖಂಡ್ರೆ

ಬೀದರ್: ಗೃಹ ಬಳಕೆಯ ಅನಿಲ ಸಿಲಿಂಡರ್ ದರವನ್ನು ಮತ್ತೆ ಹೆಚ್ಚಿಸಿರುವ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ, ಇದೇನಾ ಅಚ್ಛೇ ದಿನ್ ಎಂದು ಪ್ರಶ್ನಿಸಿದ್ದಾರೆ.

'ಕಳೆದ ಮೂರು ತಿಂಗಳಲ್ಲಿ ಎರಡನೇ ಬಾರಿಗೆ ಗೃಹ ಬಳಕೆ ಅಡುಗೆ ಅನಿಲ ದರ ಏರಿಕೆ ಮಾಡಲಾಗಿದೆ. ಸಾರ್ವಜನಿಕರ ಮೇಲೆ ಸುಮಾರು ₹90 ಹೊರೆ ಬಿದ್ದಿದೆ. ಇದರಿಂದ ಬಡವರು, ಮಧ್ಯಮ ವರ್ಗದವರು ನಲುಗಿ ಹೋಗಿದ್ದಾರೆ. ಇದೆಲ್ಲವೂ ಕೇಂದ್ರ ಸರ್ಕಾರದ ದುರಾಡಳಿತದ ಫಲ' ಎಂದು ಅವರು ಟೀಕಿಸಿದ್ದಾರೆ.

'ಕಾಂಗ್ರೆಸ್ ನೇತೃತ್ವದ ಯುಪಿಎ ಕಾರ್ಯಕಾಲದಲ್ಲಿ ₹3 ರಿಂದ ₹4 ಹೆಚ್ಚಳವಾದರೂ ತಲೆಯ ಮೇಲೆ ಗ್ಯಾಸ್ ಸಿಲಿಂಡರ್ ಹೊತ್ತು ಪ್ರತಿಭಟನೆ ಮಾಡುತ್ತಿದ್ದ ಬಿಜೆಪಿಗರು ಈಗ ಏಕೆ ಬಾಯಿಗೆ ಬೀಗ ಹಾಕಿಕೊಂಡಿದ್ದಾರೆ. ಈಗ ಇವರ ಬಡವರ ಪರ ಕಾಳಜಿ ಎಲ್ಲಿ ಹೋಯಿತು' ಎಂದು ಭಾನುವಾರ ಪ್ರಕಟಣೆಯಲ್ಲಿ ಪ್ರಶ್ನಿಸಿದ್ದಾರೆ.

ಕೇಂದ್ರಕ್ಕೆ ಇತಿಮಿತಿ ಇಲ್ಲ: ಪರಮೇಶ್ವರ

ತುಮಕೂರು: ಕೇಂದ್ರ ಸರ್ಕಾರಕ್ಕೆ ಇತಿಮಿತಿ ಇಲ್ಲದಂತಾಗಿದೆ. ಒಂದು ತಿಂಗಳಲ್ಲಿ ಎರಡು ಬಾರಿ ಗೃಹ ಬಳಕೆ ಅನಿಲ ಸಿಲಿಂಡರ್ ದರ ಏರಿಕೆ ಮಾಡಿದೆ ಎಂದು ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರ ಜತೆಗೆ ಮಾತನಾಡಿ, 'ಈಗಾಗಲೇ ₹29 ಹೆಚ್ಚಿಸಲಾಗಿದೆ. ಯುದ್ಧದ ಪರಿಸ್ಥಿತಿ ನಮಗೂ ಅರ್ಥವಾಗುತ್ತದೆ. ಸರ್ಕಾರ ಜನರ ಹಿತ ಕಾಯುವ ಕೆಲಸ ಮಾಡಬೇಕು. ಆದರೆ, ಕೇಂದ್ರ ಇದಕ್ಕೆ ವಿರುದ್ಧವಾಗಿದೆ. ಪೆಟ್ರೋಲ್, ಡೀಸೆಲ್ ಬೆಲೆಯೂ ಜಾಸ್ತಿಯಾಗಿದೆ. ಸಿಲಿಂಡರ್ ಬೆಲೆ ಕಡಿಮೆ ಮಾಡಬೇಕು' ಎಂದು ಒತ್ತಾಯಿಸಿದರು.

ಚಾಕು ಇರಿದು ಅಪ್ಪ, ಅಕ್ಕನ ಕೊಲೆ

ಒಂದನೇ ಪುಟದಿಂದ...

ರಾತ್ರಿ 10.30ರ ಸುಮಾರಿಗೆ ವೆಂಕಟನಾಯ್ಡು ಮಲಗಿದ್ದ ಕೊಠಡಿಯಲ್ಲಿ ಗಲಾಟೆಯಾಗುತ್ತಿದ್ದ ಸದ್ದು ಕೇಳಿದ್ದು ಬಾಗಿಲು ತೆರೆಯಿರಿ ಎಂದು ಅರಚಿದ್ದಾರೆ. ಆಗ ವೆಂಕಟನಾಯ್ಡು ಅವರ ತಂದೆ ತಾತಾರಾವ್ ಕೊಠಡಿ ಬಾಗಿಲು ತೆರೆಯಲು ಪ್ರಯತ್ನಿಸಿದರೂ ಮೊದಲು ಸಾಧ್ಯವಾಗಿಲ್ಲ. ಬಳಿಕ ನೆರೆಯವರ ಸಹಾಯ ಪಡೆದು ಬಾಗಿಲು ಮುರಿದಾಗ ಮಗ, ಸೊಸೆ ಹಾಗೂ ಮೊಮ್ಮಗಳು ರಕ್ತದ ಮಡುವಿನಲ್ಲಿ ಬಿದ್ದಿದ್ದು ಕಂಡಿದೆ. ಪ್ರಗತಿ ಸ್ಥಳದಲ್ಲಿಯೇ ಮೃತಪಟ್ಟರೆ, ವೆಂಕಟನಾಯ್ಡು ಆಸ್ಪತ್ರೆಯಲ್ಲಿ ಜೀವ ಕಳೆದುಕೊಂಡಿದ್ದಾರೆ.

'ಮೊಮ್ಮಗ ಏಕಾಏಕಿ ಸಿಟ್ಟಿಗೆ ಬಂದು ಮನೆಯಲ್ಲಿದ್ದ ಚಾಕು ತೆಗೆದುಕೊಂಡು ಮೊಮ್ಮಗಳು ಪ್ರಗತಿಗೆ ಚುಚ್ಚಿ ಕೊಲೆ ಮಾಡಿದ್ದಾನೆ. ಅಪ್ಪ-ಅಮ್ಮನಿಗೂ ಚುಚ್ಚಿದ್ದು ತಾನೂ ಕುತ್ತಿಗೆ ಕೊಯ್ದು ಕೊಂಡಿದ್ದಾನೆ. ಆತನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಅವರ ತಾತ ನೀಡಿದ ದೂರಿನ ಮೇರೆಗೆ ಗಂಗಾವತಿ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಮೃತ ಪ್ರಗತಿ, ವೆಂಕಟನಾಯ್ಡು

> ಬಾಲಕ ಚಾಕುವಿನಿಂದ ಇರಿದಿದ್ದಾನೆ ಎಂದು ದೂರು ನೀಡಿದ್ದರಿಂದ ಎಫ್‌ಐಆರ್ ದಾಖಲಿಸಿಕೊಂಡಿದ್ದೇವೆ. ಆನ್‌ಲೈನ್ ಮೊಬೈಲ್ ಗೀಳು ಸೇರಿ ಎಲ್ಲ ಆಯಾಮಗಳಿಂದಲೂ ತನಿಖೆ ನಡೆಸಲಾಗುತ್ತಿದೆ
> **ಡಾ. ರಾಮ್ ಎಲ್. ಅರಸಿದ್ಧಿ,** ಎಸ್‌ಪಿ

ಕೃತ್ಯ ಎಸಗಿದ ಹುಡುಗನ ವಯಸ್ಸು 18 ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಆದರೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ಧಿ 'ಬಾಲಕನಿಗೆ 18 ವರ್ಷಗಳಾಗಿಲ್ಲ' ಎಂದು ಗ್ರಾಮಕ್ಕೆ ಭೇಟಿ ನೀಡಿದಾಗ ತಿಳಿಸಿದರು.

ಮಳೆ ವಿಳಂಬವಾದರೆ ನೀರಿನ ಮಟ್ಟ ಮತ್ತಷ್ಟು ಕುಸಿಯುವ ಸಂಭವ

ಕೆಆರ್‌ಎಸ್: 81 ಅಡಿಗೆ ಕುಸಿದ ನೀರಿನ ಮಟ್ಟ


• ಗಣಂಗೂರು ನಂಜೇಗೌಡ

ಶ್ರೀರಂಗಪಟ್ಟಣ(ಮಂಡ್ಯ): ಕೃಷ್ಣರಾಜ ಸಾಗರ ಅಣೆಕಟ್ಟೆಯ (ಕೆಆರ್‌ಎಸ್) ನೀರಿನ ಮಟ್ಟ 81.36 ಅಡಿಗೆ ಕುಸಿದಿದ್ದು, ಕಾವೇರಿ ಕಣಿವೆಯಲ್ಲಿ ಮಳೆ ವಿಳಂಬವಾದರೆ ನೀರಿನ ಮಟ್ಟ ಮತ್ತಷ್ಟು ಕುಸಿಯುವ ಸಂಭವವಿದೆ. ಕೆಆರ್‌ಎಸ್ ನೀರು ಸಂಗ್ರಹ ಗರಿಷ್ಠ ಮಟ್ಟ 124.80 ಅಡಿ ಇದೆ.

ಕಳೆದ ವರ್ಷ ಸುರಿದ ಉತ್ತಮ ಮುಂಗಾರು ಮಳೆಯಿಂದ ಜೂನ್ ಮೊದಲ ವಾರದಿಂದಲೇ ಅಣೆಕಟ್ಟೆಗೆ ನೀರು ಹರಿದು ಬರಲಾರಂಭಿಸಿತ್ತು. ಕಳೆದ ವರ್ಷ ಇದೇ ಜೂನ್ 6ರಂದು 107.68 ಅಡಿ ನೀರು ಸಂಗ್ರಹವಾಗಿತ್ತು. ಒಳ ಹರಿವು 6,513 ಕ್ಯುಸೆಕ್ ದಾಖಲಾಗಿತ್ತು. ಜೂನ್ 26ರ ಹೊತ್ತಿಗೆ ಜಲಾಶಯ ಭರ್ತಿಯಾಗಿತ್ತು. ಜೂನ್ 29ರಂದು ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಬಾಗಿನ ಅರ್ಪಿಸಿದ್ದರು. ಜೂನ್‌ಲ್ಲೇ ಬಾಗಿನ ಅರ್ಪಿಸಿದ್ದು ಅಣೆಕಟ್ಟೆ ನಿರ್ಮಾಣದ ಇತಿಹಾಸದಲ್ಲೇ ಮೊದಲ ಬಾರಿ.ಆದರೆ, ಈ ವರ್ಷ ಒಳ ಹರಿವಿನ ಪ್ರಮಾಣ 528 ಕ್ಯುಸೆಕ್ ಮಾತ್ರ ಇದೆ. ಕುಡಿಯುವ ಉದ್ದೇಶಕ್ಕೆ 436 ಕ್ಯುಸೆಕ್ ನೀರು ಬಿಡಲಾಗುತ್ತಿದೆ.

ಗರಿಷ್ಠ 49.5 ಟಿಎಂಸಿ ಅಡಿ ನೀರು ಸಂಗ್ರಹ ಸಾಮರ್ಥ್ಯದ ಅಣೆಕಟ್ಟೆಯಲ್ಲಿ ಸದ್ಯ 11.399 ಟಿಎಂಸಿ ಅಡಿಯಷ್ಟು ಮಾತ್ರ ನೀರಿದೆ.

ಕೃಷಿಗೆ ನೀರು ಇಲ್ಲ: 'ಇನ್ನೂ 2 ತಿಂಗಳು ಮಳೆಯಾಗದಿದ್ದರೂ ಕೆಆರ್‌ಎಸ್ ಮತ್ತು ಕಬಿನಿ ಅಣೆಕಟ್ಟೆಗಳಲ್ಲಿ ಲಭ್ಯವಿರುವ ನೀರನ್ನು ಕುಡಿಯುವ ಉದ್ದೇಶಕ್ಕೆ ನಗರಗಳಿಗೆ ಪೂರೈಸಬಹುದು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಕೃಷಿಗೆ ನೀರು ಕೊಡಲು ಸಾಧ್ಯವಿಲ್ಲ. ನೀರಿನ ಮಟ್ಟ 110 ಅಡಿಗಳಷ್ಟು ಇದ್ದು ನಿತ್ಯ 2 ಸಾವಿರ ಕ್ಯುಸೆಕ್‌ಗಳಷ್ಟಾದರೂ ನೀರು ಜಲಾಶಯಕ್ಕೆ ಹರಿದು ಬಂದರೆ ಮುಂಗಾರು ಹಂಗಾಮಿಗೆ ನೀರು ಕೊಡುವ ಬಗ್ಗೆ ನೀರಾವರಿ ಸಲಹಾ ಸಮಿತಿ ತೀರ್ಮಾನಿಸುತ್ತದೆ' ಎನ್ನುತ್ತಾರೆ ನೀರಾವರಿ ನಿಗಮದ ಅಧಿಕಾರಿಗಳು.



ಕೆಆರ್‌ಎಸ್ ಅಣೆಕಟ್ಟೆಯಲ್ಲಿ ನೀರಿನ ಮಟ್ಟ ಶನಿವಾರ 81.36 ಅಡಿಗೆ ಕುಸಿದಿದೆ

ನೀರೆತ್ತಲು ಕಷ್ಟವಾಗಬಹುದು

ಕುಡಿಯಲು ಮತ್ತು ಕೃಷಿ ಉದ್ದೇಶಕ್ಕೆ ನೀರು ಹರಿಸುವ ಉದ್ದೇಶದಿಂದ ಅಣೆಕಟ್ಟೆಯಲ್ಲಿ ಪ್ಲಸ್ 50 ಅಡಿವರೆಗೆ ಗೇಟ್ ಅಳವಡಿಸಲಾಗಿದೆ. ಆದರೆ ನೀರು 'ಡೆಡ್ ಸ್ಟೋರೇಜ್', ಅಂದರೆ 60 ಅಡಿಗೆ ತಲುಪಿದರೆ ಒತ್ತಡ ಪ್ರಮಾಣ ಕ್ಷೀಣಿಸಿ ಜಲಾಶಯದಿಂದ ನೀರು ಹೊರ ಹರಿಯುವ ವೇಗ ಕಡಿಮೆಯಾಗುತ್ತದೆ. 'ಡೆಡ್ ಸ್ಟೋರೇಜ್' ಮಟ್ಟ ತಲುಪಿದಾಗ ಜಲಾಶಯದಲ್ಲಿ 4.5 ಟಿಎಂಸಿ ಅಡಿ ನೀರು ಮಾತ್ರ ಉಳಿಯಲಿದ್ದು, ಆ ನೀರನ್ನು ಮೇಲೆತ್ತಲು ಸಾಧ್ಯವಿಲ್ಲದ ಸ್ಥಿತಿ ನಿರ್ಮಾಣವಾಗಲಿದೆ. ಈ ನಡುವೆ ಜೂನ್‌ನಿಂದ ತಮಿಳುನಾಡಿಗೆ ನೀರು ಹರಿಸಬೇಕಾದ ಅನಿವಾರ್ಯತೆಯೂ ಇದೆ. ವಾರ್ಷಿಕ 177.25 ಟಿಎಂಸಿ ಅಡಿಯಷ್ಟು ನೀರು ಕೊಡಬೇಕಿದೆ. ಜಲಾಶಯಕ್ಕೆ ಸಕಾಲಕ್ಕೆ ನೀರು ಹರಿದು ಬರದಿದ್ದರೆ ಕಷ್ಟವಾಗಲಿದೆ ಎನ್ನುತ್ತಾರೆ ಅಧಿಕಾರಿಗಳು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 **editpage@prajavani.co.in**



ಸುಭಾಷಿತ

ರೂಪ ಕಣ್ಣುಗಳಿಗೆ ಸೀಮಿತ. ಗುಣ ಆತ್ಮದವರೆಗೆ ತಲಪುವ ಸಾಧನ.

-ತ್ರಿವೇಣಿ

ಸಂಪಾದಕೀಯ

ಅಗ್ನಿ ಅವಘಡಗಳ ಮರುಕಳಿಕೆ ತಪ್ಪುಗಳಿಂದ ಕಲಿಯದ ಪಾಠ

ಅಗ್ನಿ ಅವಘಡಗಳನ್ನು ನಿಭಾಯಿಸಲು ಅಗತ್ಯವಾದ ಸುರಕ್ಷತಾ ವ್ಯವಸ್ಥೆಯಲ್ಲಿನ ಗಂಭೀರ ಲೋಪಗಳನ್ನು, ದೆಹಲಿ ಮತ್ತು ಮುಜಾಫರ್‌ಪುರದಲ್ಲಿ ಸಂಭವಿಸಿರುವ ಮಾರಕ ಅಗ್ನಿ ಅನಾಹುತಗಳು ಬೆಳಕಿಗೆ ತಂದಿವೆ. ಎರಡು ದಿನಗಳ ಅಂತರದಲ್ಲಿ ಸಂಭವಿಸಿರುವ ಎರಡು ದುರಂತಗಳು, ಅಗ್ನಿ ಸುರಕ್ಷತಾ ನಿಯಮಗಳ ಉಲ್ಲಂಘನೆಯು ನಿರಂತರ ಬೆದರಿಕೆಯಾಗಿ ಉಳಿದಿರುವುದನ್ನು ಸೂಚಿಸುವಂತಿವೆ. ದೆಹಲಿಯಲ್ಲಿನ ಹೋಟೆಲ್ ಮತ್ತು ವಸತಿಗೃಹದಲ್ಲಿ ಸಂಭವಿಸಿರುವ ಭೀಕರ ಬೆಂಕಿ ಅವಘಡದಲ್ಲಿ 21 ಮಂದಿ ಮೃತಪಟ್ಟಿದ್ದಾರೆ. ಬಿಹಾರದ ಮುಜಾಫರ್‌ಪುರದ ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಉಂಟಾದ ಅವಘಡದಲ್ಲಿ ಕನಿಷ್ಠ ಐವರು ಬೆಂಕಿಗೆ ಬಲಿಯಾಗಿದ್ದಾರೆ. ಕಳೆದ ಮಾರ್ಚ್‌ನಲ್ಲಿ ಕಟಕ್‌ನ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಸಂಭವಿಸಿದ್ದ ಅಗ್ನಿ ಅವಘಡ 12 ಜೀವಗಳನ್ನು ಬಲಿ ತೆಗೆದುಕೊಂಡಿತ್ತು. 2024ರಲ್ಲಿ ಪೂರ್ವ ದೆಹಲಿಯ ಆಸ್ಪತ್ರೆಯೊಂದರಲ್ಲಿ ಸಂಭವಿಸಿದ ದುರಂತದಲ್ಲಿ ಏಳು ನವಜಾತ ಶಿಶುಗಳು ಸುಟ್ಟುಹೋಗಿದ್ದವು. 2011ರಲ್ಲಿ ಕೋಲ್ಕತ್ತದಲ್ಲಿನ ಆಸ್ಪತ್ರೆಯೊಂದರಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ 90ಕ್ಕೂ ಹೆಚ್ಚು ಮಂದಿ ಸಾವಿಗೀಡಾಗಿದ್ದರು. 2025ರ ಏಪ್ರಿಲ್‌ನಲ್ಲಿ ಕೋಲ್ಕತ್ತದ ಹೋಟೆಲೊಂದರಲ್ಲಿ ಸಂಭವಿಸಿದ ಅಗ್ನಿ ಅವಘಡವು 14 ಜನರನ್ನು ಬಲಿ ತೆಗೆದುಕೊಂಡಿತ್ತು. ಈ ಘಟನೆಗಳು, ದಶಕಗಳ ಕಾಲ ಮುಂದುವರಿದಿರುವ ಸುರಕ್ಷತಾ ವ್ಯವಸ್ಥೆಯಲ್ಲಿ ವೈಫಲ್ಯಗಳ ನಿರಂತರತೆಯನ್ನು ಸಂಕೇತಿಸುವಂತಿವೆ; ಹಳೆಯ ತಪ್ಪುಗಳಿಂದ ಪಾಠ ಕಲಿಯಲು ವಿಫಲವಾದ ವ್ಯವಸ್ಥೆಯ ಭಂಡತನಕ್ಕೆ ನಿದರ್ಶನದಂತಿವೆ.



ಬಹುತೇಕ ಅಗ್ನಿ ಅವಘಡಗಳಲ್ಲಿ ಮನುಷ್ಯಸಹಜ ಅಚಾತುರ್ಯಕ್ಕಿಂತಲೂ, ಹಳೆಯ ತಪ್ಪುಗಳಿಂದ ಪಾಠ ಕಲಿಯದ ಮೇಲ್ವಿಚಾರಣಾ ವ್ಯವಸ್ಥೆಯಲ್ಲಿನ ವೈಫಲ್ಯದ ಪಾತ್ರವೇ ಹೆಚ್ಚಾಗಿರುತ್ತದೆ.

ದೇಶದಲ್ಲಿನ ಆಸ್ಪತ್ರೆಗಳು, ರೆಸ್ಟೋರೆಂಟ್‌ಗಳು, ಚಿತ್ರಮಂದಿರಗಳು ಮತ್ತು ಕಚೇರಿಗಳು ಅಗ್ನಿ ಅವಘಡಗಳನ್ನು ನಿರ್ವಹಿಸಲು ಪರಿಣಾಮಕಾರಿಯಾಗಿ ಸಜ್ಜಾಗಿಲ್ಲ. ಬಹುತೇಕ ಅಗ್ನಿ ಆಕಸ್ಮಿಕಗಳ ಹಿಂದಿರುವ ಕಾರಣಗಳು ಒಂದೇ ಬಗೆಯವಾಗಿವೆ: ವಿದ್ಯುತ್ ಸರ್ಕೀಟ್‌ನಲ್ಲಿನ ದೋಷ, ಅವೈಜ್ಞಾನಿಕವಾಗಿ ನಿರ್ಮಿಸಿದ ಹಾಗೂ ಜನಸಂದಣಿಯಿಂದ ಕಿಕ್ಕಿರಿದ ಕಟ್ಟಡಗಳು, ಸಮರ್ಪಕ ವಾತಾನುಕೂಲ ವ್ಯವಸ್ಥೆ ಇಲ್ಲದಿರುವುದು, ಇಕ್ಕಟ್ಟಾದ ಓಣಿಗಳು ಮತ್ತು ನಿರ್ಗಮನ ಮಾರ್ಗಗಳು, ಬೆಂಕಿ ಶಮನಗೊಳಿಸಲು ಅಗತ್ಯವಾದ ಪ್ರಾಥಮಿಕ ಸಲಕರಣೆಗಳು ಹಾಗೂ ಸುರಕ್ಷಿತ ನಿರ್ಗಮನದ ಬಗೆಗಿನ ಅರಿವಿನ ಕೊರತೆ. ಕಳೆದ ವಾರ ದಕ್ಷಿಣ ದೆಹಲಿಯಲ್ಲಿ ದುರಂತ ಸಂಭವಿಸಿದ ಬಹುಮಹಡಿ ಹೋಟೆಲ್–ವಸತಿಗೃಹವು ಜನನಿಬಿಡ ಸ್ಥಳದಲ್ಲಿದೆ; ಇಕ್ಕಟ್ಟಾದ ರಸ್ತೆಗಳನ್ನು ಹೊಂದಿರುವ ಕಾರಣದಿಂದಾಗಿ ಆ ಪ್ರದೇಶದಲ್ಲಿ ಬೆಂಕಿ ನಂದಿಸುವ ಕಾರ್ಯಾಚರಣೆ ಕಷ್ಟಕರವಾಗಿತ್ತು. ವಸತಿಗೃಹದಲ್ಲಿ ತಂಗಿದ್ದ ಕೆಲವು ಅತಿಥಿಗಳು ಜೀವ ಉಳಿಸಿಕೊಳ್ಳಲು ಮಹಡಿಗಳಿಂದ ಕೆಳಕ್ಕೆ ಜಿಗಿದಿದ್ದಾರೆ. ವಿದೇಶಿ ನಾಗರಿಕರೂ ಸೇರಿದಂತೆ ಕೆಲವು ಅತಿಥಿಗಳು ವೈದ್ಯಕೀಯ ಚಿಕಿತ್ಸೆಗಾಗಿ ರಾಜಧಾನಿಗೆ ಬಂದವರಾಗಿದ್ದರು. ಮುಜಾಫರ್‌ಪುರದ ಆಸ್ಪತ್ರೆಯಲ್ಲಿನ ಅಗ್ನಿ ಆಕಸ್ಮಿಕಕ್ಕೆ ವಿದ್ಯುತ್ ಶಾರ್ಟ್ ಸರ್ಕೀಟ್ ಕಾರಣ ಎನ್ನಲಾಗಿದೆ. ಸುರಕ್ಷತಾ ಕ್ರಮಗಳನ್ನು ಸಮರ್ಪಕವಾಗಿ ಪಾಲಿಸದ ಕಟ್ಟಡಗಳಲ್ಲಿ, ವಿಶೇಷವಾಗಿ ಹೆಚ್ಚಿನ ಜನಸಂದಣಿ ಇರುವ ಆಸ್ಪತ್ರೆಗಳಂತಹ ಸ್ಥಳಗಳಲ್ಲಿ ವಿದ್ಯುತ್ ಅವಘಡಗಳ ಪರಿಣಾಮ ಎಷ್ಟು ಘೋರವಾಗಿರಬಹುದು ಎನ್ನುವುದನ್ನು ಅನೇಕ ಅಗ್ನಿ ಅವಘಡಗಳು ತೋರಿಸಿವೆ.

ದೆಹಲಿಯಲ್ಲಿ ದುರಂತ ಸಂಭವಿಸಿರುವ ಹೋಟೆಲ್, ದೆಹಲಿಯ ಅಗ್ನಿಶಾಮಕ ಸೇವಾ ಇಲಾಖೆಯಿಂದ ಕಾರ್ಯಾಚರಣೆಗೆ ಸಂಬಂಧಿಸಿದ ಅನುಮತಿಯನ್ನು ಹೊಂದಿರಲಿಲ್ಲ. ಆರು ಕೊಠಡಿಗಳಿಗಷ್ಟೇ ಅನುಮತಿ ಪಡೆದಿದ್ದ ಕಟ್ಟಡದಲ್ಲಿ 25 ಕೊಠಡಿಗಳನ್ನು ಅತಿಥಿಗಳಿಗೆ ನೀಡಲಾಗುತ್ತಿತ್ತು. ಪ್ರವೇಶ ಹಾಗೂ ನಿರ್ಗಮನಕ್ಕೆ ಮೀಸಲಾದ ಎರಡು ದ್ವಾರಗಳನ್ನಷ್ಟೇ ಹೋಟೆಲ್ ಹೊಂದಿತ್ತು. ಆತಿಥ್ಯ ವಲಯದಲ್ಲಿ ಸಾಮಾನ್ಯವಾಗಿ ಕಂಡುಬರುವ ಇಂಥ ಅಪಾಯದ ಲಕ್ಷಣಗಳನ್ನು, ದುರಂತ ನಡೆದ ನಂತರವಷ್ಟೇ ಸರಿಪಡಿಸುವ ಪ್ರಯತ್ನಗಳು ನಡೆಯುತ್ತವೆ. ಅಗ್ನಿ ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸಿ ನಿರ್ಮಾಣಗೊಳ್ಳುವ ಕಟ್ಟಡಗಳಿಗೆ ಅನುಮತಿ ನೀಡುವ ಸಕ್ಷಮ ಪ್ರಾಧಿಕಾರಗಳೂ ಅಕ್ರಮಗಳಲ್ಲಿ ಸಹಭಾಗಿಗಳಾಗಿವೆ. ಆತಿಥ್ಯ ವಲಯಕ್ಕೆ ಸಂಬಂಧಿಸಿದ ಸಂಸ್ಥೆಗಳಲ್ಲಿ ಅಗ್ನಿ ಸುರಕ್ಷತೆಯನ್ನು ಖಚಿತಪಡಿಸುವ ನಿಟ್ಟಿನಲ್ಲಿ ಕಾರ್ಯ ಯೋಜನೆ ರೂಪಿಸುವಂತೆ ದೆಹಲಿ ಹೈಕೋರ್ಟ್ ಕಳೆದ ಜನವರಿಯಲ್ಲಿ ಅಧಿಕಾರಿಗಳಿಗೆ ನಿರ್ದೇಶನ ನೀಡಿತ್ತು. ಕಳೆದ ವಾರ ದುರಂತ ಸಂಭವಿಸಿದ ನಂತರ, ದೆಹಲಿ ಮಹಾನಗರ ಪಾಲಿಕೆ ಅಕ್ರಮ ವಾಣಿಜ್ಯ ಸಂಸ್ಥೆಗಳ ವಿರುದ್ಧ ಕಾರ್ಯಾಚರಣೆ ಆರಂಭಿಸಿದೆ. ಬೆಂಕಿ ಬಿದ್ದಾಗ ಬಾವಿ ತೋಡುವ ಇಂತಹ ಕ್ರಮಗಳು ಹೊಸದೇನಲ್ಲ. ಮನುಷ್ಯಸಹಜ ತಪ್ಪುಗಳ ಬದಲು, ಪಾಲಿಸಲೇಬೇಕಾದ ಮಾರ್ಗಸೂಚಿಗಳನ್ನು ದುರ್ಬಲಗೊಳಿಸುವುದರಿಂದ ದುರಂತಗಳು ಸಂಭವಿಸುತ್ತಿವೆ. ಈ ದುರಂತಗಳು ಮೇಲ್ವಿಚಾರಣೆ ನಡೆಸಬೇಕಾದ ಆಡಳಿತ ವ್ಯವಸ್ಥೆಯ ವೈಫಲ್ಯದ ಕಾರಣದಿಂದಾಗಿಯೇ ಮರುಕಳಿಸುತ್ತಿವೆ.

ಜಾಲತಾಣ

ಜನರ ಮೇಲೆ ಹೊರೆ



ಜನರ ಆದಾಯ ಹೆಚ್ಚಾಗುತ್ತಿಲ್ಲ. ಆದರೆ, ಅಗತ್ಯವಸ್ತುಗಳ ಬೆಲೆ ಮಾತ್ರ ನಿರಂತರವಾಗಿ ಏರುತ್ತಿದೆ. ಗೃಹ ಬಳಕೆಯ ಸಿಲಿಂಡರ್ ಮೇಲಿನ ₹29 ಹೆಚ್ಚುವರಿ ಹೊರೆಯನ್ನು ಸಾಮಾನ್ಯ ಕುಟುಂಬಗಳು ಹೇಗೆ ಭರಿಸಬೇಕು?

ಸಮೀಕ್ಷಾ ಯಶೋದಾ, 'ಎಕ್ಸ್'ನಿಂದ

ಕಿಡಿನುಡಿ



ಒಂದು ಕಡೆ ಪೆಟ್ರೋಲ್–ಡೀಸೆಲ್ ಬೆಲೆ ಏರಿಕೆ, ಮತ್ತೊಂದು ಕಡೆ ಎಲ್‌ಪಿಜಿ ಸಿಲಿಂಡರ್ ಬೆಲೆ ಏರಿಕೆ! ಆ ಕಡೆಯಿಂದ ರೂಪಾಯಿ ಮೌಲ್ಯ ಕುಸಿತ, ಈ ಕಡೆಯಿಂದ ದೇಶವಾಸಿಗಳ ಜೀವನಮಟ್ಟವೂ ಕುಸಿತ! ಮೋದಿ ಮಾಯಾಜಾಲ ಸೃಷ್ಟಿಸಿರುವ ಅಧ್ವಾನಗಳು ಒಂದೆರಡಲ್ಲ.

ಸಂತೋಷ್ ಲಾಡ್, ಕಾಂಗ್ರೆಸ್ ಶಾಸಕ

25 ವರ್ಷಗಳ ಹಿಂದೆ

ಶುಕ್ರವಾರ, 8-6-2001

• ಕಾವೇರಿ: ವಾಸ್ತವ ಸ್ಥಿತಿ ಅಧ್ಯಯನಕ್ಕೆ ತಜ್ಞ ಸಮಿತಿ

ನವದೆಹಲಿ, ಜೂನ್ 7– ಕಾವೇರಿ ನ್ಯಾಯಮಂಡಳಿಯ ಮಧ್ಯಂತರ ಆದೇಶದ ಜಾರಿಗೆ ರಾಜ್ಯ ಪೂರ್ಣವಾಗಿ ಬದ್ಧವಾಗಿದೆ. ಆದರೆ, ವಾರ–ತಿಂಗಳುಗಳ ಅವಧಿಗೆ ನಿಗದಿಪಡಿಸಲಾದ ನೀರಿನ ಪ್ರಮಾಣವನ್ನು ರಾಜ್ಯದಲ್ಲಿನ ಮಳೆ ಪರಿಸ್ಥಿತಿ ಮತ್ತು ಸ್ಥಳೀಯ ಜಲಾಶಯದಲ್ಲಿನ ನೀರಿನ ಸಂಗ್ರಹವನ್ನು ನೋಡಿಕೊಂಡು ಬಿಡಲಾಗುವುದು ಎಂದು ಕರ್ನಾಟಕ ಇಂದು ತಮಿಳುನಾಡಿಗೆ ಆಶ್ವಾಸನೆ ನೀಡಿತು.

ಇಂದು ನಡೆದ ಕಾವೇರಿ ಪ್ರಾಧಿಕಾರದ ಉಸ್ತುವಾರಿ ಸಮಿತಿಯ 8ನೇ ಸಭೆಯಲ್ಲಿ ತಮಿಳುನಾಡು ಎತ್ತಿದ ಆಕ್ಷೇಪಕ್ಕೆ ಕರ್ನಾಟಕ ಈ ಪ್ರತಿಕ್ರಿಯೆ ನೀಡಿತು.

ಹೊಸ ನೀರಾವರಿ ವರ್ಷ ಪ್ರಾರಂಭವಾದ ಜೂನ್ ತಿಂಗಳ ಮೊದಲ ವಾರದಲ್ಲಿಯೇ ಕರ್ನಾಟಕ ಸರ್ಕಾರ ಮಧ್ಯಂತರ ಆದೇಶದಲ್ಲಿ ನಿಗದಿಪಡಿಸಿದಷ್ಟು ನೀರನ್ನು ಬಿಟ್ಟಿಲ್ಲ ಎಂಬುದು ಆ ರಾಜ್ಯದ ಮುಖ್ಯ ಆರೋಪವಾಗಿತ್ತು.

75 ವರ್ಷಗಳ ಹಿಂದೆ

ಶುಕ್ರವಾರ, 8-6-1951

• ಉನ್ನತಾಧಿಕಾರಿಗಳ ಮೇಲೆ ಕಳ್ಳರ ವಕ್ರದೃಷ್ಟಿ?

ಮುಂಬೈ, ಜೂ. 6– ಮುಂಬೈ ಕಳ್ಳರ ದೃಷ್ಟಿ ಇತ್ತೀಚೆಗೆ ಜನಸಾಮಾನ್ಯನಿಂದ ಸರ್ಕಾರದ ಮತ್ತು ನ್ಯಾಯಾಂಗ ಶಾಖೆಯ ಉನ್ನತಾಧಿಕಾರಿಗಳ ಕಡೆ ತಿರುಗಿದಂತಿದೆ. ನೆನ್ನೆ ರಾತ್ರಿ ಕಳ್ಳರು ಮುಂಬೈ ಶ್ರೇಷ್ಠ ನ್ಯಾಯ ಸ್ಥಾನದ ನ್ಯಾಯಮೂರ್ತಿ ಚೈನಾನಿಯವರ ಮನೆಯನ್ನು ದೋಚಿದರು. ನ್ಯಾಯಮೂರ್ತಿಗಳು ವಿಹಾರಾರ್ಥ ನಗರ ಬಿಟ್ಟು ಹೋಗಿರುವುದರಿಂದ ನಷ್ಟವೆಷ್ಟೆಂಬುದನ್ನು ಪೊಲೀಸರಿಂದ ಅಳೆಯಲಾಗಿಲ್ಲ.

ಈ ಪ್ರಸಂಗಕ್ಕೆ 24 ಗಂಟೆ ಮುಂಚೆ ಚತುರನಾದ ಕಳ್ಳನೊಬ್ಬ ಮುಂಬೈ ಸ್ಥಳೀಯ ಶಾಖಾ ಸಚಿವ ಜೆ.ಡಿ. ವರ್ತಕರ ಕಾವಲಿದ್ದ ಮನೆಗೆ ನುಗ್ಗಿ ನಿದ್ರಿಸುತ್ತಿದ್ದ ಸಚಿವರ ಮುಖದೆದುರಿಗೆ ಇದ್ದ ಚೀಲವೊಂದನ್ನು ಎಗರಿಸಿದ. ಆ ಚೀಲದಲ್ಲಿ ಪಾರ್ಕರ್ ಫೌಂಟೇನ್‌ಪೆನ್, ನಾಲ್ಕು ಚಿನ್ನದ ಗುಂಡಿಗಳು ಮತ್ತು 50 ರೂ. ಗಳಿದ್ದವು. ಸೋಮವಾರ ಬೆಳಿಗ್ಗೆ ಅರ್ಥ ಸಚಿವ ವಿ.ಎಲ್. ಮೆಹ್ತಾರವರು ಗಾಳಿ ವಿಹಾರ ಹೋಗುತ್ತಿದ್ದಾಗ ಇಬ್ಬರು ಚೂರಿ ತೋರಿಸಿ ಅವರ ಚಿನ್ನದ ಗುಂಡಿಗಳನ್ನೂ ಕೋಟನ್ನೂ ಕಿತ್ತುಕೊಂಡರು.

ಒಳಗಿನ ಬುದ್ಧ ಎಚ್ಚರಗೊಂಡಾನೆ?



ವಿಶ್ಲೇಷಣೆ

ಜ್ಯೋತಿ

> ವರ್ತಮಾನದ ಸಂಕಟಗಳಿಂದ ಸಿದ್ಧಾರ್ಥನನ್ನು ದೂರವಿಡಲು ಶುದ್ಧೋದನ ಪ್ರಯತ್ನಿಸಿದ. ವರ್ತಮಾನದಲ್ಲಿ ನಮ್ಮನ್ನೂ ಅಹಿತಕರ ಪ್ರಶ್ನೆಗಳಿಂದ ದೂರವಿಡಲು ವ್ಯವಸ್ಥೆ ಬಯಸುತ್ತಿದೆ. ಬುದ್ಧನೇನೋ ಅರಮನೆಯಿಂದ ಹೊರಬರಲು ಯಶಸ್ವಿಯಾಗಿ, ಪ್ರಶ್ನೆಗಳಿಗೆ ಮುಖಾಮುಖಿಯಾದ. ನಾವೋ ಭ್ರಮೆಯ ಅರಮನೆಗಳಲ್ಲಿ ಸಿಕ್ಕು ಒದ್ದಾಡುತ್ತಿದ್ದೇವೆ.

ಅರಮನೆಯಿಂದ ಹೊರಗೆ ಕಾಲಿಟ್ಟ ಸಿದ್ಧಾರ್ಥನನ್ನು ವಾಸ್ತವ ಜಗತ್ತು ಬೆಚ್ಚಿಬೀಳಿಸಿತು. ಅದು ಅವನಿಗೆ ಬದುಕು, ಆಸೆ, ದುಃಖ ಮತ್ತು ಮಾನವ ಅಸ್ತಿತ್ವದ ಬಗ್ಗೆ ಮೂಲಭೂತ ಪ್ರಶ್ನೆಗಳನ್ನು ಕೇಳುವಂತೆ ಒತ್ತಾಯಿಸಿತು. ಸಿದ್ಧಾರ್ಥನಿಗೆ ವಾಸ್ತವ ದರ್ಶನವಾಗದಂತೆ ಭ್ರಮೆಯ ಅರಮನೆಯಲ್ಲಿ ರಕ್ಷಿಸಲು ಆತನ ತಂದೆ ಪ್ರಯತ್ನಿಸಿದ. ಸುತ್ತಲಿನ ಜಗತ್ತನ್ನು ಪ್ರಶ್ನಿಸದೆ ಮಗ ಸಂತೃಪ್ತ ಜೀವನವನ್ನು ನಡೆಸಬೇಕೆನ್ನುವುದು ತಂದೆಯ ನಿರೀಕ್ಷೆಯಾಗಿತ್ತು. ಆದರೆ, ಸಿದ್ಧಾರ್ಥ ಆ ಭ್ರಮೆಯನ್ನು ಮೀರಿ ಬುದ್ಧನಾದ.

ಇಂದು, ನಾವೆಲ್ಲರೂ ಸಿದ್ಧಾರ್ಥನ ಪರಿಸ್ಥಿತಿಯಲ್ಲಿದ್ದೇವೆ. ನಮ್ಮ ಯುಗದ ಅರಮನೆಯು, ಮೊಬೈಲ್, ಸಾಮಾಜಿಕ ಮಾಧ್ಯಮ, ನಿರಂತರ ಮನರಂಜನೆ, ಗ್ರಾಹಕೀಕರಣ ಮತ್ತು ವೈಯಕ್ತಿಕ ಪ್ರಗತಿಯ ಅನ್ವೇಷಣೆಯಿಂದ ನಿರ್ಮಾಣಗೊಂಡಿದೆ. ಇದನ್ನು ಮಾಹಿತಿ ಯುಗವೆನ್ನುತ್ತೇವೆ. ಇದು ಸತ್ಯವನ್ನು ಮುಸುಕುಗೊಳಿಸುವ ಯುಗವೂ ಹೌದು. ಯಾಕೆಂದರೆ, ಇದು ಅಸಲಿ ಸತ್ಯವನ್ನು ನಿರಂತರವಾಗಿ ಫಿಲ್ಟರ್ ಮಾಡುವ ಯುಗವೆನ್ನುವುದನ್ನು ಅರಿಯದಾಗಿದ್ದೇವೆ. ನಮ್ಮ ಅರಮನೆಯೊಳಗೆ, ಸುಳ್ಳುಗಳು ವೈಭವದಿಂದ ಟ್ರೆಂಡಿಂಗ್ ಆಗುತ್ತವೆ. ನಾವು ಮಾಹಿತಿಗಳನ್ನು ಸಂಗ್ರಹಿಸುತ್ತೇವೆ, ಆದರೆ ಆಳವಾಗಿ ಯೋಚಿಸುವುದಿಲ್ಲ. ನಮ್ಮ ಜಗತ್ತಿನಲ್ಲಿ ಅಗ್ಗದ ಇಂಟರ್ನೆಟ್, ನಿರಂತರ ವಿಷಯಗಳು ಮತ್ತು ತ್ವರಿತ ಯಶಸ್ಸಿನ ಭರವಸೆಯು ಗಮನವನ್ನು ಆಕ್ರಮಿಸಿಕೊಂಡಿರುತ್ತದೆ. ಸಿದ್ಧಾರ್ಥನಿಗೆ ಆಶ್ರಯ ನೀಡಿದ್ದ ಅರಮನೆಯಂತೆ, ಆಧುನಿಕ ಸಮಾಜವೂ ಕಷ್ಟಕರವಾದ ಪ್ರಶ್ನೆಗಳನ್ನು ಅನಿರ್ದಿಷ್ಟವಾಗಿ ಮುಂದೂಡಬಹುದಾದ ಸ್ಥಳವಾಗಿ ಮಾರ್ಪಟ್ಟಿದೆ.

ಅನ್ಯಾಯವು ಅಸ್ತಿತ್ವದಲ್ಲಿರುವುದು ನಮ್ಮ ಕಾಲದ ದುರಂತವಲ್ಲ; ಅನ್ಯಾಯಕ್ಕೆ ಒಗ್ಗಿಕೊಂಡಿರುವುದು ದುರಂತ. ಭ್ರಷ್ಟಾಚಾರವು ದೈನಂದಿನ ಬದುಕಿನಲ್ಲಿ ಎಷ್ಟು ಆಳವಾಗಿ ಬೇರೂರಿದೆಯೆಂದರೆ, ನಾವದನ್ನು ಸಹಜವೆಂದು ಒಪ್ಪಿಕೊಂಡಿದ್ದೇವೆ.

ಪ್ರಭಾವಿಗಳು ಟೆಂಡರ್ ಪಡೆದು ಕಳಪೆ ರಸ್ತೆಗಳನ್ನು ನಿರ್ಮಿಸುತ್ತಾರೆ. ಸಾಮಾನ್ಯ ನಾಗರಿಕರು ಪ್ರಾಣ ಕಳೆದುಕೊಳ್ಳುವ ಮೂಲಕ ಅದಕ್ಕೆ ಬೆಲೆ ತೆರಬೇಕಾಗುತ್ತದೆ. ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯಗಳು, ಮಕ್ಕಳ ಮತ್ತು ಮಹಿಳೆಯರ ಕಳ್ಳಸಾಗಣೆ ಮುಂದುವರಿದಿವೆ. ಅಕ್ರಮ ಮರಳು ಗಣಿಗಾರಿಕೆ, ಅರಣ್ಯ ನಾಶ, ಜಲ ಮೂಲಗಳ ಅತಿಕ್ರಮಣ ಮತ್ತು ಕಲುಷಿತಗೊಳಿಸುವಿಕೆ ಮೂಲಕ ಅಲ್ಪಾವಧಿಯ ಲಾಭಕ್ಕಾಗಿ ಪರಿಸರವನ್ನೇ ಬಲಿಕೊಡಲಾಗುತ್ತದೆ. ಇದರ ಬೆಲೆಯನ್ನು ಸಾಮಾನ್ಯರು ಮತ್ತು ಭವಿಷ್ಯದ ಪೀಳಿಗೆಗಳು ತೆರಬೇಕಾಗುತ್ತದೆ, ಲಾಭ ಮಾತ್ರ ಕೆಲವರ ಪಾಲಾಗುತ್ತಿದೆ. ದುರಂತವೆಂದರೆ, ಅಧಿಕಾರದಲ್ಲಿರುವ ಅನೇಕರು ತಮ್ಮ ಜವಾಬ್ದಾರಿಗಳಿಗಿಂತ ಹಕ್ಕುಗಳ ಬಗ್ಗೆಯೇ ಹೆಚ್ಚು ಮಾತನಾಡುತ್ತಾರೆ.

ನಮ್ಮ ಆಕ್ರೋಶ ಅಲ್ಪಕಾಲಿಕ. ಸಾಂದರ್ಭಿಕ ಚರ್ಚೆಯ ನಂತರ, ಮುಂದಿನ ದುರಂತ ಸಂಭವಿಸುವವರೆಗೆ ಸಮಾಜವು ನಿಶ್ಚಿಂತೆಯಿಂದ ಮುಂದುವರಿಯುತ್ತದೆ. ನದಿಗಳು ಬತ್ತಿದರೆ ಕೃಷಿಗೆ ತೊಂದರೆಯಾಗುತ್ತದೆ. ಕಾಡುಗಳು ಕಣ್ಮರೆಯಾದರೆ, ಹವಾಮಾನ ವೈಪರೀತ್ಯ ಹೆಚ್ಚುತ್ತದೆ. ಬೆಟ್ಟಗಳು ನಾಶವಾದರೆ ಮಳೆಯೂ ಕಡಿಮೆಯಾಗುತ್ತದೆ. ಪ್ರಕೃತಿಯನ್ನು ಹಣಗಳಿಸುವ ಸರಕಿನಂತೆ ಮಾತ್ರ ನೋಡಿದಾಗ, ಅದರ ಬೆಲೆಯನ್ನು ಭವಿಷ್ಯದ ಪೀಳಿಗೆಗಳು ತೆರಬೇಕಾಗುತ್ತದೆ.

ಮನುಷ್ಯನ ವ್ಯವಹಾರಗಳ ಅಪ್ರಾಮಾಣಿಕತೆಯ ಬಗ್ಗೆ ಹೇಳದಿರುವುದೇ ವಾಸಿ. ನಕಲಿ ಪ್ರಮಾಣ ಪತ್ರಗಳು, ಖರೀದಿಸುವ ಡಿಗ್ರಿಗಳು, ರಾಜಿಗೊಂಡ ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಭ್ರಷ್ಟ ನೇಮಕಾತಿ ಪ್ರಕ್ರಿಯೆಗಳು ಇಂದು ಲಜ್ಜೆಯಿಲ್ಲದೆ ನಡೆಯುತ್ತಿವೆ.

ಎಲ್ಲಾ ರಂಗದಲ್ಲೂ ಹೆಣ್ಣಿನ ದೇಹದೊಂದಿಗೆ ವ್ಯವಹಾರ ಮಾಡುವ 'ಕಾಸ್ಟಿಂಗ್ ಕೌಚ್' ಪದ್ಧತಿಗಳು ಅಸ್ತಿತ್ವದಲ್ಲಿವೆ ಎಂದು ಗೊತ್ತಿದ್ದರೂ ನಿರ್ಲಿಪ್ತರಾಗಿದ್ದೇವೆ. ಶೋಷಣೆಯ ಎದುರು ಸಮಾಜವು ಹೊಣೆಗಾರಿಕೆಗಿಂತ ಮೌನವನ್ನು ಆಯ್ಕೆಮಾಡಿಕೊಳ್ಳುತ್ತಿದೆ. ಪ್ರತಿ ಘಟನೆಗಳಲ್ಲೂ ಬಲಿಪಶುಗಳು ಮಾತ್ರ ನೋವು ಅನುಭವಿಸುತ್ತಾರೆ.

ನಮ್ಮ ನಾಯಕರು ಸಾರ್ವಜನಿಕ ಸೇವೆಯ ಬಗ್ಗೆ ಮಾತನಾಡುತ್ತಾ ತಮ್ಮ ಹಿತಾಸಕ್ತಿಗಳನ್ನು ಪೂರೈಸುತ್ತಾರೆ. ಮತದಾರರು ಭ್ರಷ್ಟರಾಗಿ ಚುನಾವಣೆಗಳ ಸಮಯದಲ್ಲಿ ನಗದು, ಉಡುಗೊರೆ ಅಥವಾ ಅಲ್ಪಾವಧಿಯ ಪ್ರಯೋಜನಗಳನ್ನು ಸ್ವೀಕರಿಸುತ್ತಾರೆ. ಇದರ ಪರಿಣಾಮಗಳು ವಿಶೇಷವಾಗಿ ಯುವಜನರಲ್ಲಿ ಗೋಚರಿಸುತ್ತಿವೆ. ಯುವಜನರನ್ನು ವೃತ್ತಿ ಮತ್ತು ವೈಯಕ್ತಿಕ ಪ್ರಗತಿಯ ಕಡೆಗೆ ಮಾತ್ರ ಗಮನ ಹರಿಸುವಂತೆ ಪ್ರೋತ್ಸಾಹಿಸಲಾಗುತ್ತಿದೆ. ಸಾಮಾಜಿಕ ನ್ಯಾಯ, ಸಾರ್ವಜನಿಕ ಜವಾಬ್ದಾರಿ ಮತ್ತು ಸಮುದಾಯದ ಪ್ರಶ್ನೆಗಳು ಅವರ ಆದ್ಯತೆಯಿಂದ ಹೊರಗುಳಿಯುತ್ತಿವೆ. ಆದರೆ, ಯಾವುದೇ ಸಮಾಜವು ಉದ್ಯೋಗ, ಮತ್ತು ಆರ್ಥಿಕ ಆಕಾಂಕ್ಷೆಗಳ ಮೇಲೆ ಮಾತ್ರ ಬದುಕಲಾರದು. ಅದಕ್ಕೆ ನೈತಿಕತೆಯೂ ಅಗತ್ಯ.

ಯುವಜನರ ಮೇಲೆಯೇ ಸಂಪೂರ್ಣವಾಗಿ ಆರೋಪ ಹೊರಿಸುವುದು ಸರಿಯಲ್ಲ. ಪ್ರತಿಯೊಂದು ಯುಗವೂ ತನ್ನದೇ ಆದ ಭ್ರಮೆಯ ಅರಮನೆಯನ್ನು ಸೃಷ್ಟಿಸುತ್ತದೆ. ಸಿದ್ಧಾರ್ಥನ ಕಾಲದ ಅರಮನೆಯು ಗೋಡೆಗಳ ಒಳಗಿನ ವೈಭವದಿಂದ ನಿರ್ಮಾಣಗೊಂಡಿತ್ತು. ನಮ್ಮ ಯುಗದ ಅರಮನೆಯು, ಅತಿಯಾದ ಗ್ರಾಹಕ ಸಂಸ್ಕೃತಿ ಮತ್ತು ನಿರಂತರ ಉಪಭೋಗದ ಭ್ರಮೆಯ ಮೇಲೆ ನಿರ್ಮಿಸಲ್ಪಟ್ಟಿದೆ. ಸಮಸ್ಯೆ ತಂತ್ರಜ್ಞಾನದ್ದಲ್ಲ ಅಥವಾ ಅತಿಯಾದ ಸೌಲಭ್ಯಗಳದ್ದಲ್ಲ. ಅದು ಆತ್ಮಾವಲೋಕನಕ್ಕೆ ಅವಕಾಶ ನೀಡದೆ ನಮ್ಮನ್ನು ನಿರಂತರವಾಗಿ ವ್ಯಸ್ತರನ್ನಾಗಿಸಿರುವ ವ್ಯವಸ್ಥೆಯದ್ದು. ಅದಕ್ಕಾಗಿಯೇ ಬುದ್ಧನ ಉದಾಹರಣೆ ಇಂದು ಬಹಳ ಪ್ರಸ್ತುತವಾಗಿದೆ.

ಬುದ್ಧನ ಎಚ್ಚರ ಬರೀ ಧಾರ್ಮಿಕತೆಗೆ ಸಂಬಂಧಿಸಿದ್ದಲ್ಲ; ಅದು ಬೌದ್ಧಿಕ ಮತ್ತು ನೈತಿಕ ಧೈರ್ಯದ ಕ್ರಿಯೆಯಾಗಿತ್ತು. ಸಾಂತ್ವನ ನೀಡುವ ಭ್ರಮೆಗಳಲ್ಲಿ ಬಂದಿಯಾಗಿರಲು ಅವನು ನಿರಾಕರಿಸಿದ. ಅವನ ಜ್ಞಾನೋದಯದ ಪಯಣವು ಯಾವುದೇ ಖಚಿತತೆಯಿಂದಲ್ಲ, ಒಂದು ಪ್ರಶ್ನೆಯೊಂದಿಗೆ ಪ್ರಾರಂಭವಾಯಿತು. ಸುತ್ತಲಿನ ನೋವನ್ನು ನೋಡಿದಾಗ ಅವನಲ್ಲಿ ಮೂಡಿದ ಪ್ರಶ್ನೆ: ನೋವು ಏಕೆ ಅಸ್ತಿತ್ವದಲ್ಲಿದೆ? ಸಾಮಾನ್ಯವಾಗಿ ಜನರು ಬದುಕುವ ರೀತಿಗಿಂತ ವಿಭಿನ್ನವಾದ ಜೀವನವಿಧಾನ ಇದೆಯೇ? ಬಹುಶಃ, ಇಂದು ನಮ್ಮ ಜಾಗೃತಿಯ ಆರಂಭವೂ ಇಲ್ಲಿಂದಲೇ ಆಗಬೇಕಾಗಿದೆ.

ತಾತ್ಕಾಲಿಕ ಪರಿಹಾರಗಳನ್ನು ಹುಡುಕುವ ಬದಲು, ನಾವು ನೇರ ಪ್ರಶ್ನೆಗಳನ್ನು ಕೇಳುವ ಧೈರ್ಯವನ್ನು ಪಡೆಯಬೇಕು. ಸಮಾಜದಲ್ಲಿರುವ ಭ್ರಷ್ಟಾಚಾರವನ್ನು ಅನಿವಾರ್ಯವೆಂದು ನಾವು ಏಕೆ ಒಪ್ಪಿಕೊಳ್ಳುತ್ತೇವೆ? ಜನರು ತಮ್ಮ ಸಂಪತ್ತನ್ನು ಪ್ರದರ್ಶಿಸುವಾಗ ಅದನ್ನು ಹೇಗೆ ಗಳಿಸಲಾಯಿತು ಎಂದು ಕೇಳದೆ ನಾವು ಏಕೆ ಮೆಚ್ಚುತ್ತೇವೆ? ಶೋಷಣೆ ಮತ್ತು ಹಿಂಸೆಯನ್ನು ಏಕೆ ಸಹಿಸಿಕೊಳ್ಳುತ್ತೇವೆ? ನಾವು ನಿಜವಾದ ಜ್ಞಾನಕ್ಕಿಂತ ಅದರ ಟೊಳ್ಳು ಪ್ರದರ್ಶನಕ್ಕೆ ಏಕೆ ಹೆಚ್ಚಿನ ಬೆಲೆ ನೀಡುತ್ತೇವೆ? ನಮ್ಮ ಸ್ವಂತ ಜೀವನವನ್ನು ಅಪ್ರಾಮಾಣಿಕತೆಯಿಂದ ರೂಪಿಸಿರುವಾಗ, ಸಾರ್ವಜನಿಕ ಸಂಸ್ಥೆಗಳಿಂದ ಪ್ರಾಮಾಣಿಕತೆಯನ್ನು ಏಕೆ ನಿರೀಕ್ಷಿಸುತ್ತೇವೆ? ಇಂದು ನಮ್ಮ ಮುಂದಿರುವ ಬಿಕ್ಕಟ್ಟು ಬರೀ ರಾಜಕೀಯ ಅಥವಾ ಆರ್ಥಿಕವಲ್ಲ. ಅದು ಮೂಲಭೂತವಾಗಿ ಆತ್ಮಸಾಕ್ಷಿಯ ಬಿಕ್ಕಟ್ಟು.

ಜಾಗೃತಿಗಾಗಿ ಜನರು ತಮ್ಮ ಮೌನದ ಸಂಸ್ಕೃತಿಯನ್ನು ಮುರಿಯುವ ಅಗತ್ಯವಿದೆ. ಅನೇಕ ಸಾಮಾಜಿಕ ಅನಿಷ್ಟಗಳು ಉಳಿದುಕೊಂಡಿವೆ. ಏಕೆಂದರೆ, ಎಲ್ಲರಿಗೂ ಅವುಗಳ ಬಗ್ಗೆ ತಿಳಿದಿದೆ. ಕೆಲವರು ಮಾತ್ರ ಅವುಗಳನ್ನು ಪ್ರಶ್ನಿಸುತ್ತಾರೆ. ಈ ನಿಟ್ಟಿನಲ್ಲಿ, ಶಿಕ್ಷಣ ಸಂಸ್ಥೆಗಳು ವ್ಯಕ್ತಿತ್ವವನ್ನು ಪೋಷಿಸುವ ಅಗತ್ಯವಿದೆ. ಪ್ರದರ್ಶನದ ಸಂಸ್ಕೃತಿಯನ್ನು ಮೀರಿ ನಾಗರಿಕರು ಒಟ್ಟಾಗಿ ಮುನ್ನಡೆಯಬೇಕಾಗಿದೆ. ಈ ರೀತಿ, ಸಾರ್ವಜನಿಕ ಕಾಳಜಿಗಳನ್ನು ಚರ್ಚಿಸುವ ಮತ್ತು ಅಧಿಕಾರವನ್ನು ಹೊಣೆಗಾರರನ್ನಾಗಿಸುವ ಸಮುದಾಯಗಳನ್ನು ಪುನರ್ ನಿರ್ಮಿಸಬೇಕಾಗಿದೆ.

ಬುದ್ಧ ಮರದ ಕೆಳಗೆ ಜ್ಞಾನೋದಯ ಪಡೆದ ಚಿತ್ರವು ಆಳವಾದ ಅರ್ಥವನ್ನು ಹೊಂದಿದೆ. ಮನುಷ್ಯರು ಪ್ರಕೃತಿಯಿಂದ ಪ್ರತ್ಯೇಕವಾಗಿ ಬದುಕಲು ಸಾಧ್ಯವಿಲ್ಲ, ನಾವು ಅದರ ಒಂದು ಭಾಗವಷ್ಟೇ. ಅಕ್ರಮ ಮರಳು ಗಣಿಗಾರಿಕೆಯ ಮೂಲಕ ನದಿಗಳನ್ನು ಲೂಟಿ ಮಾಡಿದಾಗ, ಕಾಡುಗಳು ಕಣ್ಮರೆಯಾದಾಗ ಮತ್ತು ಪರಿಸರ ನಾಶವನ್ನು ಅಭಿವೃದ್ಧಿ ಎಂದು ಸಂಭ್ರಮಿಸಿದಾಗ, ಸಮಾಜವು ನೈಸರ್ಗಿಕ ಸಂಪನ್ಮೂಲಗಳಿಗಿಂತ ಮುಖ್ಯವಾಗಿ ತನ್ನ ನೈತಿಕ ಸಮತೋಲನವನ್ನು ಕಳೆದುಕೊಳ್ಳುತ್ತದೆ.

ಭ್ರಷ್ಟ ರಾಜಕಾರಣಿಗಳು ಮತ್ತು ಅಪ್ರಾಮಾಣಿಕ ಅಧಿಕಾರಿಗಳನ್ನು ಖಂಡಿಸುವುದು ಸುಲಭ. ನಾವು ಮಾಡಿಕೊಳ್ಳುವ ಹೊಂದಾಣಿಕೆಗಳನ್ನು ಪರಿಶೀಲಿಸುವುದು ಕಷ್ಟ. ಭ್ರಷ್ಟಾಚಾರವನ್ನು ಖಂಡಿಸುವ ನಾಗರಿಕರು ಲಂಚ ನೀಡುವಾಗ, ಅನ್ಯಾಯ ಪ್ರತಿಭಟಿಸುವ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಮೋಸ ಮಾಡುವಾಗ, ಚುನಾವಣೆಯ ಸಮಯದಲ್ಲಿ ನಾಯಕರನ್ನು ಟೀಕಿಸುವ ಮತದಾರರು ಅವರಿಂದ ಉಡುಗೊರೆಗಳನ್ನು ಸ್ವೀಕರಿಸುವಾಗ, ಬುದ್ಧಿಜೀವಿಗಳು ಮಹಿಳಾ ಸಬಲೀಕರಣದ ಬಗ್ಗೆ ಸಾರ್ವಜನಿಕವಾಗಿ ಬೆಂಬಲಿಸುತ್ತಾ ಗುಟ್ಟಾಗಿ ಅವರ ಶೋಷಣೆ ಮಾಡುವಾಗ, ಸಮಸ್ಯೆಯ ಭಾಗವಾಗಿಯೇ ಉಳಿಯುತ್ತಾರೆ.

ಬುದ್ಧ ಕಂಡುಕೊಂಡಂತೆ, ಸಾಮಾಜಿಕ ಬದಲಾವಣೆ ಮತ್ತು ಸ್ವಪರಿವರ್ತನೆ ಬೇರ್ಪಡಿಸಲಾಗದು. ನಮಗಿಂದು ಬೇಕಾಗಿರುವುದು ಒಬ್ಬ ಸಿದ್ಧಾರ್ಥ ಬುದ್ಧನಾಗುವ ಕ್ಷಣವಲ್ಲ. ಅದು ಕೋಟ್ಯಂತರ ಸಾಮಾನ್ಯ ನಾಗರಿಕರ ಜಾಗೃತಿ. ಜನರು ತಮ್ಮ ಅನುಕೂಲಕ್ಕಿಂತ ನೈತಿಕತೆ ಮುಖ್ಯ, ಸೌಕರ್ಯಕ್ಕಿಂತ ಸತ್ಯ ಮುಖ್ಯ ಮತ್ತು ಮೌನಕ್ಕಿಂತ ಜವಾಬ್ದಾರಿ ಮುಖ್ಯ ಎಂದು ನಿರ್ಧರಿಸುವ ಕ್ಷಣ. ನಾಗರಿಕರು ಅನ್ಯಾಯವೆಂದು ಕಂಡುಕೊಂಡ ವ್ಯವಸ್ಥೆಗಳಲ್ಲಿ ಭಾಗವಹಿಸಲು ನಿರಾಕರಿಸುವ ಕ್ಷಣ. ಅದು, ಆತ್ಮಸಾಕ್ಷಿಯು ಅನುಕೂಲದ ಮೇಲೆ ಜಯಗಳಿಸುವ ಕ್ಷಣ. ಸಾಮಾನ್ಯರೆನ್ನಿಸಿಕೊಂಡವರು ಆತ್ಮಾವಲೋಕನದ ಮೂಲಕ ಪ್ರಶ್ನಿಸುವ ಧೈರ್ಯ ಪಡೆದಾಗ ಮಾತ್ರ ಅದು ಸಾಧ್ಯ.



ವಾಚಕರ ವಾಣಿ

ಕೆಇಎಸ್ ಹುದ್ದೆ ನೇಮಕಾತಿಗೆ ಬಾಲಗ್ರಹ

ಹತ್ತು ವರ್ಷಗಳ ಹಿಂದೆ ಸರ್ಕಾರಿ ಪ್ರೌಢಶಾಲೆಗಳಲ್ಲಿನ ಮುಖ್ಯಶಿಕ್ಷಕರ ಹುದ್ದೆ ಭರ್ತಿಗೆ ಕೆಇಎಸ್ (ಕರ್ನಾಟಕ ಶಿಕ್ಷಣ ಸೇವೆ) ಪರೀಕ್ಷೆ ನಡೆಸಲಾಗುತ್ತಿತ್ತು. ತೇರ್ಗಡೆಯಾದವರು ಮುಖ್ಯಶಿಕ್ಷಕರಾಗಿ ನೇಮಕವಾಗುತ್ತಿದ್ದರು. ಬಳಿಕ ಅವರು ಬಿಇಒ, ಡಿಡಿಪಿಐ, ಜಂಟಿ ನಿರ್ದೇಶಕರ ಹುದ್ದೆಗೇರುತ್ತಿದ್ದರು. ಶಾಲಾ ಆಡಳಿತದ ಸುಧಾರಣೆಗೆ ಈ ಪರೀಕ್ಷೆಯು ಸಹಕಾರಿಯಾಗಿತ್ತು. ಪ್ರಸ್ತುತ ಹಲವು ಶಾಲೆಗಳಲ್ಲಿ ಆಡಳಿತ ನಡೆಸುವವರೇ ಇಲ್ಲದಂತಾಗಿದೆ. ಹಿರಿಯ ಶಿಕ್ಷಕರ ಮೇಲೆ ಈ ಜವಾಬ್ದಾರಿ ಬಿದ್ದಿದೆ. ಮತ್ತೊಂದೆಡೆ ಸರ್ಕಾರವು ಶಿಕ್ಷಕರ ಹುದ್ದೆಗಳ ಭರ್ತಿಗೆ ಮುಂದಾಗುತ್ತಿಲ್ಲ. ಇದರಿಂದ ಶಾಲೆಗಳ ವಾತಾವರಣ ಉಸಿರುಗಟ್ಟುವಂತಾಗಿದೆ. ಶಿಕ್ಷಣ ಇಲಾಖೆಯು ಎಚ್ಚೆತ್ತುಕೊಂಡು ಮತ್ತೆ ಕೆಇಎಸ್ ಪರೀಕ್ಷೆ ನಡೆಸಲಿ.

ಬಲ್ಲೇನಹಳ್ಳಿ ಮಂಜುನಾಥ್, ಕೆ.ಆರ್. ಪೇಟೆ

ವಿದ್ಯುತ್ ಸಂಪರ್ಕ: ಆದೇಶ ಸರಿಪಡಿಸಲಿ

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ 2,400 ಚ.ಅ. ವಿಸ್ತೀರ್ಣದಲ್ಲಿ ಹೊಸದಾಗಿ ನಿರ್ಮಿಸಿದ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲು ಸ್ವಾಧೀನಾನುಭವ ಪ್ರಮಾಣಪತ್ರ ಪಡೆಯುವುದರಿಂದ ವಿನಾಯಿತಿ ನೀಡುವುದಕ್ಕೆ ಸರ್ಕಾರ ಒಪ್ಪಿದೆ. ಆದರೆ, ಮೇ 31ರೊಳಗೆ ಅರ್ಜಿ ಸಲ್ಲಿಸಿದ್ದರಷ್ಟೇ ಈ ವಿನಾಯಿತಿ ನೀಡುವ ತೀರ್ಮಾನ ಸಮಂಜಸವಲ್ಲ. ಒಂದು ವರ್ಷದಿಂದ ಬೆಸ್ಕಾಂ, ಅರ್ಜಿಗಳನ್ನೇ ಸ್ವೀಕರಿಸುತ್ತಿಲ್ಲ. ಮನೆ ಮಾಲೀಕರು ತಾತ್ಕಾಲಿಕ ಸಂಪರ್ಕ ಪಡೆದು ದುಬಾರಿ ಶುಲ್ಕ ಪಾವತಿಸುತ್ತಿದ್ದಾರೆ. ತಾತ್ಕಾಲಿಕ ಸಂಪರ್ಕ ಪಡೆದು ಕಟ್ಟಡ ಪೂರ್ಣಗೊಳಿಸಿರುವ ಎಲ್ಲರಿಗೂ ಅನ್ವಯವಾಗುವಂತೆ ಆದೇಶವನ್ನು ಸರಿಪಡಿಸಬೇಕಿದೆ.

ಜಿ. ಬೈರೇಗೌಡ, ಬೆಂಗಳೂರು

ಪಿಎಂ ಕೌಶಲ: ಉದ್ಯೋಗ ದೊರಕಿತೆ?

ಪ್ರಧಾನಮಂತ್ರಿ ಕೌಶಲ ಅಭಿವೃದ್ಧಿ ಯೋಜನೆಯಡಿ ಕೇಂದ್ರ ಸರ್ಕಾರವು 2015ರಿಂದ 2024ರ ನಡುವೆ ₹10,194 ಕೋಟಿ ವ್ಯಯಿಸಿದೆ. ಆದರೆ, ಈ ಹಣ ಅರ್ಹ ಫಲಾನುಭವಿಗಳಿಗೆ ತಲಪಿದೆ ಎಂಬುದನ್ನು ಪುಷ್ಟೀಕರಿಸುವ ದಾಖಲೆಗಳು ಸರ್ಕಾರದ ಬಳಿ ಏಕಿಲ್ಲ? ಯೋಜನೆಯಡಿ ತರಬೇತಿ ಪಡೆದ ಯುವಕರಿಗೆ ಉದ್ಯೋಗ ಸಿಕ್ಕಿದೆಯೇ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಕಟ್ಟುನಿಟ್ಟಿನ 'ಟ್ರ್ಯಾಕಿಂಗ್ ಸಿಸ್ಟಂ' ಇಲ್ಲ. ಅವಶ್ಯಕತೆಗೆ ಪೂರಕವಾದ ಕೌಶಲ ತರಬೇತಿ ನೀಡದೆ ಹಳೆಯ ಪಠ್ಯಕ್ರಮದಡಿ ತರಬೇತಿ ನೀಡಲಾಗುತ್ತಿದೆ. ಪ್ರಮಾಣಪತ್ರ ಕೈಯಲ್ಲಿದ್ದರೂ ಶೇ 80ರಷ್ಟು ಯುವಕರಿಗೆ ಕಂಪನಿಗಳು ಕೆಲಸ ನೀಡುತ್ತಿಲ್ಲ. ಇತ್ತ ಸ್ವಉದ್ಯೋಗ ಮಾಡಲು ಸಾಧ್ಯವಾಗುತ್ತಿಲ್ಲ. ಸರ್ಕಾರಿ ಯೋಜನೆಗಳು ಕೇವಲ ಪ್ರಚಾರಕ್ಕೆ ಸೀಮಿತವಾಗಬಾರದಲ್ಲವೆ?

ಸುರೇಂದ್ರ ಪೈ, ಭಟ್ಕಳ

ಜನಹಿತ ಖಾತೆ ಬಗ್ಗೆ ಅನಾದರ ಸರಿಯಲ್ಲ

ರಾಜ್ಯದಲ್ಲಿ ಪ್ರಾಥಮಿಕ, ಪ್ರೌಢಶಾಲೆಗಳು ಪುನರಾರಂಭಗೊಂಡಿವೆ. ಆದರೆ, ಪಠ್ಯಪುಸ್ತಕಗಳು, ಶೂಗಳು ಇನ್ನು ಪೂರ್ಣಪ್ರಮಾಣದಲ್ಲಿ ಸರಬರಾಜಾಗಿಲ್ಲ. ನೋಟ್‌ಬುಕ್, ಪೆನ್ಸಿಲ್ ಸೇರಿ ಅಗತ್ಯ ಪರಿಕರಗಳ ಕಿಟ್ ಅನ್ನು ಈ ವರ್ಷದಿಂದ ನೀಡುವುದಾಗಿ ಸರ್ಕಾರ ಘೋಷಿಸಿತ್ತು. ಇದುವರೆಗೆ ಈ ಕಿಟ್‌ಗಳು ಶಾಲೆಗೆ ತಲಪಿಲ್ಲ. ಸರ್ಕಾರದ ಘೋಷಣೆಯಿಂದಾಗಿ ದಾನಿಗಳು ನೋಟ್‌ಬುಕ್, ಪೆನ್ಸಿಲ್ ಕೊಡಲು ಮುಂದೆ ಬರುತ್ತಿಲ್ಲ. ಶೈಕ್ಷಣಿಕ ವರ್ಷದ ಆರಂಭದಲ್ಲಿ ಶಿಕ್ಷಕರು ಶಾಲಾ ಚಟುವಟಿಕೆ ಮತ್ತು ಎಸ್‌ಐಆರ್ ಪ್ರಕ್ರಿಯೆಯ ನಡುವೆ ಹಂಚಿಹೋಗಿದ್ದಾರೆ. ಶಾಲಾ ಚಟುವಟಿಕೆಗಳು ಸುಗಮವಾಗಿ ಜರುಗಲು ಶಿಕ್ಷಣ ಸಚಿವರ ಉಪಸ್ಥಿತಿ ಅಗತ್ಯ. ಹಾಗಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಕ್ಷಣವೇ ಶಿಕ್ಷಣ ಸಚಿವರನ್ನು ನೇಮಿಸಬೇಕು. ಜನಹಿತ ಖಾತೆಗಳಿಗೆ ಆದ್ಯತೆ ನೀಡದಿರುವ ನಡೆ ಸರಿಯಲ್ಲ.

ಬಿ.ಎಚ್.ಎಸ್. ಮೂರ್ತಿ, ಬೆಂಗಳೂರು

ಖಾತೆಗೆ ಕಿತ್ತಾಟ: ಮಕ್ಕಳಂತೆ ಹಟ ಸರಿಯೆ?

ಸಚಿವ ಸ್ಥಾನ ಮತ್ತು ಖಾತೆಗೆ ಕಿತ್ತಾಟದ ಪ್ರಹಸನ ಗಮನಿಸಿದರೆ ಹಿಂದೆ ಹಳ್ಳಿಗಳ ಜಾತ್ರೆಗೆ ಹೋದಾಗ ಆಟಿಕೆಗಳಿಗಾಗಿ ಮಕ್ಕಳು ಅದು ಬೇಕು, ಇದೂ ಬೇಕೆಂದು ಹಟ ಹಿಡಿಯುತ್ತಿದ್ದುದು ನೆನಪಾಗುತ್ತದೆ. ಜನಸೇವೆ ಹೆಸರಿನಲ್ಲಿ ನಡೆಯುವ ಪ್ರಹಸನ ನೋಡಿದ ಮಕ್ಕಳೇ ನಾಚಿಕೆಪಟ್ಟುಕೊಳ್ಳುವಂತಾಗಿದೆ. ತಮ್ಮವರಿಗೆ ಸಚಿವ ಸ್ಥಾನ ಕೊಡಿ ಎಂದು ಜಾತಿಯ ಮುಖಂಡರು, ಮಠಾಧೀಶರು ಬೀದಿಗಿಳಿದು ಹೋರಾಟ ನಡೆಸುವಷ್ಟರ ಮಟ್ಟಿಗೆ ಸಾಮಾಜಿಕ ವ್ಯವಸ್ಥೆ ಅಧಃಪತನಕ್ಕಿಳಿದಿದೆ. ಪಕ್ಷ ಯಾವುದಾದರೂ ನಾಡಿನ ಹಿತಕ್ಕಿಂತ ಇಲ್ಲಿ ಸ್ವಾರ್ಥಪರ ಚಿಂತನೆ ಢಾಳಾಗಿರುತ್ತದೆ. ಖಾತೆಗಾಗಿ ಪಟ್ಟುಹಿಡಿದ ಸಚಿವ ರಾಮಲಿಂಗಾರೆಡ್ಡಿ ರಾಜೀನಾಮೆ ನೀಡಿದ್ದು ಅವರ ಹಿರಿತನಕ್ಕೆ ಶೋಭೆ ತರುವಂಥದ್ದಲ್ಲ. ಅಷ್ಟಕ್ಕೂ ರಾಜೀನಾಮೆ ಹಿಂಪಡೆಯುವುದಿಲ್ಲ ಎಂದ ಅವರು ಅದಕ್ಕೂ ಬದ್ಧರಾಗಿರಲಿಲ್ಲ. ಇಂಥ ಪ್ರಹಸನ ಅಗತ್ಯವಾಗಿತ್ತೆ?

ನಾರಾಯಣರಾವ ಕುಲಕರ್ಣಿ, ಯಲಬುರ್ಗಾ

'ಅರಸು ಕಥನ'ದಲ್ಲಿ ತಪ್ಪು ಮಾಹಿತಿಗಳು

'ವರ್ತಮಾನ ಮತ್ತು ಅರಸು ಅಪೂರ್ವ ಕಥನ' ಲೇಖನದಲ್ಲಿ (ಪ್ರ.ವಾ., ಜೂನ್ 6, ಲೇ: ಎಚ್. ವಿಶ್ವನಾಥ್,) ದಾವಣಗೆರೆಯ ಶಾಸಕರಾಗಿದ್ದ ಪಂಪಾಪತಿ ಅವರ ಅಕಾಲಿಕ ನಿಧನದಿಂದ ಉಪಚುನಾವಣೆ ಘೋಷಣೆಯಾಗಿತ್ತು; ಅಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ಕೊಡಿಸಬೇಕೆಂದು ಶಾಮನೂರು ಶಿವಶಂಕರಪ್ಪ ಬಂದಿದ್ದರು' ಎಂದು ಹೇಳಲಾಗಿದೆ. ಪಂಪಾಪತಿ ಅವರು 1978, 1983 ಮತ್ತು ಮಧ್ಯಂತರ ಚುನಾವಣೆ ನಡೆದ 1985ರಲ್ಲಿ ಶಾಸಕರಾಗಿ ಚುನಾಯಿತರಾಗಿದ್ದರು. 2002ರ ಜುಲೈ 31ರಂದು ಅನಾರೋಗ್ಯದಿಂದ ಅವರು ನಿಧನರಾದರು (ಅರಸು ಅವರು ನಿಧನರಾದುದು 1982ರಲ್ಲಿ). ಶಾಮನೂರು ಅವರು ಟಿಕೆಟ್‌ಗೆ ಪ್ರಯತ್ನಿಸಿದ್ದು 1978ರಲ್ಲಿ. ಆಗ ವಿಶ್ವನಾಥ್ ಮಾತ್ರವಲ್ಲದೆ ರಾಜ್ಯದ ಹಲವು ಕಾಂಗ್ರೆಸ್ ನಾಯಕರು ಶಾಮನೂರು ಅವರ ಪರವಾಗಿ ಅರಸುರವರ ಮೇಲೆ ತೀವ್ರ ಒತ್ತಡ ತಂದರು. ಅದಕ್ಕೆ ಮಣಿಯದ ಅರಸು, ದಾವಣಗೆರೆ ಕ್ಷೇತ್ರವನ್ನು ಕಮ್ಯುನಿಸ್ಟ್ ಪಕ್ಷಕ್ಕೆ ಬಿಟ್ಟುಕೊಟ್ಟು ಪಂಪಾಪತಿ ಅವರ ಸ್ಪರ್ಧೆಗೆ ಅವಕಾಶ ಮಾಡಿಕೊಟ್ಟಿದ್ದರು.

ಸನತ್ ಕುಮಾರ ಬೆಳಗಲಿ, ಬೆಂಗಳೂರು

ಚುರುಮುರಿ



ಜಿರಲೆಗಳು ಬೇಕಿವೆ!

• ಸುಮಂಗಲಾ

'ಸುಮಾರು ಹದಿನೈದು ರಾಜ್ಯದಾಗೆ ಪೂರಾ ಆಡಳಿತ ಕಮಲಕ್ಕಂದು, ಮೈತ್ರಿಕೂಟದ ಜೊತಿಗಿ ಸೇರಿ ನಡೆಸೂದೂ ಸೇರಿದರೆ ಇಪ್ಪತ್ತೊಂದು ರಾಜ್ಯದಾಗೆ ಕಮಲಕ್ಕನ ಮನಿಯವರ ಆಡಳಿತ' ಎಂದು ಬೆಕ್ಕಣ್ಣ ಬೆರಳು ಮಡಚಿ ಎಣಿಸುತ್ತಿತ್ತು.

'ಅದ್ ಎಲ್ಲರಿಗೂ ಗೊತ್ತೈತಿ. ಈಗೆದಕ್ಕೆ ಲೆಕ್ಕ ಮಾಡಾಕೆ ಹತ್ತೀ' ಕೇಳಿದೆ.

'ಇಲ್ಲೀವರೆಗೆ ಕಮಲಕ್ಕನ ರಾಜ್ಯಭಾರ ಇರೂ ಕಡೆ ಒಬ್ಬರಾದ್ರೂ ನನಗೆ ಆ ಖಾತೆಯೇ ಬೇಕು ಅಂತ ಕ್ಯಾತೆ ತೆಗೆದಾರೇನು? ಮೋದಿ ಮಾಮಾ, ಶಾ ಅಂಕಲ್ಲು ಕಾಲುಬೆರಳಲ್ಲಿ ತೋರಿಸಿದ್ದನ್ನು ತೆಲಿ ಮ್ಯಾಗೆ ಇಟ್ಟುಕೊಂಡು ಮೆರೀತಾರೆ. ಇಲ್ಲಿ ಸಿಎಂ ಬದಲಾದ ಕೂಡಲೇ ಖಾತೆ ಕ್ಯಾತೆ ಶುರು... ನನಗರೆ ನೋಡಿ ವಾಕರಿಕೆ ಬಂದೈತಿ' ಎಂದಿತು.

'ನಾವು ಶ್ರೀಸಾಮಾನ್ಯರು ಎಲ್ಲ ಖಾತೆಗಳು ಸಮ, ಎಲ್ಲ ಖಾತೆಗಳಲ್ಲೂ ಮಾಡಬೇಕಾದ ಕೆಲಸ ಬೆಟ್ಟದಷ್ಟು ಐತಿ ಅಂದುಕೋತೀವಿ... ಆದರೆ, ಅವರಿಗೆ ಕೆಲವು ಖಾತೆಗಳಷ್ಟೇ ಹಾಲು ಕರೆಯೋ ಜೆರ್ಸಿ ಹಸು ಇದ್ದಂಗ' ಎಂದೆ.

'ಮುಂದಿನ ಸಲ ಅಧಿಕಾರಕ್ಕೆ ಬರಂಗಿಲ್ಲ ಅಂತ ಕೈಪಕ್ಷಕ್ಕೆ ಖಾತ್ರಿ ಐತಿ. ಅದಕ್ಕೇ ಎರಡೂ ಕೈಯಿಂದ ರೊಕ್ಕ ಬಾಚಿಕೊಳ್ಳಕ್ಕೆ ಆಗೋ ಖಾತೇನೆ ಎಲ್ಲರಿಗೂ ಬೇಕು. ಮತ್ತ ಈ ಸಲ ನಿಮಗೆ ಅಂದ್ರ ಹೆಣ್ಣುಮಕ್ಕಳಿಗೆ ಒಂದು ಸಣ್ಣ ಕಪ್ ಕೂಡ ಇಲ್ಲ!'

'ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಂತ ಒಂದು ಕಪ್ ಕೈಗೆ ಕೊಟ್ಟು ಕೂಡಿಸ್ತಿದ್ದರು... ಇನ್ನಾ ಅದನ್ನೂ ಕೊಟ್ಟಿಲ್ಲ. ಇಷ್ಟ್ ಮಂದಿ ಶಾಸಕಿಯರಲ್ಲಿ ಒಬ್ಬರಿಗೂ ಮಂತ್ರಿಯಾಗಕ್ಕೆ ಅರ್ಹತೆ ಇಲ್ಲೇನು?' ಎಂದೆ ಸಿಟ್ಟಿನಿಂದ.

'ಇಲ್ಲೂ ಜಿರಲೆಗಳು ಹೋರಾಟ ಮಾಡಬಕು!'

'ಹೌದು ನೋಡು... ನಿಮ್ ಮೋದಿಮಾಮಾ ಎಂಥ ಹಿಟ್ ಸ್ಪ್ರೇ ಹೊಡೆದ್ರೂ ಜಿರಲೆಗಳು ಬಗ್ಗಲಿಲ್ಲ' ಎಂದು ನಕ್ಕೆ.

'ಕಮಲಕ್ಕನ ಮನೆಗಳಲ್ಲಿ ಎಲ್ಲಾ ಸ್ವಚ್ಛ ಐತಿ, ಅಲ್ಲಿ ಜಿರಲೆಗಳು ಬ್ಯಾಡ... ಬ್ಯಾರೆ ಕಡಿಗಿ ಜಿರಲೆಗಳು ಹೆಚ್ಚಾಗಬಕು!' ಎಂದು ಬೆಕ್ಕಣ್ಣ ಗುರುಗುಟ್ಟಿತು.

ಸಂಗತ

ಎಚ್ಚರ, ಮಕ್ಕಳು ನಮ್ಮನ್ನು ನೋಡುತ್ತಿದ್ದಾರೆ!

ನಾವು ಸುಳ್ಳು ಹೇಳುವುದನ್ನು, ನ್ಯಾಯದ ವಿರುದ್ಧವಾಗಿ ನಡೆದುಕೊಳ್ಳುವುದನ್ನು ದೇವರು ಗಮನಿಸದಿರಬಹುದು; ಅಮಾಯಕ ಮಕ್ಕಳಂತೂ ನೋಡುತ್ತಿರುತ್ತಾರೆ.

• ಸದಾಶಿವ ಸೊರಟೂರು

ಇಲ್ಲೊಂದು ಶಾಲೆಯಲ್ಲಿ ಎಂಟನೇ ತರಗತಿ ವಿದ್ಯಾರ್ಥಿಯೊಬ್ಬ ವಿರಾಮದ ವೇಳೆಯಲ್ಲಿ ಧೂಮಪಾನ ಮಾಡಿ ಬಂದು ತರಗತಿಯಲ್ಲಿ ಕೂತ ಘಟನೆಯೊಂದು ವರದಿಯಾಯಿತು. ಅದನ್ನು ಪತ್ತೆಹಚ್ಚಿದ ಶಿಕ್ಷಕರು ಅಚ್ಚರಿಪಟ್ಟರೂ ಆ ವಿದ್ಯಾರ್ಥಿಯನ್ನು ದಂಡಿಸಲಿಲ್ಲ; ವಿಶ್ವಾಸಕ್ಕೆ ತೆಗೆದುಕೊಂಡು ಮಾತನಾಡಿಸಿದರು. 'ನಮ್ಮ ಅಪ್ಪ ಸೇದುವಾಗಲೆಲ್ಲಾ ನನಗೂ ಸೇದಬೇಕು ಅನ್ನುವ ಆಸೆ ಆಗೋದು. ನಮ್ದು ಸಣ್ಣ ಅಂಗಡಿ ಇದೆ. ನಾವು ಅಂಗಡಿಯಲ್ಲಿ ಸಿಗರೇಟ್ ಮಾರುತ್ತೀವಿ. ಜನ ಅಲ್ಲೇ ನಿಂತು ಸೇದುವಾಗ ನನಗೂ ಆಸೆ ಆಗೋದು...' ಅಂತ ಆ ಹುಡುಗ ಪ್ರಾಮಾಣಿಕವಾಗಿ ಹೇಳಿಬಿಟ್ಟ.

ನಾಳೆ ನಮ್ಮ ಮಕ್ಕಳು ಹೇಗೆ ಇರಬಾರದು ಎಂದು ಬಯಸುತ್ತೇವೆಯೊ ಅದಕ್ಕೆ ವಿರುದ್ಧವಾಗಿ ನಾವು ನಡೆದುಕೊಳ್ಳುತ್ತಿದ್ದೇವೆ. ಮಕ್ಕಳು ನಮ್ಮ ಮಾತಿನಂತಾಗುವುದಿಲ್ಲ. ಅವರು ಈಗಿನ ನಮ್ಮ ಕೃತಿಯಂತಾಗುತ್ತಾರೆ. ಬಹುಶಃ ನಾಳಿನ ಸಮಾಜ ಇದಕ್ಕಿಂತ ಹೆಚ್ಚು ಆಳಕ್ಕೆ ಕುಸಿಯಬಹುದು. ನಮ್ಮ ಮಕ್ಕಳ ಕುಸಿದ ಬದುಕಿಗೆ ನಾವೇ ಜವಾಬ್ದಾರರು.

ಕನಕದಾಸರ ಬಾಲ್ಯದ ಆ ಘಟನೆ ನೆನಪಾಗುತ್ತದೆ. 'ದೇವರಿಲ್ಲದ ಜಾಗದಲ್ಲಿ ತಿನ್ನು' ಎಂದು ಗುರುಗಳು ಬಾಳೆಹಣ್ಣು ನೀಡುತ್ತಾರೆ. ಎಲ್ಲಾ ಕಡೆಯೂ ದೇವರ ಇರುವಿಕೆ ನೆನಪಾಗಿ ಕನಕದಾಸರು ಕೈ ಚೆಲ್ಲುತ್ತಾರೆ. ಹಾಗೆಯೇ ಎಲ್ಲಾ ಕಡೆಯೂ ಮಕ್ಕಳಿರಬಹುದು ಎಂದು ನಮಗೆ ಯಾಕೆ ಅನಿಸುವುದಿಲ್ಲ. ಮಕ್ಕಳು ಎಲ್ಲೆಡೆಯೂ ನಮಗೆ ಕಾಣದಿರಬಹುದು, ಮಕ್ಕಳಿಗೆ ನಾವು ಕಾಣುತ್ತೇವೆ. ಮಕ್ಕಳಿಗೆ ನಮ್ಮ ದುಷ್ಟತನ ಸ್ಪಷ್ಟವಾಗಿ ಕಾಣುತ್ತದೆ.

ಮಕ್ಕಳ ಮುಂದೆಯೇ ಜಗಳ ಆಡುವ ಅಪ್ಪ–ಅಮ್ಮ; ಬಸ್ಸಿನಲ್ಲಿ ಮಕ್ಕಳ ಮುಂದೆಯೇ ಕಂಡಕ್ಟರ್‌ಗೆ ಸುಳ್ಳು ಹೇಳುವ ಅಮ್ಮ; ತಾನು ತಡವಾಗಿ ಶಾಲೆಗೆ ಬಂದು ಮಕ್ಕಳಿಗೆ ಶಿಸ್ತಿನಿಂದ ಇರಿ ಎಂದು ಪಾಠ ಮಾಡುವ ಮೇಷ್ಟ್ರು; ಯಾರೋ ವ್ಯಕ್ತಿ ಅಪಘಾತಕ್ಕೆ ಒಳಗಾಗಿ ಒದ್ದಾಡುವಾಗ ರಸ್ತೆಯಲ್ಲಿ ಸುಮ್ಮನೆ ನಿಂತು ನೋಡುವ ನಾಗರಿಕರು; ಮಕ್ಕಳು ಇದನ್ನು ನೋಡಬಹುದು ಎಂದು ಅರಿವಿದ್ದರೂ ಸಿನಿಮಾದಲ್ಲಿ ರಕ್ತ ಹರಿಸುವ ಚಿತ್ರನಿರ್ದೇಶಕ... ಇಂತಹ ನೂರೆಂಟು ಘಟನೆಗಳು ಮಕ್ಕಳ ಕಣ್ಣಿಗೆ, ಎದೆಗೆ ಬೀಳುತ್ತಾ ಹೋಗುತ್ತವೆ. ಒಂದು ದಿನ ಬೆಳೆದು ಫಲ ಕೊಡುತ್ತವೆ.

'ನಾನು ಯಾವುದೇ ಸಿನಿಮಾ ನಿರ್ದೇಶನ ಮಾಡುವಾಗಲೂ ನನಗೆ ಮಕ್ಕಳ ನೆನಪಾಗುತ್ತದೆ. ಅವರ ಮೇಲೆ ಈ ಸಿನಿಮಾ ಏನು ಪ್ರಭಾವ ಬೀರಬಹುದು ಎಂಬ ಯೋಚನೆಯಾಗುತ್ತದೆ' ಎನ್ನುತ್ತಾನೆ ಜಪಾನಿನ ಪ್ರಸಿದ್ಧ ನಿರ್ದೇಶಕ ಅಕಿರಾ ಕುರೊಸಾವಾ. ಈ ಪ್ರಶ್ನೆಯನ್ನು ನಾವು ದೊಡ್ಡವರೆಲ್ಲರೂ ನಿತ್ಯ ಕೇಳಿಕೊಳ್ಳಬೇಕು.

ಸಿನಿಮಾ ಮಾದರಿಯ ಹಲ್ಲೆಗಳು, ಹೆಣ್ಣುಮಕ್ಕಳ ಮೇಲಿನ ಶೋಷಣೆಗಳು, ಪ್ರೀತಿ ಪ್ರೇಮದ ಹೆಸರಿನಲ್ಲಿ ಆಗುವ ಮೋಸಗಳು, ಕುಡಿತಗಳು, ಮಾದಕ ವಸ್ತುಗಳ ಸೇವನೆ, ರ‍್ಯಾಗಿಂಗ್, ಸಮಾಜ ವಿರೋಧಿ ಚಟುವಟಿಕೆಗಳು.. ಮುಂತಾದವುಗಳನ್ನು ಮಗು ಇಲ್ಲಿಂದಲೇ ಕಲಿಯುತ್ತದೆ. ಯಾವುದನ್ನು ಅಪರಾಧ ಎಂದು ಭಾವಿಸಿದ್ದೇವೆಯೊ ಅಂತಹ ಒಂದು ಅಪರಾಧದ ಜಗತ್ತಿನಲ್ಲಿ ಮಗುವನ್ನು ಒಬ್ಬ ಕೈದಿಗಳಾಗುವಂತೆ ನಾವು ಪ್ರೇರೇಪಿಸುತ್ತಿದ್ದೇವೆ.



ಮೌಲ್ಯಗಳು ಪುಸ್ತಕದಲ್ಲಿ ಸುಮ್ಮನೆ ಕೂತಿವೆ. ಒಳ್ಳೆಯತನ ಇದೆ, ಅದು ವೇದಿಕೆಗಳ ಮೇಲೆ ಮಾತಿನ ರೂಪದಲ್ಲಿ ಖರ್ಚಾಗುತ್ತಿದೆ. ಜನರು ಸಭ್ಯರೇ... ಅದು ಅವರು ಒಬ್ಬರೇ ಇರುವಾಗ ಮಾತ್ರ. ಪಾಠ ಓದಿ ಪಡೆದಅಂಕಗಳಿವೆ... ಆ ಅಂಕಗಳು ನಡತೆಗಳಾಗಿ ಪರಿವರ್ತನೆ ಆಗುವುದೇ ಇಲ್ಲ.

ನಮ್ಮ ಸ್ವಾರ್ಥಕ್ಕಾಗಿ, ವ್ಯಾಪಾರಕ್ಕಾಗಿ ರೂಪಿಸುವ ವಾತಾವರಣವೇ ಮುಂದೊಂದು ದಿನ ನಮ್ಮ ಮಕ್ಕಳ ಭವಿಷ್ಯವನ್ನು ನುಂಗಿ ನೀರು ಕುಡಿಯುತ್ತದೆ. ಸದ್ಯದ ಸಂದರ್ಭದಲ್ಲಿ ಬರೀ ಹಣ ಗಳಿಕೆಯೇ ಜೀವನದ ಪರಮೋಚ್ಚ ಗುರಿ ಎನ್ನುವಂತಾಗಿದೆ. ಸಮಾಜದಲ್ಲಿ ಮೌಲ್ಯಗಳು ಈಗ ಕೇವಲ ಶೋಕೇಸ್‌ನಲ್ಲಿ ಇಟ್ಟ ಅಲಂಕಾರಿಕ ವಸ್ತುಗಳು.

ಕಾನೂನು ಬಿಗಿಗೊಳಿಸುವುದರಿಂದ, ಶಾಲೆಯಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸುವುದರಿಂದ ಮಕ್ಕಳಲ್ಲಿ ಶಿಸ್ತು ತರಲು ಸಾಧ್ಯವಿಲ್ಲ. ಬದಲಿಗೆ ಸಮಾಜದ ಪ್ರತಿಯೊಬ್ಬ ನಾಗರಿಕನೂ ತನ್ನ ಜವಾಬ್ದಾರಿ ಅರಿಯಬೇಕು. ಅಂಗಡಿಯ ಮಾಲೀಕನಿಗೆ ಮಗುವಿಗೆ ತಂಬಾಕು ಮಾರಬಾರದು ಎಂಬ ವಿವೇಚನೆ ಇರಬೇಕು; ಸಿನಿಮಾ ನಿರ್ದೇಶಕನಿಗೆ ಸಮಾಜದ ಸ್ವಾಸ್ಥ್ಯ ಕೆಡದಂತೆ ಕಥೆ ಹೇಳುವ ಸಾಮಾಜಿಕ ಪ್ರಜ್ಞೆ ಇರಬೇಕು; ಎಲ್ಲಕ್ಕಿಂತ ಮಿಗಿಲಾಗಿ ಪ್ರತಿಯೊಬ್ಬ ತಂದೆ–ತಾಯಿಗೂ ತನ್ನ ಮಗುವಿನ ಮುಂದೆ ತಾನು ಪಾರದರ್ಶಕವಾಗಿ ಬದುಕಬೇಕು ಎಂಬ ಪ್ರಾಮಾಣಿಕತೆ ಇರಬೇಕು.

ಆಸ್ತಿಯ ಜೊತೆ ಚೂರು ಸಂಸ್ಕಾರ ನೀಡುವ, ಅಂಕದ ಜೊತೆ ಕರುಣೆಯನ್ನು ಬಿತ್ತುವ, ಪ್ರೀತಿಯ ಜೊತೆ ಜವಾಬ್ದಾರಿಯನ್ನು ಹಂಚುವ, ಹಣ ಮಾಡುವುದರ ಜೊತೆ ಮನಸ್ಸನ್ನೂ ಬೆಸೆಯುವ ನಾಗರಿಕರ ಅವಶ್ಯಕತೆ ಇದೆ. ಅದೇ ನಮ್ಮ ಮಕ್ಕಳ ಪಾಲಿಗೆ ನಿಜವಾದ ಆಸ್ತಿ.

ಸಮಾಜ ಸುಧಾರಣೆ ಎಂಬುದು ಮೇಲಿನಿಂದ ಕೆಳಗೆ ಹರಿದು ಬರುವ ಪ್ರಕ್ರಿಯೆಯಲ್ಲ. ಅದು ಪ್ರತಿಯೊಬ್ಬ ವ್ಯಕ್ತಿಯ ಒಳಗಿನಿಂದಲೇ ಆರಂಭವಾಗಬೇಕಾದದ್ದು. ನಮ್ಮ ನಡವಳಿಕೆಯಲ್ಲಿ ಬದಲಾವಣೆ ತಂದುಕೊಳ್ಳದ ಹೊರತು, ನಾವು ಎಷ್ಟೇ ಸುಧಾರಿತ ಸಮಾಜವನ್ನು ನಿರ್ಮಿಸಿದರೂ ಅದು ಒಳಗಿನಿಂದಲೇ ಕುಸಿದು ಬೀಳುವುದು ಖಂಡಿತ.

ದೊಡ್ಡವರ ಪಾಲಿಗೆ ಮಕ್ಕಳು ನೈತಿಕತೆಯ ಒರೆಗಲ್ಲು ಆಗಬೇಕು. ಆತ್ಮಸಾಕ್ಷಿಗೆ ಅಳುಕುವ ದಿನಗಳು ಈಗಿಲ್ಲ. ಆತ್ಮಸಾಕ್ಷಿಯ ರೂಪದಲ್ಲಿ ಮಕ್ಕಳನ್ನಾದರೂ ನಾವು ನೋಡಬೇಕಾಗಿದೆ. ಏಕೆಂದರೆ, ನಮ್ಮ ಚಟುವಟಿಕೆಗಳು ಮಕ್ಕಳ ಇಂದು ಮತ್ತು ನಾಳೆಗಳ ಮೇಲೆ ನೇರ ಪರಿಣಾಮ ಬೀರಲಿವೆ. ಹಾಗಾಗಿ, ನಮ್ಮ ನಡೆ–ನುಡಿಯನ್ನು ನೇರವಾಗಿ ಇರಿಸಿಕೊಳ್ಳುವುದು ವೈಯಕ್ತಿಕ ಹಾಗೂ ಸಮಷ್ಟಿಯ ಹಿತಕ್ಕೆ ಒಳ್ಳೆಯದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಪಶ್ಚಿಮ ಬಂಗಾಳ: ಕಾನೂನು ಪ್ರಕ್ರಿಯೆ ಇಲ್ಲದೇ ‘ಅಕ್ರಮ ವಲಸಿಗರ’ ವಾಪಸ್‌ಗೆ ಕ್ರಮ

ಸಂವಿಧಾನ ಮತ್ತು ಸಮಯಸಾಧಕತನ

• ಸಂಜಯ್ ಹೆಗ್ಡೆ



ದೆಹಲಿ ಪೊಲೀಸರು ಸೋನಾಲಿ ಖಾತುನ್ ಅವರನ್ನು ಹುಡುಕುತ್ತಾ ಅವರ ಮನೆಯ ಬಳಿ ಬಂದರು. ಆಗ ಅವರು ಗರ್ಭಿಣಿ. ಅವರ ತಂದೆ 2003ರಲ್ಲಿ ಪಶ್ಚಿಮ ಬಂಗಾಳದ ವೀರಭೂಮಿಯಿಂದ ಅವರನ್ನೆಲ್ಲಾ ದೆಹಲಿಗೆ ಕರೆತಂದಿದ್ದರು. ಎರಡು ದಶಕಗಳಿಗೂ ಹೆಚ್ಚು ಅವರು ರಾಷ್ಟ್ರ ರಾಜಧಾನಿಯಲ್ಲಿ ದಿನಗೂಲಿ ಕಾರ್ಮಿಕರಾಗಿ ಕೆಲಸ ಮಾಡಿದ್ದರು. ಭಾರತೀಯರಾದ ಅವರು ಎಂದೂ ಬಾಂಗ್ಲಾದೇಶವನ್ನು ಕಂಡವರೇ ಅಲ್ಲ. ಆದರೂ ಬಾಂಗ್ಲಾದೇಶದವರೆಂದು ಶಂಕಿಸಿ ಪೊಲೀಸರು ಅವರನ್ನು 2025ರ ಜೂನ್ 18ರಂದು ವಶಕ್ಕೆ ಪಡೆದರು ಮತ್ತು ಒಂಬತ್ತು ದಿನಗಳ ನಂತರ ಗಡಿಯಾಚೆಗೆ ತಳ್ಳಿದರು. ಬಾಂಗ್ಲಾದೇಶದಲ್ಲಿ ಅವರನ್ನು ಜೈಲಿಗೆ ಹಾಕಲಾಯಿತು.



ಸೋನಾಲಿ ಅವರ ತಂದೆಯ ಪರವಾಗಿ ಸುಪ್ರೀಂ ಕೋರ್ಟ್‌ನಲ್ಲಿ ನಾನು ವಾದ ಮಂಡಿಸಿದೆ. ಜನರನ್ನು ಬಾಂಗ್ಲಾದೇಶಕ್ಕೆ ಗಡಿಪಾರು ಮಾಡುವುದು ಕಾನೂನಿಗೆ ವಿರುದ್ಧವಾದುದು ಎಂದು ಕಲ್ಕತ್ತ ಹೈಕೋರ್ಟ್ ಈಗಾಗಲೇ ತೀರ್ಪು ನೀಡಿದೆ. ಗರ್ಭಿಣಿಯಾದ ಭಾರತೀಯ ಮಹಿಳೆಯೊಬ್ಬರು ಗಡಿಯಲ್ಲಿ ಕಾಯುತ್ತಿದ್ದಾರೆ, ಕೇಂದ್ರ ಸರ್ಕಾರವು ಆ ಆದೇಶವನ್ನು ಪ್ರಶ್ನಿಸಿರುವುದರಿಂದ ಅವರಿಗೆ ಮರಳಿ ಪ್ರವೇಶಿಸಲು ಸಾಧ್ಯವಾಗುತ್ತಿಲ್ಲ ಎಂದು ನಾನು ನ್ಯಾಯಪೀಠಕ್ಕೆ ತಿಳಿಸಿದೆ. ಮಾನವೀಯತೆಯ ನೆಲೆಗಟ್ಟಿನಲ್ಲಿ ಆ ಮಹಿಳೆ ದೇಶದೊಳಗೆ ಪ್ರವೇಶ ಮಾಡಲು ಸಾಲಿಸಿಟರ್ ಜನರಲ್ ನೆರವಾದರು. ಸೋನಾಲಿ ಅವರಿಗೆ ಸಂಪೂರ್ಣ ವೈದ್ಯಕೀಯ ಆರೈಕೆಯನ್ನು ನೀಡುವಂತೆ ವೀರಭೂಮಿಯ ಮುಖ್ಯ ವೈದ್ಯಕೀಯ ಅಧಿಕಾರಿಗೆ ನ್ಯಾಯಾಲಯವು ನಿರ್ದೇಶಿಸಿತು. ಸೋನಾಲಿ ಡಿಸೆಂಬರ್ 5ರಂದು ಭಾರತಕ್ಕೆ ಮರಳಿದರು ಮತ್ತು ಒಂದು ತಿಂಗಳ ನಂತರ ವೀರಭೂಮಿಯ ರಾಂಪುರಹಾಟ್ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಗಂಡುಮಗುವಿಗೆ ಜನ್ಮ ನೀಡಿದರು.

ಅವರ ಗಂಡ ಡ್ಯಾನಿಶ್ ಶೇಖ್ ಇಂದಿಗೂ ಬಾಂಗ್ಲಾದೇಶದಲ್ಲಿದ್ದಾರೆ. ಅದೇ 2025ರ ಜೂನ್‌ನಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಸಿಲುಕಿಕೊಂಡ ಸ್ವೀಟಿ ಬೀಬಿ ಅವರ ಕುಟುಂಬದ ಮೂವರು ಸದಸ್ಯರ ಪರಿಸ್ಥಿತಿಯೂ ಇದೇ ಆಗಿದೆ. ಈ ವರ್ಷ ಮೇ 22ರಂದು ನಾನು ಮತ್ತೆ ನ್ಯಾಯಾಲಯದಲ್ಲಿದ್ದೆ. ಡ್ಯಾನಿಶ್ ಅವರನ್ನು ಎಂಟತ್ತು ದಿನದೊಳಗೆ ವಾಪಸ್ ಕರೆತರಲಾಗುವುದು ಎಂದು ಸಾಲಿಸಿಟರ್ ಜನರಲ್ ಅವರು ನ್ಯಾಯಪೀಠಕ್ಕೆ ಭರವಸೆ ನೀಡಿದರು. ಜತೆಗೆ ಈ ಪರಿಹಾರವು ಆ ನಿರ್ದಿಷ್ಟ ಪ್ರಕರಣಕ್ಕೆ ಮಾತ್ರ ಸೀಮಿತವಾಗಿದ್ದು, ಇದನ್ನು ಪೂರ್ವನಿದರ್ಶನವಾಗಿ ಪರಿಗಣಿಸಬಾರದು ಎಂದೂ ಒತ್ತಿ ಹೇಳಿದರು. ಅವರು ಹೇಳಿದ್ದ ಅವಧಿ ಮುಗಿದಿದೆ; ಆದರೂ ಭರವಸೆ ಈಡೇರಿಲ್ಲ.

‘ಪುಶ್‌ಬ್ಯಾಕ್’ ಎಂಬ ಕಾಲ್ಪನಿಕ ಕಥೆ: ಸರ್ಕಾರವು ತಾನು ಮಾಡುವ ಕಾರ್ಯವನ್ನು ‘ವಾಪಸ್ ಕಳುಹಿಸುವುದು’ (ಪುಶ್‌ಬ್ಯಾಕ್) ಎಂದು ಕರೆಯುತ್ತಿದೆ. ಈ ಪದವನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕಿದೆ. ಒಬ್ಬ ವ್ಯಕ್ತಿ ತನ್ನ ಭೂಪ್ರದೇಶವನ್ನು ಪ್ರವೇಶಿಸುವ ಮೊದಲೇ, ದೇಶದ ಗಡಿಯಲ್ಲೇ ಆತನನ್ನು ತಡೆದು ನಿಲ್ಲಿಸುವುದನ್ನು ಮತ್ತು ಆ ಹಂತದಲ್ಲಿಯೇ ಆತನಿಗೆ ದೇಶದೊಳಗೆ ಪ್ರವೇಶ ನಿರಾಕರಿಸುವುದನ್ನು ಅಂತರರಾಷ್ಟ್ರೀಯ ಗಡಿ ನಿರ್ವಹಣೆಯಲ್ಲಿ ‘ವಾಪಸ್ ಕಳುಹಿಸುವುದು’ ಎಂದು ವಿವರಿಸಲಾಗುತ್ತದೆ. ದೇಶದ ಒಳಗಿನಿಂದ ‘ವಾಪಸ್ ಕಳುಹಿಸುವುದು’ ಎನ್ನುವಂಥದ್ದು ಇರುವುದಿಲ್ಲ. ಸೋನಾಲಿ ಖಾತುನ್ ಎಂಬವರನ್ನು ಭಾರತ-ಬಾಂಗ್ಲಾದೇಶ ಗಡಿಯಿಂದ ಸಾವಿರಕ್ಕೂ ಹೆಚ್ಚು ಕಿಲೋಮೀಟರ್ ದೂರದಲ್ಲಿರುವ ದೆಹಲಿಯ ಒಂದು ಕೋಣೆಯಿಂದ ಕರೆದೊಯ್ಯಲಾಯಿತು; ಅವರು ಎರಡು ದಶಕಗಳಿಗೂ ಹೆಚ್ಚು ಕಾಲ ರಾಷ್ಟ್ರ ರಾಜಧಾನಿಯಲ್ಲಿ ವಾಸವಾಗಿದ್ದರು. ಜನರನ್ನು ರಾಜಧಾನಿಯಿಂದ ಗಡಿಗೆ ಸ್ಥಳಾಂತರಿಸಿ, ಅಲ್ಲಿಂದ ಬಲವಂತವಾಗಿ ಗಡಿ ದಾಟಿಸುವುದು ‘ಗಡಿಪಾರು’ (ಡಿಪೋರ್ಟೇಷನ್). ಗಡಿಪಾರು ಮಾಡುವ ಮೊದಲು ಆ ವ್ಯಕ್ತಿ ವಿದೇಶಿ ಪ್ರಜೆಯೇ ಎಂಬುದನ್ನು ಪತ್ತೆಹಚ್ಚುವುದು, ಅಧಿಕೃತ ಆದೇಶ ಹೊರಡಿಸುವುದು ಮತ್ತು ಆತನಿಗೆ ತನ್ನ ವಾದವನ್ನು ಮಂಡಿಸಲು ಅವಕಾಶ ನೀಡುವುದು ಅಗತ್ಯವಿರುತ್ತದೆ. ಇವುಗಳಲ್ಲಿ ಯಾವುದನ್ನೂ ಅನುಸರಿಸದೇ ಹಾಗೆ ಮಾಡುವುದನ್ನು ‘ವಾಪಸ್ ಕಳುಹಿಸುವುದು’ ಎನ್ನಲಾಗದು; ಅದು ಕಾನೂನುಬಾಹಿರ ಉಚ್ಚಾಟನೆ.

ವಲಸೆ ಮತ್ತು ವಿದೇಶಿಯರ ಕಾಯ್ದೆ–2025, ವಸಾಹತುಶಾಹಿ ಕಾಲದ ನಾಲ್ಕು ಹಳೆಯ ಶಾಸನಗಳನ್ನು ಒಟ್ಟುಗೂಡಿಸಿತೇ ಹೊರತು, ಕಾನೂನಿನ ಪ್ರಕ್ರಿಯೆಯನ್ನು ಬದಲಾಯಿಸಲಿಲ್ಲ. ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ವ್ಯಕ್ತಿಯನ್ನು ಹೊರಹಾಕುವ ಅಧಿಕಾರವನ್ನು ಕಾಯ್ದೆಯ ಸೆಕ್ಷನ್ 29 ಕೇಂದ್ರ ಸರ್ಕಾರಕ್ಕೆ ನೀಡುತ್ತದೆ. ಆದರೆ, ಮಾಧ್ಯಮಗೋಷ್ಠಿಯಲ್ಲಿ ಮುಖ್ಯಮಂತ್ರಿಯೊಬ್ಬರು ನೀಡುವ ಸೂಚನೆಯನ್ನು ಆದೇಶ ಎಂದು ಪರಿಗಣಿಸಲು ಸಾಧ್ಯವಿಲ್ಲ. ಇದೇ ರೀತಿ, ತಾನು ವಿದೇಶಿ ಪ್ರಜೆಯಲ್ಲ ಎಂಬುದನ್ನು ಬಂಧಿತ ವ್ಯಕ್ತಿಯೇ ಸಾಬೀತುಪಡಿಸಬೇಕು ಎಂದು ಕಾಯ್ದೆಯ ಸೆಕ್ಷನ್ 16 ಹೇಳುತ್ತದೆ. ಆದರೆ, ಹಾಗೆ ಸಾಬೀತು ಪಡಿಸಲು ಕಾನೂನು ಪ್ರಕ್ರಿಯೆಯೇ ನಡೆಯುವುದಿಲ್ಲ. ಸಂವಿಧಾನದ 22ನೇ ವಿಧಿಯು ಯಾವುದೇ ವ್ಯಕ್ತಿಯನ್ನು ಬಂಧಿಸಿದರೆ, 24 ಗಂಟೆಗಳ ಒಳಗೆ ನ್ಯಾಯಾಧೀಶರ ಮುಂದೆ ಹಾಜರುಪಡಿಸುವುದನ್ನು ಕಡ್ಡಾಯಗೊಳಿಸುತ್ತದೆ. ಊಟ ನೀಡುವುದು ಮತ್ತು ಗಡಿಯ ಬೇಲಿಯವರೆಗೆ ವಾಹನದಲ್ಲಿ ಕರೆದುಕೊಂಡು ಹೋಗುವುದರಿಂದ ಈ ಅಗತ್ಯ ಪೂರೈಸಿದಂತಾಗದು.


ಭಾರತ–ಬಾಂಗ್ಲಾದೇಶ ಗಡಿ

4,096.70 ಕಿ.ಮೀ. ಒಟ್ಟು ಉದ್ದ

3,232.22 ಕಿ.ಮೀ. ಮುಳ್ಳುತಂತಿಯ ಬೇಲಿ ಹಾಕಿರುವ ಗಡಿಯ ಉದ್ದ


864.48 ಕಿ.ಮೀ. ಮುಳ್ಳುತಂತಿ ಬೇಲಿ ಅಳವಡಿಸದಿರುವ ಗಡಿಯ ಉದ್ದ

174 ಕಿ.ಮೀ. ಬೇಲಿ ಹಾಕಲು ಸಾಧ್ಯವಿಲ್ಲದ ಗಡಿ ಪ್ರದೇಶದ ಉದ್ದ



ಮುಳ್ಳುತಂತಿ ಬೇಲಿ ಹಾಕಿರುವ ಗಡಿಯ ಪ್ರಮಾಣ

ಭಾರತದ ಐದು ರಾಜ್ಯಗಳು ಬಾಂಗ್ಲಾದೊಂದಿಗೆ ಗಡಿಯನ್ನು ಹಂಚಿಕೊಂಡಿವೆ



ಪಶ್ಚಿಮ ಬಂಗಾಳದಲ್ಲಿ... 569 ಕಿ.ಮೀ. ಉದ್ದದಷ್ಟು ಗಡಿಗೆ ಬೇಲಿ ಹಾಕಿಲ್ಲ. ಈ ಪೈಕಿ 113 ಕಿ.ಮೀ. ಉದ್ದಕ್ಕೆ ಬೇಲಿ ಹಾಕಲು ಸಾಧ್ಯವೇ ಇಲ್ಲ. ಉಳಿದ 456 ಕಿ.ಮೀ.ಗೆ ಹಾಕಬಹುದು

2,375
2024ರ ಏ. 1ರಿಂದ ಡಿ. 31ರ ನಡುವೆ ಪಶ್ಚಿಮ ಬಂಗಾಳದ ಪ್ರಾದೇಶಿಕ ನೋಂದಣಿ ಅಧಿಕಾರಿಗಳು ಗಡಿಪಾರು ಮಾಡಿರುವ ವಿದೇಶಿಯರು

1,329	374	161
ನೈಜೀರಿಯಾದವರು	ಬಾಂಗ್ಲಾದೇಶದವರು	ಉಗಾಂಡಾದವರು

ಬಾಂಗ್ಲಾದ ಅಕ್ರಮ ವಲಸಿಗರು

2016ರ ನವೆಂಬರ್ 16ರಂದು ರಾಜ್ಯಸಭೆಯಲ್ಲಿ ಮಾತನಾಡಿದ್ದ ಗೃಹ ಖಾತೆ ರಾಜ್ಯ ಸಚಿವ ಕಿರಣ್ ರಿಜಿಜು ಅವರು, ಬಾಂಗ್ಲಾದೇಶದ 2 ಕೋಟಿ ಅಕ್ರಮ ವಲಸಿಗರು ಭಾರತದಲ್ಲಿ ನೆಲಸಿದ್ದಾರೆ ಎಂದಿದ್ದರು.

ಭಾರತದ ವಿದೇಶಾಂಗ ಸಚಿವಾಲಯದ ಪ್ರಕಾರ, ಬಾಂಗ್ಲಾದೇಶದ ಅಕ್ರಮ ವಲಸಿಗರು ಎಂದು ಶಂಕಿಸಲಾದ 2,862 ಮಂದಿಯ ರಾಷ್ಟ್ರೀಯತೆಯನ್ನು ಪರಿಶೀಲನೆ ಮಾಡುವಂತೆ ಭಾರತ ಮಾಡಿದ ಮನವಿಯನ್ನು ಬಾಂಗ್ಲಾದೇಶ ಇನ್ನೂ ಇತ್ಯರ್ಥಪಡಿಸಿಲ್ಲ. ಕೆಲವು ಅರ್ಜಿಗಳು ಐದು ವರ್ಷಗಳಿಂದಲೂ ಬಾಕಿ ಇವೆ

ಅಕ್ರಮ ವಲಸೆ ಮತ್ತು ಬಿಜೆಪಿ

- ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಬಾಂಗ್ಲಾದೇಶದ ಜನರ ಅಕ್ರಮ ವಲಸೆಯನ್ನು ಚುನಾವಣಾ ವಿಷಯವನ್ನಾಗಿಸಿತ್ತು
- ಮಮತಾ ಸರ್ಕಾರವು ಅಕ್ರಮ ವಲಸಿಗರಿಗೆ ರಾಜ್ಯದಲ್ಲಿ ನೆಲೆ ಕಂಡುಕೊಳ್ಳಲು ನೆರವಾಗುತ್ತಿದೆ ಎಂದು ಆರೋಪಿಸಿತ್ತು
- ಬಾಂಗ್ಲಾದ ಅಕ್ರಮ ವಲಸಿಗರಿಂದಾಗಿ ದೇಶದ ಗಡಿ ಪ್ರದೇಶದ ಜಿಲ್ಲೆಗಳ ಜನಸಂಖ್ಯಾ ಸ್ವರೂಪ ಬದಲಾಗಿದೆ. ಇದು ರಾಷ್ಟ್ರೀಯ ಭದ್ರತೆಗೆ ಬೆದರಿಕೆ ಒಡ್ಡುತ್ತಿದೆ ಎಂದಿತ್ತು

ನಡೆಯದ ನ್ಯಾಯಾಂಗ ಪರಿಶೀಲನೆ: ಪಶ್ಚಿಮ ಬಂಗಾಳದ ನೂತನ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಹೊಸ ಪದ್ಧತಿಯನ್ನು ರೂಪಿಸಿದ್ದಾರೆ. ಪೊಲೀಸರು ಒಬ್ಬ ಅಕ್ರಮ ವಲಸಿಗನನ್ನು ವಶಕ್ಕೆ ಪಡೆದರೆ, ಆತನನ್ನು ನ್ಯಾಯಾಲಯಕ್ಕೆ ಕರೆದೊಯ್ಯುವುದಿಲ್ಲ; ಬದಲಿಗೆ, ಆತನಿಗೆ ಊಟ ನೀಡಲಾಗುವುದು ಮತ್ತು ಬಿಎಸ್‌ಎಫ್ ಕೈಗೆ ಒಪ್ಪಿಸಿ, ಗಡಿ ಮೂಲಕ ವಾಪಸ್ ಕಳುಹಿಸಲು ಸೂಚಿಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಅವರ ಸರ್ಕಾರವು ರಾಜ್ಯದಾದ್ಯಂತ ಅಕ್ರಮ ವಲಸಿಗರ ವಸತಿ ಶಿಬಿರಗಳನ್ನು ಸಜ್ಜುಗೊಳಿಸುತ್ತಿದೆ. ಸುವೇಂದು ಅಧಿಕಾರಿ ಅವರು ಅದಕ್ಕೆ ಘೋಷಿತ ನೀತಿಯ ಮುದ್ರೆಯೊತ್ತಿದ್ದಾರೆ. ಅಸ್ಸಾಂನಲ್ಲಿ ಸದ್ದಿಲ್ಲದೇ ನಡೆಯುತ್ತಿರುವುದು ಪಶ್ಚಿಮ ಬಂಗಾಳದಲ್ಲಿ ಈಗ ಬಹಿರಂಗವಾಗಿಯೇ ನಡೆಯುತ್ತಿದೆ. ಮುಖ್ಯಮಂತ್ರಿ ಇನ್ನೂ ಒಂದು ಹೆಜ್ಜೆ ಮುಂದೆ ಇಟ್ಟಿದ್ದಾರೆ. ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮೂಲಕ ಮತದಾರರ ಪಟ್ಟಿಯಿಂದ ಹೆಸರು ತೆಗೆದುಹಾಕಲಾಗಿರುವ ಮಹಿಳೆಯರಿಗೆ ಅನ್ನಪೂರ್ಣ ಯೋಜನೆಯ ಅಡಿಯಲ್ಲಿ ಸೌಲಭ್ಯ ನೀಡಲಾಗುವುದಿಲ್ಲ ಎಂದು ಅವರು ಹೇಳಿದ್ದಾರೆ; ಮೇಲ್ಮನವಿ ನ್ಯಾಯಮಂಡಳಿಗಳಲ್ಲಿ ಅವರ ಮೇಲ್ಮನವಿಯು ಪರಿಗಣನೆಯ ಹಂತದಲ್ಲಿದ್ದರೆ ಅಥವಾ ಸ್ವೀಕೃತವಾಗಿದ್ದರೆ



> ಸಿಎಎ ಅಡಿಯಲ್ಲಿ ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಿದ ನಿರಾಶ್ರಿತರನ್ನು ಬಿಟ್ಟು ಉಳಿದವರನ್ನೆಲ್ಲ ಬಂಧಿಸಲಾಗುವುದು. ಅವರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುವ ಬದಲು ಗಡಿ ಭದ್ರತಾ ಪಡೆಗೆ (ಬಿಎಸ್‌ಎಫ್) ಹಸ್ತಾಂತರಿಸಲಾಗುವುದು. ಬಿಎಸ್‌ಎಫ್, ಬಾಂಗ್ಲಾದೇಶದ ಗಡಿ ಭದ್ರತಾ ಸಿಬ್ಬಂದಿಯೊಂದಿಗೆ ಮಾತುಕತೆ ನಡೆಸಿ ಅವರನ್ನು ಗಡಿಪಾರು ಮಾಡಲು ಯತ್ನಿಸಲಿದೆ. ನಾವು ರಾಜ್ಯದಲ್ಲಿ ಅಕ್ರಮ ವಲಸಿಗರ ಪತ್ತೆ, ಮತದಾರರ ಪಟ್ಟಿಯಿಂದ ಹೆಸರು ತೆಗೆದು ಹಾಕುವುದು ಮತ್ತು ಗಡಿಪಾರು ಮಾಡುವುದು... ಈ ನೀತಿಯನ್ನು ಅನುಸರಿಸಲಿದ್ದೇವೆ
>
> **ಸುವೇಂದು ಅಧಿಕಾರಿ,**
> ಪಶ್ಚಿಮ ಬಂಗಾಳದ ಮುಖ್ಯಮಂತ್ರಿ

ಮಾತ್ರ ಅವರನ್ನು ಪರಿಗಣಿಸಲಾಗುವುದು ಎಂದಿದ್ದಾರೆ.

ಬಿಹಾರದ ಎಸ್‌ಐಆರ್ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಈ ವಿಚಾರದ ಬಗ್ಗೆ ನೇರಮಾತುಗಳಲ್ಲಿ ಸ್ಪಷ್ಟವಾಗಿ ಹೇಳಿದೆ. ಮತದಾರರ ಪಟ್ಟಿಯಿಂದ ಹೆಸರನ್ನು ಕೈಬಿಟ್ಟರೆ ವ್ಯಕ್ತಿಯ ಪೌರತ್ವ ಹೋಗುವುದಿಲ್ಲ. 1955ರ ಪೌರತ್ವ ಕಾಯ್ದೆಯ ಅಡಿಯಲ್ಲಿ ಸಂಬಂಧಿಸಿದ ಪ್ರಾಧಿಕಾರವು ಒಬ್ಬ ವ್ಯಕ್ತಿಯ ಪೌರತ್ವವನ್ನು ನಿಗದಿಪಡಿಸುತ್ತದೆ. ಚುನಾವಣಾ ಆಯೋಗವು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡುವ ಬಗ್ಗೆ ಮಾತ್ರ ನಿರ್ಧರಿಸುತ್ತದೆ. ಅದು ಪೌರತ್ವವನ್ನು ನಿರ್ಧರಿಸುವುದಿಲ್ಲ. ಹಾಗಿದ್ದರೂ ಮುಖ್ಯಮಂತ್ರಿಯವರು ಮತದಾರರ ಪಟ್ಟಿಯಿಂದ ತೆಗೆದುಹಾಕಲಾದ ಜನರ ಪಟ್ಟಿಯನ್ನು, ತಮ್ಮ ಪಾಲಿನ ‘ಭಾರತೀಯರು ಅಲ್ಲದವರ ಪಟ್ಟಿ’ಯನ್ನಾಗಿ ಮಾಡಿಕೊಂಡಿದ್ದಾರೆ. ಮತ್ತು ಸರ್ಕಾರದ ಜನ ಕಲ್ಯಾಣ ಯೋಜನೆಗಳ ಪ್ರಯೋಜನವನ್ನು ಅವರಿಗೆ ನಿರಾಕರಿಸುವ ಪ್ರಸ್ತಾವವನ್ನು ಇಟ್ಟಿದ್ದಾರೆ.

ಅದಕ್ಕಾಗಿ 11 ಪುಟಗಳ ಅರ್ಜಿ ನಮೂನೆಯನ್ನು ಭರ್ತಿ ಮಾಡುವ ವ್ಯವಸ್ಥೆಯನ್ನು ರೂಪಿಸಿದ್ದಾರೆ. ಅರ್ಜಿಯಲ್ಲಿ ಕುಟುಂಬದಲ್ಲಿರುವ ಪ್ರತಿ ವಯಸ್ಕರ ಆಧಾರ್ ವಿವರಗಳು, ಮತದಾರರ ಗುರುತಿನ ಚೀಟಿ ಸಂಖ್ಯೆ, ಪ್ಯಾನ್ ಸಂಖ್ಯೆ, ಜಮೀನಿನ ಮಾಲೀಕತ್ವ, ವಾಹನಗಳು ಮತ್ತು ವಿದ್ಯಾರ್ಥಿಗಳು ಯಾವ ಶಾಲೆಗೆ ಹೋಗುತ್ತಿದ್ದಾರೆ ಎಂಬ ವಿವರಗಳನ್ನು ತುಂಬಬೇಕು. ಅದರಲ್ಲಿ ಕೇಳಲಾಗಿರುವ ಇನ್ನೆರಡು ಮಾಹಿತಿಗಳಿಗೂ, ಜನಕಲ್ಯಾಣದ ತರ್ಕಕ್ಕೂ ಸಂಬಂಧವೇ ಇಲ್ಲ: ಪೌರತ್ವ ತಿದ್ದುಪಡಿ ಕಾಯ್ದೆಯ ಅಡಿಯಲ್ಲಿ ಅರ್ಜಿದಾರರ ಸ್ಥಾನಮಾನ ಮತ್ತು ಎಸ್‌ಐಆರ್‌ನಲ್ಲಿ ಅರ್ಜಿದಾರನ ಹೆಸರು ಮತದಾರರ ಪಟ್ಟಿಯಿಂದ ಕೈಬಿಟ್ಟು ಪ್ರಕರಣ ಮೇಲ್ಮನವಿ ನ್ಯಾಯಮಂಡಳಿಯಲ್ಲಿ ಇತ್ಯರ್ಥಕ್ಕೆ ಬಾಕಿ ಇದೆಯೇ ಎಂದು ಕೇಳಲಾಗಿದೆ. ಬ್ಯಾಂಕ್ ಖಾತೆಗೆ ₹3,000 ನಗದನ್ನು ವರ್ಗಾಯಿಸಲು ಯಾವುದೇ ಜನಕಲ್ಯಾಣದ ಅರ್ಜಿಯು ಈ ಮಾಹಿತಿಯನ್ನು ಹೊಂದುವ ಅಗತ್ಯವೇ ಇಲ್ಲ.

ವಾಸ್ತವದಲ್ಲಿ ಈ ಅರ್ಜಿಯ ಉದ್ದೇಶ ಏನು ಎಂಬುದನ್ನು ಮುಖ್ಯಮಂತ್ರಿಯವರೇ ದೃಢಪಡಿಸಿದ್ದಾರೆ. ಬಾಂಗ್ಲಾದೇಶದಿಂದ ವಲಸೆ ಬಂದು ಸಿಎಎ ಅಡಿಯಲ್ಲಿ ಅರ್ಜಿ ಸಲ್ಲಿಸಿರುವ ಅಥವಾ ಪೌರತ್ವ ಪಡೆದಿರುವ ಹಿಂದೂ ನಿರಾಶ್ರಿತರು ಯೋಜನೆಗಳ ಪ್ರಯೋಜನ ಪಡೆಯಲಿದ್ದಾರೆ ಎಂದು ಅವರು ಘೋಷಿಸಿದ್ದಾರೆ. ಕಲ್ಯಾಣ ಯೋಜನೆಯ ಫಲಾನುಭವಿಯನ್ನು ಕೂಡ ಈಗ ಧಾರ್ಮಿಕ ಮಾನದಂಡದ ಆಧಾರದಲ್ಲಿ ನಿರ್ಧರಿಸಲಾಗುತ್ತದೆ. ಭಾರತದ ಮುಸ್ಲಿಂ ನಾಗರಿಕರು ಮತ್ತು ಅವರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈಬಿಟ್ಟಿದ್ದರೆ ಅಂತಹವರು ಸರ್ಕಾರದ ಒಂದು ಯೋಜನೆಯ ಲಾಭ ಪಡೆಯಲೂ ಅರ್ಹರಲ್ಲ. ಆದರೆ, ಭಾರತದ ಪೌರತ್ವ ಪಡೆದ ಬಾಂಗ್ಲಾದೇಶದ ಹಿಂದೂ ನಿರಾಶ್ರಿತರು ಯೋಜನೆಯ ಪ್ರಯೋಜನ ಪಡೆಯಬಹುದು. ಸಂವಿಧಾನದ 14ನೇ ಮತ್ತು 15ನೇ ವಿಧಿಗಳು, ಧರ್ಮದ ಆಧಾರದಲ್ಲಿ ನಾಗರಿಕರ ನಡುವೆ ತಾರತಮ್ಯ ಮಾಡುವುದನ್ನು ನಿರ್ಬಂಧಿಸುತ್ತವೆ. ಈ ವಿಧಿಗಳು ಬರೀ ಸಲಹೆಗಳಲ್ಲ; ಅವುಗಳು ರಾಜಕೀಯದ ರಂಪಾಟಗಳನ್ನೂ ಲೆಕ್ಕಿಸದೆ ಪ್ರತಿಯೊಂದು ಸರ್ಕಾರಕ್ಕೂ ನಿರ್ದೇಶಿಸಿರುವ ಆಜ್ಞೆಗಳಾಗಿವೆ.

ಸಂವಿಧಾನದ 21ನೇ ವಿಧಿಯು ಪ್ರತಿಯೊಬ್ಬ ಭಾರತೀಯನಿಗೂ ರಕ್ಷಣೆ ನೀಡುತ್ತದೆ; ಭಾರತದ ಪ್ರಜೆಗಳಿಗೆ ಮಾತ್ರವಲ್ಲ, ಭಾರತದ ಪ್ರತಿ ವ್ಯಕ್ತಿಗೂ. ಸಂವಿಧಾನವನ್ನು ರೂಪಿಸಿದವರು ಅತ್ಯಂತ ಜಾಗ್ರತೆಯಿಂದ ಈ ಪದವನ್ನು ಬಳಸಿದ್ದಾರೆ. ಒಂದು ಪ್ರಭುತ್ವವು ತನ್ನ ಜನರನ್ನು ಹುಟ್ಟು, ಧರ್ಮದ ಆಧಾರದಲ್ಲಿ ಪ್ರತ್ಯೇಕಿಸಿದರೆ ಮತ್ತು ಕಾನೂನು ಪ್ರಕ್ರಿಯೆ ನಡೆಸದೆಯೇ ಅವರ ವಿರುದ್ಧ ಕಾರ್ಯಾಚರಣೆಗೆ ಇಳಿದರೆ ಏನಾಗುತ್ತದೆ ಎನ್ನುವುದನ್ನು ಅವರು ಕಂಡಿದ್ದರು. ಈ ಹಿನ್ನೆಲೆಯಲ್ಲಿಯೇ, ಅಸಹಿಷ್ಣು ಸರ್ಕಾರ ಪಕ್ಷಪಾತದಿಂದ ವರ್ತಿಸುವುದನ್ನು ತಡೆಯಲು ಮತ್ತು ಸುಲಭವಾಗಿ ಕಾರ್ಯಾಚರಣೆ ಮಾಡುವುದು ಸಾಧ್ಯವಾಗದಿರುವಂತೆ ಮಾಡಲು ‘ವ್ಯಕ್ತಿ’ ಎನ್ನುವ ಪದವನ್ನು ಬಳಸಲಾಗಿದೆ.

ಸೋನಾಲಿ ಖಾತುನ್ ಮಗ ಭಾರತದಲ್ಲಿ ಹುಟ್ಟಿದ್ದಾನೆ. ಅವರ ತಂದೆಯು ಸುಪ್ರೀಂ ಕೋರ್ಟ್‌ನಲ್ಲಿ ನೀಡಲಾಗಿರುವ ಭರವಸೆ ಈಡೇರುವುದನ್ನು ನಿರೀಕ್ಷಿಸುತ್ತಾ ಗಡಿಯಲ್ಲಿ ಕಾಯುತ್ತಿದ್ದಾರೆ. ಗಡಿಪಾರು ಮಾಡುವ ಮುನ್ನ ಆಹಾರ ನೀಡುವುದನ್ನು ನ್ಯಾಯಪ್ರಕ್ರಿಯೆ ಎನ್ನಲಾಗುವುದಿಲ್ಲ. ಅದೊಂದು ಸೌಜನ್ಯದ ನಡೆ ಅಷ್ಟೆ. ಮರಣ ದಂಡನೆಗೆ ಗುರಿಯಾದ ವ್ಯಕ್ತಿಗೂ ಕೊನೆಯ ಬಾರಿಗೆ ಊಟ ನೀಡಲಾಗುತ್ತದೆ. ಕಾನೂನು ಪ್ರಕ್ರಿಯೆಯು ನ್ಯಾಯಯುತವಾಗಿರಬೇಕು, ನಿಷ್ಪಕ್ಷಪಾತವಾಗಿರಬೇಕು ಮತ್ತು ಸ್ವೇಚ್ಛೆ ಎನಿಸಬಾರದು. ನ್ಯಾಯಪ್ರಕ್ರಿಯೆ ಮತ್ತು ಸೌಜನ್ಯದ ಕ್ರಿಯೆ ಎರಡೂ ಎಂದಿಗೂ ಒಂದೇ ಆಗಲಾರವು.

ಲೇಖಕ: ಸುಪ್ರೀಂ ಕೋರ್ಟ್ ಹಿರಿಯ ವಕೀಲ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald- Prajavani Relief Trust'ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ 2025ನೇ ಸಾಲಿನ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಶುಲ್ಕ ಪಾವತಿಗೆ ಸಹಾಯ



ಮನೆಯಲ್ಲಿ ಹಣಕಾಸಿನ ತೊಂದರೆ ಇದ್ದ ವೇಳೆಯಲ್ಲಿ ‘ಪ್ರಜಾವಾಣಿ ಸ್ಕಾಲರ್‌ಶಿಪ್’ ದೊರೆಯಿತು. ಕಾಲೇಜಿನ ಶುಲ್ಕ ಪಾವತಿಗೆ ಅನುಕೂಲವಾಯಿತು. ಪಿಯು ಅಧ್ಯಯನ ಮಾಡುತ್ತಿದ್ದೇನೆ. ಉನ್ನತ ಶಿಕ್ಷಣ ಮಾಡಬೇಕೆಂಬ ಆಸೆಯಿದೆ. ಸಮಾಜಮುಖಿ ಕಾರ್ಯ ಮಾಡುತ್ತಿರುವ ‘ಪ್ರಜಾವಾಣಿ’ಗೆ ಧನ್ಯವಾದ.

–ನಾಗರಾಜ ಕೊಲ್ಹಾಪುರೆ, ಹುಬ್ಬಳ್ಳಿ

‘ನೆರವು: ಸಾಧನೆಗೆ ಪ್ರೇರಣೆ’



ಆರ್ಥಿಕ ತೊಂದರೆಯಲ್ಲಿದ್ದ ನಮಗೆ ಕಾಲೇಜಿನ ಶುಲ್ಕ ಕಟ್ಟಲು ಕಷ್ಟವಾಗಿತ್ತು. ಅಷ್ಟು, ಇಷ್ಟು ಕೂಡಿಟ್ಟ ಹಣದ ಜೊತೆಗೆ ‘ಪ್ರಜಾವಾಣಿ ಸ್ಕಾಲರ್‌ಶಿಪ್’ ಆಸರೆಯಾಯಿತು. ಇಂತಹ ಸಣ್ಣ ಸಹಾಯಗಳು ಬಹುದೊಡ್ಡ ಸಾಧನೆಗೆ ಪ್ರೇರಣೆ ನೀಡುತ್ತವೆ. ಬಡ ವಿದ್ಯಾರ್ಥಿಗಳ ಸಂಕಷ್ಟ ಅರಿತು ಧನಸಹಾಯ ಒದಗಿಸುತ್ತಿರುವ ‘ಪ್ರಜಾವಾಣಿ’ಗೆ ಆಭಾರಿಯಾಗಿರುವೆ. ನಾನೂ ಉನ್ನತ ಉದ್ಯೋಗಕ್ಕೆ ಸೇರಿ ಬಡವರಿಗೆ ಸಹಾಯ ಮಾಡುವೆ.

–ಪಾರ್ವತಿ ಬಿ.ಜಿ., ನಂದಿಗುಡಿ, ಹರಿಹರ ತಾಲ್ಲೂಕು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**


ಕರ್ಮವಾಣಿ ಎಂಬ ‘ಎಕ್ಸ್’ ಖಾತೆಯಲ್ಲಿ ವಿಡಿಯೊ ತುಣುಕೊಂದನ್ನು ಹಂಚಿಕೊಳ್ಳಲಾಗಿದ್ದು, ಅಯೋಧ್ಯೆಯ ರಾಮಮಂದಿರದಲ್ಲಿ ನವಿಲೊಂದು ಬಾಲರಾಮನ ವಿಗ್ರಹದ ಬಳಿ ಹೂವಿನ ಹಾರವನ್ನು ಇಡುತ್ತಿರುವ ದೃಶ್ಯ ಅದರಲ್ಲಿದೆ. ಈ ಘಟನೆಯನ್ನು ವ್ಯಕ್ತಿಯೊಬ್ಬರು ಮೊಬೈಲ್‌ನಲ್ಲಿ ಚಿತ್ರೀಕರಿಸುತ್ತಿರುವುದು ಕಾಣಿಸುತ್ತದೆ. ಇದು ನಿಜವಾದ ಘಟನೆ ಎಂದು ಪ್ರತಿಪಾದಿಸಲಾಗುತ್ತಿದೆ. 1.3 ಲಕ್ಷಕ್ಕೂ ಹೆಚ್ಚು ಜನರು ವಿಡಿಯೊವನ್ನು ವೀಕ್ಷಿಸಿದ್ದಾರೆ. ಹಲವರು ಹಂಚಿಕೊಂಡಿದ್ದಾರೆ. ಆದರೆ, ಇದು ಸುಳ್ಳು.



ವಿಡಿಯೊದ ಬಗ್ಗೆ ಪರಿಶೀಲನೆ ನಡೆಸಿದಾಗ, ಈ ವಿಡಿಯೊ ಹಿಂದೆಯೂ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು ಎಂಬುದು ತಿಳಿದು ಬಂತು. ವಿಡಿಯೊದ ಅಸಲಿತನವನ್ನು ಪತ್ತೆ ಹಚ್ಚುವುದಕ್ಕಾಗಿ ಅದರಿಂದ ಕೀಫ್ರೇಮ್‌ಗಳನ್ನು ಪ್ರತ್ಯೇಕಿಸಿ, ಒಂದು ಫ್ರೇಮ್ ಅನ್ನು ಗೂಗಲ್ ಲೆನ್ಸ್ ಬಳಸಿಕೊಂಡು ಪರಿಶೀಲನೆಗೆ ಒಳಪಡಿಸಿದಾಗ ಆಶೀಶ್ ಸಕ್ಸೇನಾ ಎಂಬವರು ಇನ್‌ಸ್ಟಾಗ್ರಾಂನಲ್ಲಿ ಇದೇ ವಿಡಿಯೊವನ್ನು ಪೋಸ್ಟ್ ಮಾಡಿದ್ದು ಸಿಕ್ಕಿತು. ಆ ಪೋಸ್ಟ್ ಜೊತೆಗಿನ ವಿವರಗಳನ್ನು ಪರಿಶೀಲಿಸಿದಾಗ, ಅದು ‘ಸೊರಾ’ ಎಂಬ ಎಐ ಟೂಲ್ ಬಳಸಿಕೊಂಡು ಸೃಷ್ಟಿಸಿದ ವಿಡಿಯೊ ಎಂಬುದು ಗೊತ್ತಾಯಿತು. ಆ ಖಾತೆಯಲ್ಲಿನ ಇತರ ಪೋಸ್ಟ್‌ಗಳನ್ನು ಗಮನಿಸಿದಾಗ, ಎಐ ವಿಡಿಯೊಗಳನ್ನು ಆಗಾಗ ಹಂಚಿಕೊಂಡಿರುವುದು ಕಂಡು ಬಂತು. ವಿಡಿಯೊ ತುಣುಕನ್ನು ಎಐ ಪತ್ತೆ ಮಾಡುವ ಹೈವ್ ಮಾಡರೇಷನ್ ಟೂಲ್ ಮೂಲಕ ವಿಶ್ಲೇಷಣೆಗೆ ಒಳಪಡಿಸಿದಾಗ, ಅದು ಡೀಪ್ ಫೇಕ್ ವಿಡಿಯೊ ಎಂಬುದು ದೃಢಪಟ್ಟಿತು ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ದಾದಾಪೀರ್ ನವಿಲೇಹಾಳ್



ಸೌಹಾರ್ದವೆಂಬ ಒಳಹರಿವು

ಚಿಕ್ಕಣ್ಣ ಮತ್ತು ತಿಪ್ಪಣ್ಣ ಮರಿಮಕ್ಕಳನ್ನು ಕಂಡವರು; ಸುತ್ತಮುತ್ತಲಿನ ನಾಲ್ಕಾರು ಹಳ್ಳಿಗಳಿಗೂ ಬೇಕಾದವರು. ಶ್ರಾವಣ ತಿಂಗಳು ಬಂತೆಂದರೆ ಇವರು ಮನೆ ಸೇರುತ್ತಿದ್ದುದು ಅಪರೂಪ. ಶಿವಪುರಾಣ, ಬೇತಾಳ ವಿಕ್ರಮಾದಿತ್ಯನ ಕಥೆಗಳು, ಜನಪದ ಕಥೆ, ರಾಮಾಯಣ ಮಹಾಭಾರತ ಸೇರಿದಂತೆ ಇವರ ಕಥಾಕೋಶದ ಹರವು ದೊಡ್ಡದು. ಹಗಲುರಾತ್ರಿ ಎನ್ನದೇ ಇವರ ಕಥೆಗಳನ್ನು ಕೇಳಲು ಊರುಬಾಕಲಿನ ದುರ್ಗವ್ವನ ಗುಡಿ ಅಥವಾ ಹಳೆಯ ಮಸೀದಿ ಕಟ್ಟೆಗೆ ಎಲ್ಲ ಬಗೆಯ ಜನರು ಬಂದು ಸೇರುತ್ತಿದ್ದರು. ಇಬ್ಬರ ಪೈಕಿ ಊರುಬಾಕಲಿಗೆ ಒಬ್ಬರು ಬರುವುದು ತಡವಾದರೆ ಅವರನ್ನು ಕರೆತರಲು ಇನ್ನೊಬ್ಬರು ಹೋಗುತ್ತಿದ್ದರು. ಎಷ್ಟೋ ಸಲ ಹೇಳಿಕಳಿಸಿದ ಹಾಗೆ ಒಂದೇ ಸಮಯಕ್ಕೆ ಅವರಿಬ್ಬರೂ ಬರುತ್ತಿದ್ದರು.


ಅವರಿಬ್ಬರ ಸ್ನೇಹ ಅರಿತ ಹೃದಯ ಒಲಿದ ಜೀವ ಬೆರೆತ ಮನಸ್ಸಿನಂತಿತ್ತು. ಇವರಿಬ್ಬರೂ ಒಂಟಿಯಾಗಿ ಮದುವೆ, ಹಬ್ಬ ಮುಂತಾದ ಕಾರ್ಯಕ್ರಮಗಳಿಗೆ ಹೋದವರೇ ಅಲ್ಲ. ಹೀಗೊಂದು ದಿನ ಚಿಕ್ಕಣ್ಣ ‘ಇನ್ನು ಸಾಕು’ ಅಂತ ಹೇಳಿ ಯಾತ್ರೆ ಮುಗಿಸಿದಾಗ ತಿಪ್ಪಣ್ಣ ಮೂಲೆಯಲ್ಲಿ ಕುಳಿತು ಕಣ್ಣೀರು ಹಾಕಿ ‘ನನ್ನದು ಇನ್ನೆಷ್ಟು ದಿನ?’ ಎಂದು ಹೊರಟವರು ಊರುಬಾಕಲಿಗೆ ಕಾಲಿಡಲಿಲ್ಲ. ಒಂದೇ ವಾರದಲ್ಲಿ ಅವರೂ ಹೋದರು. ಅವರಿಲ್ಲದ ದುರ್ಗವ್ವನ ಗುಡಿ, ಹಳೆಯ ಮಸೀದಿ ಕಟ್ಟೆಗೆ ಒರಗಿ ಕುಳಿತ ಒಬ್ಬೊಬ್ಬರದೂ ಒಂದೊಂದು ಕಥೆಯೇ! ಕಥೆಯೆಂದರೆ ಸಲಿಗೆ, ನೋವು! ಹೊರಳುಗಣ್ಣಿನ ತುಂಬ ದೂರ ತೀರಕ್ಕೆ ಹೊರಡುವ ತೀರದ ಹಂಬಲ.

ನಮ್ಮ ಊರು ಕೇರಿ ಸಮಾಜಗಳೆಲ್ಲ ನಮ್ಮ ನಮ್ಮ ಸಂಸ್ಕೃತಿ ಪರಂಪರೆಯ ಜೀವತಾಣಗಳಾಗಿವೆ. ಅಲ್ಲಿನ ಬದುಕು ಸಮೃದ್ಧವಾಗಿರುವುದು ಕೇವಲ ದುಡಿಮೆಯ ಕಾರಣಕ್ಕಲ್ಲ. ಅನೂಚಾನವಾಗಿ ಬಂದ ಸಾಂಸ್ಕೃತಿಕ ಚಹರೆಗಳಿಂದಲೂ ಅದು ವೈವಿಧ್ಯಮಯ. ರಾಗಿ, ಜೋಳ, ಭತ್ತ ತರಾವರಿ ತರಕಾರಿ ಬೆಳೆಯುವ ಹೊಲಗಳನ್ನು ಅಡಿಕೆ ಆಕ್ರಮಿಸಿ ಕೆಲವರ ಕೈಗಳಿಗೆ ಕೊಳ್ಳುವ ಸಾಮರ್ಥ್ಯವೂ ಇಲ್ಲದವರಿಗೆ ಕೊಡದ ಬಡತನವೂ ಬಂದಿದೆ. ಅವರ ಬವಣೆ ಕಾಡಿಗೆ ಹೋದ ರಾಮ ಸೀತೆ ಲಕ್ಷ್ಮಣ ಮತ್ತು ಪಾಂಡವರಿಗಿಂತಲೂ ತೀವ್ರವಾಗಿದೆ. ತಿನ್ನುವ ಕಾಳುಕಡೆ ಬೆಳೆಯುವಾಗ ಎಲ್ಲ ಋತುಗಳಲ್ಲಿ ಕೆಲಸವಿರುತ್ತಿತ್ತು. ದುಡಿಯುವವನಿಗೆ ಕೆಲಸವೇ ಖುಷಿ ಕೊಡುತ್ತಿತ್ತು. ಈಗ ಅಂಗೈಯಲ್ಲಿ ಮೊಬೈಲ್ ಹಿಡಿದು ತೀಡುತ್ತಾ ಕುಳಿತರೆ ಕಣ್ಣು ಕೀಳದಂತಹ ಬಣ್ಣಬಣ್ಣದ ಲೋಕದ ಕೀಲು ಕುಹಕಗಳು ರಾಚುತ್ತವೆ. ಎಲ್ಲರೊಟ್ಟಿಗೆ ಇದ್ದೂ ಒಂಟಿಯಾಗಿರುವ ಮನುಷ್ಯನ ಮನಸ್ಸು ಬೆಸೆಯುವ ಗುಡಿ, ಚರ್ಚು, ಮಸೀದಿಗಳ ಕಟ್ಟೆ ಕೊನರದ ಕೊರಡಾಗಿವೆ. ಎದೆಗೊದ್ದ ಮಗನ ಮೇಲಿನ ಮುನಿಸು, ಸುಖಪಡಬೇಕಾದ ಹೊತ್ತಿಗೆ ಹೊರಟೇಹೋದ ಹೆಂಡತಿ, ಊರ ಉಸಾಬರಿಯಲ್ಲಿ ಉರಿದು ಹೋದ ನೆಮ್ಮದಿ ಹೀಗೆ ಏನೇನೋ ಕಳೆದುಕೊಂಡು ಊರುಬಾಕಲಿಗೆ ಬರುತ್ತಿದ್ದವರ ಹೃದಯವನ್ನು ಚಿಕ್ಕಣ್ಣ ತಿಪ್ಪಣ್ಣ ಸೇರಿ ಸಂಪನ್ನಗೊಳಿಸುತ್ತಿದ್ದರು.

ಬೇರೆ ಬೇರೆ ಧರ್ಮಗಳ ಚಿಕ್ಕಣ್ಣ ಮತ್ತು ತಿಪ್ಪಣ್ಣ ಎಂದೂ ಬೇರೆಯಾಗಿ ಯೋಚಿಸಲಿಲ್ಲ, ಬದುಕಲಿಲ್ಲ. ಅದು ನಮ್ಮೀ ನೆಲದ ಜೀವಜಗತ್ತು ಪಡೆದುಕೊಂಡು ಬಂದ ಪರಂಪರೆ, ಪಾಲಿಸಿಕೊಂಡು ಬಂದ ಸಂಸ್ಕೃತಿ. ಒಡೆದಾಳುವ ಜಾತಿ ಧರ್ಮಗಳ ಪ್ರಜ್ಞಾಪೂರ್ವಕ ಪೋಷಣೆಗೆ ಟೊಂಕಕಟ್ಟಿ ನಿಂತವರಿಗಿಂತ ಚಿಕ್ಕಣ್ಣ ತಿಪ್ಪಣ್ಣ ಬದುಕಿ ಕಟ್ಟಿದ ಧರ್ಮಭಿನ್ನ ಮಾದರಿಯದು. ಗುಡಿ, ಚರ್ಚು, ಮಸೀದಿಗಳು ಹಾಗೆ ಬದುಕಲು ಬೇಕಾದ ವಿವೇಕವನ್ನು ಜೀವಂತವಾಗಿಡುವ ಕೇಂದ್ರಗಳಾಗಿದ್ದವು. ಒಬ್ಬರು ಮತ್ತೊಬ್ಬರ ಅರಿವನ್ನು ಮುಂದುವರಿಸುವ ಅಪ್ರಜ್ಞಾಪೂರ್ವಕ ಕ್ರಿಯೆ ಒಳಹರಿವಾಗಿ ಜೀವಗಳ ನಡುವಿನ ಒಲುಮೆಯನ್ನು ಸದಾ ಹಸಿರಾಗಿರುವಂತೆ ನೋಡಿಕೊಳ್ಳುತ್ತದೆ. ಚಿಕ್ಕಣ್ಣನ ಶವದೆದುರು ಜನಾಜಾ ನಮಾಜಿಗೆ ನಿಂತು ಮೂರುಹಿಡಿ ಮಣ್ಣುಕೊಟ್ಟ ತಿಪ್ಪಣ್ಣ, ಮಸೀದಿಯ ಮುಂಜಾನೆಯ ಆಜಾನಿಗೆ ಒಂದೂವರೆ ನಿಮಿಷ ಮೌನವಾಗುವ ಗುಡಿಯ ಮೈಕು ನಮ್ಮ ನೆಲದ ಸಾಂಕೇತಿಕ ಸಂಸ್ಕೃತಿ ಸಂಪತ್ತು. ❖

ಪದಬಂಧ 6427

ವಿದ್ಯಾ ವಿನಯ್



ಎಡದಿಂದ ಬಲಕ್ಕೆ
1.ಇದು ಕನ್ನಡಿಗರ ಸೆನ್ಸಸ್! (5)
4.ಕುಟಿಲನ ವಂಶ (2)
5.ಲಡಾಯಿಯಲ್ಲಿ ಸಿಕ್ಕಿರುವ ದಾರದ ಉಂಡೆ (2)
6.ವನದ ಕೊನೆಗೆ ಮಾಡಿದ ಯಜ್ಞ (3)
8.ಕ್ರಮವಾಗಿಲ್ಲದಿರುವುದು (4)
9.ಶೂರನಾದ ಸೈನಿಕ ಇಲ್ಲಿದ್ದಾನೆ (4)
10.ಸಾವಕಾಶವಾಗಿ ದೊರೆತ ಅನುಕೂಲ ಸಂದರ್ಭ (4)
11.ಪುಸ್ತಕದ ಮೇಲು ಹೊದಿಕೆ (4)
12.ಕುಶನ ಸಹೋದರ ಹಿಡಿದಿರುವ ಉಪ್ಪು (3)
14.ಖರ್ಚು ಕಳೆದು ಉಳಿದುದು (2)
16.ಇದು ದಡಿಯನ ಗಡ್ಡ! (2)
17.ಸತಿ ಯಾತ್ರಾಸ್ಥಳದಲ್ಲಿ ತಂಗಿರುವ ಮನೆ (5)

ಮೇಲಿಂದ ಕೆಳಕ್ಕೆ
1.ಜಟಿಲತೆಯಿಂದ ಶೇಖರಿಸಿರುವ ನೀರು (2)
2.ಗಡಕ್ಕನೆ ಬಂದೆರಗಿದ ಗಂಡು ಬೆಕ್ಕು (3)
3.ತಿಕ್ಕಲ ಹಿಡಿದಿರುವ ಎಳ್ಳು (2)
6.ಕೈಚಳಕವನ್ನು ಇಲ್ಲಿ ನೋಡಬಹುದು (5)
7.ಹಳೆಯದನ್ನು ಪುನಃ ಹೊಸದು ಮಾಡುವಿಕೆ (5)
13.ಗತಿಸಿದ ಮಹಾಪುರುಷರ ಹುಟ್ಟುಹಬ್ಬ (3)
15.ಭವನದಲ್ಲಿರುವ ಸಂಸಾರ (2)
16.ತೃಷೆ ಈ ರೀತಿ ಬಂದಿದೆ (2)

6426ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಎಕ್ಕಡ 2.ಆರೋಪ
4.ಚಕ್ರವಾಕ 7.ಜಕಾತಿ
8.ಬಿಂಕ 9.ವಲ್ಲಭ
10.ರಟ್ಟೆ 11.ಹಾವಸೆ
12.ತಲೆಗಾಪು 14.ಗೆದ್ದಲು
15.ಹರಣ

ಮೇಲಿಂದ ಕೆಳಕ್ಕೆ:
1. ಎಡಚ 3.ಪದಾತಿ
5.ಕ್ರಮುಕ 6.ಕತ್ತಿವರಸೆ
7.ಜಡಭರತ 10.ರಚಾಗಾ
11.ಹಾವುಗೆ 13.ಪುರಾಣ

ಸುಡೊಕು 6810

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4	6		7		3		8
	8		2		4		1	
7		1		5		4		9
	9		5				7	
1				4				3
	6				8		5	
9		5			6	2		1
				3			8	
6		8	4			9		5

6809 ಸುಡೊಕು

8	5	3	1	6	2	4	9	7
6	1	9	7	5	4	3	2	8
7	4	2	8	9	3	1	6	5
4	6	7	5	3	9	2	8	1
1	2	8	6	4	7	9	5	3
3	9	5	2	1	8	7	4	6
5	7	4	3	2	6	8	1	9
9	3	1	4	8	5	6	7	2
2	8	6	9	7	1	5	3	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

08 ಜೂನ್ 2026 ಸೋಮವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಕೃಷ್ಣ ಅಷ್ಟಮಿ ಗಂ. 27-24 ನಕ್ಷತ್ರ: ಶತಭಿಷ ಗಂ. 9-10 ಯೋಗ: ವಿಷ್ಕಂಭ ಗಂ. 9-28 ಕರಣ: ಬಾಲವ ಗಂ. 15-31, ವೃಷಭ ಮಾಸದ 25 ನೇ ದಿನ. ಮಳೆ ನಕ್ಷತ್ರ : ಮೃಗಶಿರ 1 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 - 09-00, ಸೂರ್ಯೋದಯ : 06-07 ಸೂರ್ಯಾಸ್ತ : 06-53, ಮುಸ್ಲಿಂ ದಿನಾಂಕ : 22 ದುಲ್ ಹಿಜ್ಜಾ, ಅದೃಷ್ಟ ಸಂಖ್ಯೆ : 5, 10

ಮೇಷ: ನಿವೇಶನಗಳ ಖರೀದಿಯ ಆಲೋಚನೆಗಳಿಗೆ ಪೂರಕ ವಾತಾವರಣ ಸ್ನೇಹಿತರಿಂದ ಸಿಗಲಿದೆ. ಸಂಗಾತಿಯು ಇರದಿರುವುದು ಒಂದು ರೀತಿಯ ಜಾಡ್ಯವನ್ನು ತರಬಹುದು. ಸಂಸಾರದ ಜವಾಬ್ದಾರಿ ಹೆಚ್ಚಲಿದೆ.

ವೃಷಭ: ರಿಯಲ್ ಎಸ್ಟೇಟು ಕಸುಬುದಾರರು ಬಂಡವಾಳ ತೊಡಗಿಸುವುದು ಸಮಂಜಸವಲ್ಲ. ದೈಹಿಕ ಶಕ್ತಿ ಹೆಚ್ಚುವುದರಿಂದ ಉತ್ತಮ ಅಭಿವೃದ್ಧಿಯನ್ನು ಕಾಣುವಿರಿ. ನಾನಾ ರೀತಿಯಲ್ಲಿ ಹಣ ಕೈ ಸೇರಲಿದೆ.

ಮಿಥುನ: ಗೃಹಿಣಿಯರಿಗೆ ಸಮಸ್ಯೆಯಾದರೆ ಮನೆಯ ಸಂಪೂರ್ಣ ಜವಾಬ್ದಾರಿಯನ್ನು ಪುರುಷರು ತೆಗೆದುಕೊಳ್ಳುವುದು ಉತ್ತಮ. ಅಗತ್ಯದ ಹಣ ಕೈಸೇರುವುದರಿಂದ ಮಾಡಿದ ಸಾಲವನ್ನು ತೀರಿಸಲಿದ್ದೀರಿ.

ಕರ್ಕಾಟಕ: ಉದ್ಯೋಗದಲ್ಲಿನ ಬದಲಾವಣೆ ಬಯಸಿದ ನಿಮಗೆ ನಿಮ್ಮಿಚ್ಛೆಯಂತೆ ಉತ್ತಮ ಆದಾಯ ದೊರೆಯುವ ಕೆಲಸ ಸಿಗಲಿದೆ. ಕಾರ್ಯದ ಸಮಯ, ಒತ್ತಡಗಳು ಸುಖ-ಶಾಂತಿಯನ್ನು ಕಡಿಮೆ ಮಾಡಬಹುದು.

ಸಿಂಹ: ಕುಟುಂಬದಲ್ಲಿ ಶುಭಕಾರ್ಯಗಳ ಸಂಭ್ರಮದಿಂದಾಗಿ ಹಿರಿಯರ ಮನಸ್ಸಿಗೆ ನೆಮ್ಮದಿ ಸಿಗಲಿದೆ. ಸಜ್ಜನರ ಭೇಟಿಯಿಂದ ಜ್ಞಾನಾರ್ಜನೆ ಮತ್ತು ಸಂತೋಷ ಉಂಟಾಗಲಿದೆ. ತಾಂತ್ರಿಕ ಸಲಹೆಗಾರರಿಗೆ ಮನ್ನಣೆ ಸಿಗಲಿದೆ.

ಕನ್ಯಾ: ದಾಂಪತ್ಯ ಜೀವನದಲ್ಲಿ ತಾಳ್ಮೆ, ಸಮಾಧಾನದಿಂದ ಮುಂದುವರಿಯಿರಿ. ಯಂತ್ರೋಪಕರಣಗಳ ರಿಪೇರಿ ಮತ್ತು ಮಾರಾಟದಿಂದ ಮತ್ತು ಪಶು ಸಂಗೋಪನೆಯಿಂದ ಲಾಭ ಇರುವುದು.

ತುಲಾ: ಸರ್ಕಾರಿ ಕಚೇರಿಗಳಿಗೆ ಅಲೆದಾಟವಾದರೂ ಕಾರ್ಯಗಳು ಉತ್ತಮ ರೀತಿಯಲ್ಲಿ ಸಾಗಲಿವೆ. ತೆಗೆದುಕೊಂಡ ನಿರ್ಧಾರ ಸರಿಯಾದುದೆಂದು ಮನವರಿಕೆ ಆಗುವುದು. ಜೀವನದಲ್ಲಿ ಹೊಸ ಅಧ್ಯಾಯ ಸೃಷ್ಟಿಯಾಗುತ್ತದೆ.

ವೃಶ್ಚಿಕ: ಮೀನುಗಾರರು ಉದ್ಯೋಗದಲ್ಲಿ ಅಗತ್ಯವಾಗಿ ಜಾಗರೂಕತೆ ವಹಿಸಲಿದ್ದೀರಿ. ಮಿತ್ರರ ಭೇಟಿಯಿಂದ ಅಚ್ಚರಿಯ ವಿಚಾರ ತಿಳಿಯುವುದು. ಸಿದ್ಧ ಉಡುಪಗಳ ವ್ಯಾಪಾರದಿಂದ ಹೇರಳ ಲಾಭ ಹೊಂದುವಿರಿ.

ಧನು: ರಾಜಕಾರಣದ ರಹಸ್ಯ ಬಯಲಾಗುವುದರಿಂದ ಪರಿಣಾಮ ಬೀರಲಿದೆ. ಯಂತ್ರೋಪಕರಣದ ಕ್ರಿಯೆಯ ಅತೀವ ಆಸಕ್ತಿ ಮೂಡುವುದು. ಮನೆ ಖರೀದಿ ಅಥವಾ ನಿವೇಶನ ಖರೀದಿಯ ನಿಮ್ಮ ಯೋಜನೆ ಈಡೇರುವುದು.

ಮಕರ: ಯಾರ ಸಹಾಯವೂ ಇಲ್ಲದೇ ಒಂದೊಳ್ಳೆ ಹುದ್ದೆ ಪಡೆಯುವ ಸಾಮರ್ಥ್ಯ ನಿಮ್ಮಲ್ಲಿ ಇದೆ. ಅನುಮಾನ ಪಡೆದೆ ಮುಂದುವರಿಯಿರಿ. ಜಾಹೀರಾತು ಕ್ಷೇತ್ರದಲ್ಲಿ ಇರುವವರಿಗೆ ಹೇರಳ ಅವಕಾಶಗಳು ಸಿಗಲಿವೆ.

ಕುಂಭ: ಗೃಹಿಣಿಯರಿಗೆ ವಿಶೇಷ ದಿನವಾಗಿದ್ದು ಆಕಸ್ಮಿಕ ಧನಲಾಭ ಅಥವಾ ತವರು ಮನೆಯವರಿಂದ ಉಡುಗೊರೆ ಸಿಗಲಿದೆ. ಮಾತಿನಿಂದ ಸಂಬಂಧಗಳು ಒಡೆದುಹೋಗುವ ಸಂಭವವಿದೆ.

ಮೀನ: ಪ್ರತಿ ಹೆಜ್ಜೆಯನ್ನು ನಿಮ್ಮ ಎದುರಾಳಿಯು ಗಮನಿಸುತ್ತಿರುವ ಕಾರಣ ಬಹಳಷ್ಟು ಎಚ್ಚರದಿಂದ ವ್ಯವಹರಿಸಿ. ಮಾಡುತ್ತಿರುವ ಪರೋಪಕಾರದ ಕೆಲಸಗಳಿಗೆ ಸಕಾರಾತ್ಮಕ ಪ್ರತಿಫಲ ಕಟ್ಟಿಟ್ಟ ಬುತ್ತಿ.

ಗುಂಡಣ್ಣ



ತೈಲ ಉತ್ಪಾದನೆ ಹೆಚ್ಚಿಸಲು ಒಪೆಕ್+ ನಿರ್ಧಾರ



ವಿಯೆನ್ನಾ (ಎಎಫ್‌ಪಿ): ಜುಲೈನಿಂದ ಅನ್ವಯವಾಗುವಂತೆ ಕಚ್ಚಾ ತೈಲದ ಉತ್ಪಾದನೆಯನ್ನು ಪ್ರತಿನಿತ್ಯ 1.88 ಲಕ್ಷ ಬ್ಯಾರಲ್‌ನಷ್ಟು ಹೆಚ್ಚಿಸಲು ತೈಲ ಉತ್ಪಾದಕ ದೇಶಗಳ ಒಕ್ಕೂಟ (ಒಪೆಕ್ +) ಭಾನುವಾರ ನಿರ್ಧರಿಸಿದೆ.

ಆದರೆ ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ಹೆಚ್ಚಳವಾಗಿರುವ ಕಚ್ಚಾ ತೈಲದ ಬೆಲೆಯು ಈ ತೀರ್ಮಾನದಿಂದಾಗಿ ಕಡಿಮೆ ಆಗುವ ಸಾಧ್ಯತೆ ಇಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಹೊರ್ಮುಜ್ ಜಲಸಂಧಿಯು ಮುಚ್ಚಿರುವ ಈ ಹೊತ್ತಿನಲ್ಲಿ ಈ ಪ್ರಮಾಣದ ಉತ್ಪಾದನಾ ಹೆಚ್ಚಳವು ಸಾಕಾಗುವುದಿಲ್ಲ ಎಂದು ಇಂಧನ ತಜ್ಞ ಜಾರ್ಜ್ ಲಿಯೋನ್ ಹೇಳಿದ್ದಾರೆ.

‘ಮಾರುಕಟ್ಟೆಯಲ್ಲಿ ಈ ಬಗೆಯ ಉತ್ಪಾದನಾ ಕೋಟಾ ಬಗೆಗಿನ ಘೋಷಣೆಗಳಿಗೆ ಕೊರತೆ ಇಲ್ಲ. ಆದರೆ ಈಗ ವಾಸ್ತವವಾಗಿ ಬ್ಯಾರಲ್‌ಗಳನ್ನು ಸಾಗಿಸುವ ಸಮಸ್ಯೆ ಇದೆ. ಹೀಗಾಗಿ, ದಿನವೊಂದಕ್ಕೆ 1.88 ಲಕ್ಷ ಬ್ಯಾರಲ್ ಉತ್ಪಾದನೆ ಹೆಚ್ಚಳವು ವಾಸ್ತವದಲ್ಲಿ ಪೂರೈಕೆ ಹೆಚ್ಚಿಸುವುದಕ್ಕಿಂತಲೂ ಉತ್ಪಾದನಾ ನೀತಿಯ ಬಗ್ಗೆ ಒಂದಿಷ್ಟು ಸೂಚನೆಗಳನ್ನು ನೀಡುವ ಕೆಲಸವನ್ನಷ್ಟೇ ಮಾಡುತ್ತದೆ’ ಎಂದು ಹೇಳಿದ್ದಾರೆ.

₹43 ಸಾವಿರ ಕೋಟಿ ಹಿಂಪಡೆದ ಹೂಡಿಕೆದಾರರು

ನವದೆಹಲಿ (ಪಿಟಿಐ): ವಿದೇಶಿ ಹೂಡಿಕೆದಾರರು (ಎಫ್‌ಪಿಐ) ಜೂನ್ ತಿಂಗಳ ಮೊದಲ ವಾರದಲ್ಲಿ ದೇಶದ ಷೇರುಪೇಟೆಗಳಿಂದ ಒಟ್ಟು ನಿವ್ವಳ ₹43 ಸಾವಿರ ಕೋಟಿ ಬಂಡವಾಳ ಹಿಂಪಡೆದಿದ್ದಾರೆ.

ಇದರೊಂದಿಗೆ 2026ರಲ್ಲಿ ವಿದೇಶಿ ಹೂಡಿಕೆದಾರರು ಭಾರತದಿಂದ ಹಿಂದಕ್ಕೆ ಪಡೆದ ಬಂಡವಾಳದ ಮೊತ್ತವು ₹2.67 ಲಕ್ಷ ಕೋಟಿ ಆಗಿದೆ. 2025ರ ಇಡೀ ವರ್ಷದಲ್ಲಿ ವಿದೇಶಿ ಹೂಡಿಕೆದಾರರು ಒಟ್ಟು ₹1.66 ಲಕ್ಷ ಕೋಟಿ ಹಿಂಪಡೆದಿದ್ದರು.

ಕಂಪನಿಗಳ ವರಮಾನ ಗಳಿಕೆಯ ಹೆಚ್ಚಳ ಪ್ರಮಾಣ ಚೆನ್ನಾಗಿ ಇಲ್ಲದಿರುವುದು, ರೂಪಾಯಿ ಮೌಲ್ಯ ಕುಸಿತ, ಜಾಗತಿಕ ಮಾರುಕಟ್ಟೆಗಳಲ್ಲಿ ಆಕರ್ಷಕ ಹೂಡಿಕೆ ಅವಕಾಶಗಳು ಇರುವುದು ವಿದೇಶಿ ಹೂಡಿಕೆದಾರರು ಭಾರತದಿಂದ ಬಂಡವಾಳ ಹಿಂಪಡೆಯುತ್ತಿರುವುದಕ್ಕೆ ಮುಖ್ಯ ಕಾರಣಗಳು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ತಂತ್ರಜ್ಞಾನದ ಮೇಲೆ ಹೂಡಿಕೆ ನಿರಂತರ: ಟಾಟಾ ಮೋಟರ್ಸ್



ಎನ್. ಚಂದ್ರಶೇಖರನ್

ನವದೆಹಲಿ (ಪಿಟಿಐ): ‘ವಿದ್ಯುತ್ ಮತ್ತು ಜಲಜನಕ ಚಾಲಿತ ವಾಣಿಜ್ಯ ವಾಹನ ತಂತ್ರಜ್ಞಾನದ ಮೇಲೆ ಹೂಡಿಕೆ ಮಾಡುವುದನ್ನು ಮುಂದುವರಿಸಲಾಗುವುದು’ ಎಂದು ಟಾಟಾ ಮೋಟರ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್ ತಿಳಿಸಿದ್ದಾರೆ.

ಶುದ್ಧ ಇಂಧನಕ್ಕೆ ಪರಿವರ್ತನೆಗೊಳ್ಳಲು ವಿದ್ಯುತ್, ಜಲಜನಕ ಮತ್ತು ಉತ್ತಮ ಗುಣಮಟ್ಟದ ಆಂತರಿಕ ದಹನಕಾರಿ ಎಂಜಿನ್ (ಐಸಿಇ) ತಂತ್ರಜ್ಞಾನಗಳು ಅಗತ್ಯವಿದೆ ಎಂದು ಹೇಳಿದ್ದಾರೆ.

ಡಿಜಿಟಲ್ ತಂತ್ರಜ್ಞಾನದಲ್ಲಿನ ಸುಧಾರಣೆ ಮತ್ತು ಕೃತಕ ಬುದ್ಧಿಮತ್ತೆಯ ಬೆಳವಣಿಗೆಯು ವಾಹನಗಳಲ್ಲಿನ ವಿನ್ಯಾಸವನ್ನು ಹೇಗೆ ಪರಿವರ್ತಿಸುತ್ತಿವೆ ಎಂಬುದನ್ನು 2025–26ರ ಕಂಪನಿಯ ವಾರ್ಷಿಕ ವರದಿಯಲ್ಲಿ ಷೇರುದಾರರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಶುದ್ಧ ಇಂಧನಕ್ಕೆ ಪರಿವರ್ತನೆ, ಸುರಕ್ಷತೆಯ ಮೇಲಿನ ಹೆಚ್ಚಿನ ನಿರೀಕ್ಷೆ ಮತ್ತು ಜಾಗತಿಕ ಪೂರೈಕೆ ವ್ಯವಸ್ಥೆಯ ಪುನರ್ ರಚನೆಯು ಸ್ಪರ್ಧಾತ್ಮಕತೆಯನ್ನು ಮರು ವ್ಯಾಖ್ಯಾನಿಸುತ್ತಿದೆ ಎಂದು ಹೇಳಿದ್ದಾರೆ.

2025-26ರ ಆರ್ಥಿಕ ವರ್ಷದಲ್ಲಿ, ಕಂಪನಿಯು ಅತ್ಯಧಿಕ ವರಮಾನ (₹83,855 ಕೋಟಿ) ಗಳಿಸಿದೆ. ಇದು 2024–25ರಲ್ಲಿ ₹76,359 ಕೋಟಿಯಷ್ಟಿತ್ತು ಎಂದು ತಿಳಿಸಿದ್ದಾರೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹630	100 ಕ್ಕೆ	₹640
12 ಕ್ಕೆ	₹86		

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹433-700
ದ್ವಿತಳಿ (ಬಿ.ವಿ)	₹556-888

ಎಸ್‌ಐಪಿ: 843 ಮ್ಯಾಜಿಕ್ ಗೊತ್ತಿರಲಿ

ಬಂಡವಾಳ ಮಾರುಕಟ್ಟೆ



ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

ಹಲವರಲ್ಲಿ ವ್ಯವಸ್ಥಿತ ಹೂಡಿಕೆ ಯೋಜನೆ (ಎಸ್‌ಐಪಿ) ಬಗ್ಗೆ ದೊಡ್ಡದೊಂದು ಅಪನಂಬಿಕೆ ಇದೆ. ‘ತಿಂಗಳ ಮೊದಲನೇ ದಿನವಾದರೆ ಸಾಕು ಮೊಬೈಲ್‌ನಲ್ಲಿ ಟಣ್ ಅಂತ ಮೆಸೇಜ್ ಬರುತ್ತದೆ, ದುಡ್ಡು ಕಡಿತ ಆಗುತ್ತದೆ. ಆದರೆ ಮೂರು ವರ್ಷ ಆದರೂ ನನ್ನ ಪೋರ್ಟ್‌ಫೋಲಿಯೋ ಮೊತ್ತ ಬ್ಯಾಂಕ್‌ನಲ್ಲಿನ ನಿಶ್ಚಿತ ಠೇವಣಿಗಿಂತ ಹೆಚ್ಚೇನೂ ಗಳಿಕೆ ಕಾಣುತ್ತಿಲ್ಲವಲ್ಲ’ ಎಂದು ತುಂಬಾ ಜನ ಬೇಸರ ಮಾಡಿಕೊಳ್ಳುತ್ತಾರೆ. ಇಲ್ಲಿ ನಾವು ಅರ್ಥ ಮಾಡಿಕೊಳ್ಳಬೇಕಾದ್ದು ಒಂದೇ. ಹಣ ಸಂಪಾದಿಸುವುದು ಒಂದು ಕಲೆ, ಆದರೆ ಅದನ್ನ ಬೆಳೆಸುವುದು ಒಂದು ತಪಸ್ಸು.

ಎಸ್‌ಐಪಿ ಅನ್ನುವುದು ತಕ್ಷಣಕ್ಕೆ ಫಲಿತಾಂಶ ಕೊಡುವ ‘ಇನ್‌ಸ್ಟಂಟ್ ನೂಡಲ್ಸ್’ ಅಲ್ಲ. ಅದು ತೆಂಗಿನ ಮರ ಇದ್ದ ಹಾಗೆ, ಆರಂಭದ ಕೆಲವು ವರ್ಷ ಕೇವಲ ನೀರು, ಗೊಬ್ಬರ ತಿನ್ನುತ್ತಾ ಸುಮ್ಮನೆ ನಿಂತಿರುತ್ತದೆ. ಆದರೆ, ಒಮ್ಮೆ ಫಸಲು ಕೊಡಲು ಶುರು ಮಾಡಿದರೆ ತಲೆಮಾರಿಗಾಗುವಷ್ಟು ಸಂಪತ್ತು ಕೊಡುತ್ತದೆ. ಮ್ಯೂಚುವಲ್ ಫಂಡ್ ಲೋಕದಲ್ಲಿ ಈ ತಾಳ್ಮೆಯ ರಹಸ್ಯವನ್ನು 8-4-3 ನಿಯಮ ಎನ್ನುತ್ತಾರೆ.

ಏನಿದು 8-4-3 ನಿಯಮ?: ಚಕ್ರಬಡ್ಡಿ ಅಥವಾ ‘ಕಾಂಪೌಂಡಿಂಗ್’ ಅನ್ನುವುದು ಜಗತ್ತಿನ ಎಂಟನೇ ಅದ್ಭುತ ಅಂತ ಐನ್‌ಸ್ಟೀನ್ ಹೇಳಿದ್ದು ಸುಮ್ಮನೆ ಅಲ್ಲ. ನೀವು ಹದಿನೈದು ವರ್ಷ ಎಸ್‌ಐಪಿ ಮಾಡಿದರೆ, ಆ ಇಡೀ ಪಯಣವನ್ನ ಈ ನಿಯಮ ಮೂರು ಭಾಗಗಳಾಗಿ ವಿಂಗಡಿಸುತ್ತದೆ ಮತ್ತು ನಿಮ್ಮ ದುಡ್ಡು ಯಾವಾಗ ನಿದ್ದೆಯಿಂದ ಎದ್ದು ಓಡುತ್ತದೆ ಎಂಬುದನ್ನು ಇದು ತೋರಿಸುತ್ತದೆ. ಮೊದಲನೇ ಹಂತವು ಆರಂಭದ ಎಂಟು ವರ್ಷ ಇರುತ್ತದೆ. ಇದನ್ನು ಬೇರು ಬಿಡುವ ಹಂತ ಎನ್ನಬಹುದು, ಇಲ್ಲಿ ಬೆಳವಣಿಗೆ ತುಂಬಾ ನಿಧಾನವಾಗಿದ್ದು ನಿಮ್ಮ ತಾಳ್ಮೆಗೆ ದೊಡ್ಡ ಪರೀಕ್ಷೆ ಎದುರಾಗುತ್ತದೆ.

9ನೇ ವರ್ಷದಿಂದ 12ನೇ ವರ್ಷದವರೆಗಿನ ಮುಂದಿನ ನಾಲ್ಕು ವರ್ಷಗಳು ಎರಡನೇ ಹಂತವಾಗಿದ್ದು, ಇದನ್ನು ಕಾಯಿ ಬಿಡುವ ಅವಧಿ ಎನ್ನಬಹುದು. ಇಲ್ಲಿ ನಿಮ್ಮ ಹೂಡಿಕೆಯ ಲಾಭ ಕಣ್ಣಿಗೆ ಕಾಣುವಂತೆ ವೇಗವಾಗಿ ಹೆಚ್ಚಾಗಲು ಆರಂಭಿಸುತ್ತದೆ. ಇನ್ನು 13ರಿಂದ 15ನೇ ವರ್ಷದವರೆಗಿನ ಕೊನೆಯ ಮೂರು ವರ್ಷಗಳು ಮೂರನೇ ಹಂತವಾಗಿದ್ದು, ಇದನ್ನು ಬಂಪರ್ ಗಳಿಕೆಯ ಅವಧಿ ಎನ್ನಬಹುದು. ನಿಮ್ಮ ಒಟ್ಟು ಆಸ್ತಿಯ ಸಿಂಹಪಾಲು ಸೃಷ್ಟಿಯಾಗುವುದೇ ಈ ಹಂತದಲ್ಲಿ. ಜನರು, ಮೊದಲ ಐದಾರು ವರ್ಷ ನೋಡಿ, ‘ಇದರಲ್ಲಿ ಏನೂ ದೊಡ್ಡ ಲಾಭ ಇಲ್ಲ’ ಎಂದು ಎಸ್‌ಐಪಿ ನಿಲ್ಲಿಸುತ್ತಾರೆ. ಅಂದರೆ, ಅಸಲಿ ಮ್ಯಾಜಿಕ್ ಶುರುವಾಗುವ ಮೊದಲೇ ಆಟದಿಂದ ಹೊರಟು ಹೋಗುತ್ತಾರೆ.

ಒಂದು ಉದಾಹರಣೆ: ನಿಮ್ಮ ಜೇಬಿನಿಂದ ಪ್ರತಿ ತಿಂಗಳು ₹10 ಸಾವಿರ ಎಸ್‌ಐಪಿ ಹೂಡಿಕೆ ಆಗುತ್ತಿದೆ ಅಂದುಕೊಳ್ಳಿ. ಸರಾಸರಿ ಶೇ 12ರಷ್ಟು ವಾರ್ಷಿಕ ಲಾಭ ಸಿಕ್ಕರೆ 15 ವರ್ಷಗಳ ಅಂತ್ಯಕ್ಕೆ ನಿಮ್ಮ ಒಟ್ಟು ಸಂಪತ್ತು ₹50 ಲಕ್ಷ ದಾಟುತ್ತದೆ. ಆದರೆ ಇದರ ಅಸಲಿ ಆಟ ಇರುವುದು ಬೆಳವಣಿಗೆಯ ವೇಗದಲ್ಲಿ. ಮೊದಲ ಎಂಟು ವರ್ಷಗಳಲ್ಲಿ ನೀವು ಜಮಾ ಮಾಡಿದ ಒಟ್ಟು ಹಣ ₹9.60 ಲಕ್ಷ ಆಗಿರುತ್ತದೆ ಮತ್ತು ಅದರ ಮೌಲ್ಯ ₹16.15 ಲಕ್ಷಕ್ಕೆ ತಲುಪುತ್ತದೆ. ಅಂದರೆ ನಿಮ್ಮ ಇಡೀ 15 ವರ್ಷದ ಒಟ್ಟು ಲಾಭದಲ್ಲಿ ಈ 8 ವರ್ಷಗಳ ಪಾಲು ಕೇವಲ ಶೇ 20 ಮಾತ್ರ ಇರುತ್ತದೆ. ಮುಂದಿನ 4 ವರ್ಷಗಳಲ್ಲಿ ನೀವು ಹಾಕುವ ಹೆಚ್ಚುವರಿ ಹಣ ₹4.80 ಲಕ್ಷ ಮಾತ್ರ. ಆದರೆ, ನಿಮ್ಮ ಫಂಡ್ ಮೌಲ್ಯ ಬರೋಬ್ಬರಿ ₹32.22 ಲಕ್ಷಕ್ಕೆ ಜಿಗಿಯುತ್ತದೆ. ಇನ್ನು ಕೊನೆಯ 3 ವರ್ಷಗಳಲ್ಲಿ ನೀವು ಹೂಡಿಕೆ ಮಾಡುವುದು ಕೇವಲ ₹3.60 ಲಕ್ಷ ಆದರೂ, ನಿಮ್ಮ ಅಕೌಂಟ್ ಬ್ಯಾಲೆನ್ಸ್ ₹50.45 ಲಕ್ಷ ಆಗಿ ನಿಲ್ಲುತ್ತದೆ. ಅಂದರೆ, ಇಡೀ ಪಯಣದ ಶೇ 45ಕ್ಕಿಂತಲೂ ಹೆಚ್ಚಿನ ಲಾಭ ಬರುವುದು ಈ ಕೊನೆಯ ಮೂರು ವರ್ಷಗಳಲ್ಲೇ.

ಈ ನಿಯಮದ ಸಂದೇಶವೇನು?: ಪರಿಣತರು ಹೇಳುವಂತೆ, ಹಣಕಾಸಿನ ಶಿಸ್ತು ಎಂಬುದು ಬದುಕಿನ ಶ್ರೀಮಂತಿಕೆ. ಈ ಎಂಟು, ನಾಲ್ಕು ಮತ್ತು ಮೂರರ ನಿಯಮ ನಮಗೆ ಕೆಲವು ಕಟು ಸತ್ಯಗಳನ್ನು ನೆನಪಿಸುತ್ತದೆ. ಆರಂಭದಲ್ಲಿ ಹನಿ ಹನಿ ಎಂಬಂತೆ ನಿಮ್ಮ ಅಸಲು ಚಿಕ್ಕದಾಗಿರುತ್ತದೆ. ಹಾಗಾಗಿ ಗಳಿಕೆ ಕೂಡ ಚಿಕ್ಕದಾಗಿಯೇ ಕಾಣುತ್ತದೆ. ಇದು ಲಾಟರಿ ಅಲ್ಲದ ಕಾರಣ ಮೊದಲ ದಿನಗಳಲ್ಲೇ ಕೋಟ್ಯಧಿಪತಿ ಆಗಲು ಸಾಧ್ಯವಿಲ್ಲ. ಆದರೆ ವರ್ಷಗಳು ಕಳೆದಂತೆ ನಿಮ್ಮ ಹೂಡಿಕೆಯ ಮೊತ್ತ ದೊಡ್ಡದಾಗುತ್ತಾ ಹೋಗುತ್ತದೆ ಮತ್ತು ಆ ದೊಡ್ಡ ಮೊತ್ತದ ಮೇಲೆ ಶೇ 12ರಷ್ಟು ಗಳಿಕೆ ಸಿಕ್ಕಾಗ, ಆ ಒಂದೇ ವರ್ಷದ ಗಳಿಕೆ ನಿಮ್ಮ ಇಡೀ ಹೂಡಿಕೆಗಿಂತ ದೊಡ್ಡದಾಗಿ ಬೆಳೆದು ನಿಲ್ಲುತ್ತದೆ. ಇದೇ ಕಾರಣಕ್ಕೆ ಮಾರುಕಟ್ಟೆಯ ಏರಿಳಿತಕ್ಕೆ ಹೆದರಿ ಎಸ್‌ಐಪಿ ನಿಲ್ಲಿಸಬಾರದು. ಮಾರುಕಟ್ಟೆ ಬಿದ್ದಾಗ ಎಸ್‌ಐಪಿ ನಿಲ್ಲಿಸುವುದು ಅಂದರೆ, ಬೆಳೆ ಕೈಗೆ ಬರುವಾಗ ಬೆಳೆಗೆ ಬೆಂಕಿ ಇಟ್ಟ ಹಾಗೆ. ಮಾರುಕಟ್ಟೆ ಬಿದ್ದಾಗ ನಿಮಗೆ ಹೆಚ್ಚು ಯೂನಿಟ್‌ಗಳು ಸಿಗುತ್ತವೆ, ಅದು ಮುಂದಿನ ದಿನಗಳಲ್ಲಿ ನಿಮ್ಮ ಲಾಭವನ್ನು ದುಪ್ಪಟ್ಟು ಮಾಡುತ್ತದೆ.

ಕಿವಿಮಾತು: ನೀವು ಎಸ್‌ಐಪಿ ಆರಂಭಿಸಿದ ಮೇಲೆ ಪದೇ ಪದೇ ಪೋರ್ಟ್‌ಫೋಲಿಯೋ ನೋಡಿ ಆತಂಕಕ್ಕೆ ಒಳಗಾಗಬೇಡಿ. ನಿಮ್ಮ ಕೆಲಸ ಏನಿದ್ದರೂ ಪ್ರತಿ ತಿಂಗಳು ಶಿಸ್ತಿನಿಂದ ಹೂಡಿಕೆ ಮಾಡುವುದು ಮತ್ತು ಮಾರುಕಟ್ಟೆಗೆ ಅದರದ್ದೇ ಆದ ಸಮಯವನ್ನು ಕೊಡುವುದು ಮಾತ್ರ. ಎಸ್‌ಐಪಿ ಎಂಬುದು ನೂರು ಮೀಟರ್ ಓಟದ ಸ್ಪರ್ಧೆಯಲ್ಲ, ಇದು ಸುದೀರ್ಘವಾದ ಮ್ಯಾರಥಾನ್. ಆರಂಭದ ನಿಧಾನಗತಿಯ ಬೆಳವಣಿಗೆಗೆ ಧೃತಿಗೆಡದೆ, ಈ ನಿಯಮವನ್ನು ನೆನಪಿನಲ್ಲಿಟ್ಟುಕೊಳ್ಳಿ.

15 ವರ್ಷಗಳಲ್ಲಿ ₹1 ಕೋಟಿ?

ನಿಮ್ಮ ಗುರಿ ₹1 ಕೋಟಿ ಆಗಿದ್ದರೆ, ತಿಂಗಳಿಗೆ ₹20 ಸಾವಿರ ಎಸ್‌ಐಪಿ ಮೂಲಕ ಅದನ್ನು ತಲುಪುವ ಕಥೆಯೂ ಇದೇ ರೀತಿ ಇರುತ್ತದೆ. ಮೊದಲ 11 ವರ್ಷ ನಿಮ್ಮ ಪೋರ್ಟ್‌ಫೋಲಿಯೋ ಕ್ರಮೇಣ ಬೆಳೆಯುತ್ತಾ ಸಾಗುತ್ತದೆ. ಈ ಅವಧಿಯಲ್ಲಿ ನೀವು ಒಟ್ಟು ₹26.40 ಲಕ್ಷ ಹೂಡಿಕೆ ಮಾಡುತ್ತೀರಿ. ನಿಮ್ಮ ಪೋರ್ಟ್‌ಫೋಲಿಯೋ ಮೌಲ್ಯ ₹54.90 ಲಕ್ಷ ಆಗಿರುತ್ತದೆ. ಇದು ನೋಡಲು ಒಳ್ಳೆಯ ಮೊತ್ತವೇ ಅನಿಸಿದರೂ ಕೋಟಿಯ ಕನಸಿಗೆ ಹತ್ತಿರ ಇರುವುದಿಲ್ಲ. ಆದರೆ 12ರಿಂದ 15 ವರ್ಷದ ನಡುವಿನ ಕೊನೆಯ ಮೂರೇ ವರ್ಷಗಳಲ್ಲಿ ಚಕ್ರಬಡ್ಡಿ ತನ್ನ ಅಸಲಿ ಶಕ್ತಿ ತೋರಿಸುತ್ತದೆ. ಕೇವಲ ಮೂರು ವರ್ಷಗಳಲ್ಲಿ ನಿಮ್ಮ ಪೋರ್ಟ್‌ಫೋಲಿಯೋ ₹64 ಲಕ್ಷದಿಂದ ನೇರವಾಗಿ ₹1 ಕೋಟಿ ದಾಟುತ್ತದೆ. ಅಂದರೆ ಕೇವಲ ಮೂರು ವರ್ಷಗಳಲ್ಲಿ ₹36 ಲಕ್ಷಕ್ಕೂ ಅಧಿಕ ಲಾಭ ನಿಮ್ಮ ಖಾತೆಗೆ ಸೇರುತ್ತದೆ. ನಿಮ್ಮ ಇಡೀ ಹೂಡಿಕೆಯ ಪ್ರಯಾಣದ ಅರ್ಧದಷ್ಟು ಸಂಪತ್ತು ಸೃಷ್ಟಿಯಾಗುವುದು ಕೊನೆಯ ಶೇ 20ರಷ್ಟು ಅವಧಿಯಲ್ಲಿ ಎನ್ನುವುದೇ ಈ ಗಣಿತದ ರಹಸ್ಯ.

‘ಗಡಿ ವಿವಾದ: ರಾಜತಾಂತ್ರಿಕ ಚರ್ಚೆ ಮೂಲಕ ಪರಿಹಾರ’

ನವದೆಹಲಿ (ಪಿಟಿಐ): ‘ಭಾರತದೊಂದಿಗಿನ ಗಡಿ ವಿವಾದವನ್ನು ರಾಜತಾಂತ್ರಿಕ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಲು ನೇಪಾಳ ಬಯಸುತ್ತದೆ. ಉಭಯ ರಾಷ್ಟ್ರಗಳು ಮುಕ್ತ ಮನಸ್ಸಿನಿಂದ ಮಾತುಕತೆಗೆ ಕುಳಿತುಕೊಂಡರೆ ಯಾವುದೇ ಸಮಸ್ಯೆ ದೊಡ್ಡದಲ್ಲ’ ಎಂದು ನೇಪಾಳದ ವಿದೇಶಾಂಗ ಸಚಿವ ಶಿಶಿರ್ ಖನಾಲ್ ಭಾನುವಾರ ತಿಳಿಸಿದ್ದಾರೆ.

‘21ನೇ ಶತಮಾನದ ಭೌಗೋಳಿಕ ರಾಜಕೀಯವನ್ನು ತಿರುಚಿ, ಅತಿ ಸೂಕ್ಷ್ಮ ದೃಷ್ಟಿಕೋನದಿಂದ ಭಾರತವನ್ನು ನೋಡುವುದನ್ನು ನೇಪಾಳ ಬಯಸುವುದಿಲ್ಲ. ಬದಲಾಗಿ ಉಭಯ ರಾಷ್ಟ್ರಗಳ ಅಭಿವೃದ್ಧಿಗೆ ಒತ್ತು ನೀಡಿ ಉತ್ತಮ ಸಂಬಂಧ ಬೆಸೆಯಲು ಇಚ್ಛಿಸುತ್ತದೆ’ ಎಂದು ಮಾಧ್ಯಮ ಸಂವಾದದಲ್ಲಿ ಹೇಳಿದ್ದಾರೆ.

ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವ ಉದ್ದೇಶದಿಂದ ಖನಾಲ್ ಅವರು ನವದೆಹಲಿಗೆ ಶುಕ್ರವಾರದಿಂದ ಮೂರು ದಿನಗಳ ಪ್ರವಾಸ ಕೈಗೊಂಡಿದ್ದರು. ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರೊಂದಿಗೆ ಮಾತುಕತೆ ನಡೆಸಿದ್ದರು.

ಮನೆಬಳಕೆಯ ಒಂದು ಎಲ್‌ಪಿಜಿ ಸಿಲಿಂಡರ್ ಪೂರೈಕೆ ವೆಚ್ಚವು ಈಗ ₹1,600ಕ್ಕಿಂತ ಜಾಸ್ತಿ

ಎಲ್‌ಪಿಜಿ ಬೆಲೆ ಭಾರತದಲ್ಲೇ ಕಡಿಮೆ: ಕೇಂದ್ರ



ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಎಲ್‌ಪಿಜಿ ಬೆಲೆಯು ತೀವ್ರವಾಗಿ ಹೆಚ್ಚಳ ಆಗಿದ್ದರೂ ಭಾರತದಲ್ಲಿ ಮನೆಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯು ಬಹಳ ಕಡಿಮೆ ಮಟ್ಟದಲ್ಲಿದೆ ಎಂದು ಕೇಂದ್ರ ಸರ್ಕಾರ ಭಾನುವಾರ ಹೇಳಿದೆ. ಮನೆಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ₹29ರಷ್ಟು ಹೆಚ್ಚಿಸಿದ ನಂತರ ಕೇಂದ್ರ ಈ ಹೇಳಿಕೆ ನೀಡಿದೆ.

ಮನೆಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಮಾರ್ಚ್ 7ರಂದು ₹60ರಷ್ಟು ಜಾಸ್ತಿ ಮಾಡಲಾಗಿತ್ತು. ಶನಿವಾರ ಮಾಡಿರುವ ಹೆಚ್ಚಳವನ್ನೂ ಪರಿಗಣಿಸಿದರೆ ಪ್ರತಿ ಸಿಲಿಂಡರ್ ಬೆಲೆ ₹89ರಷ್ಟು ಜಾಸ್ತಿ ಆದಂತಾಗಿದೆ. ಶನಿವಾರದ ಬೆಲೆ ಏರಿಕೆಗೂ ಮೊದಲು, ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳಿಗೆ ಮನೆಬಳಕೆಯ ಪ್ರತಿ ಸಿಲಿಂಡರ್‌ಗೆ ₹703ರಷ್ಟು ನಷ್ಟವಾಗುತ್ತಿತ್ತು ಎಂದು ಅಂದಾಜಿಸಲಾಗಿದೆ.

ಮನೆಬಳಕೆಯ ಒಂದು ಎಲ್‌ಪಿಜಿ ಸಿಲಿಂಡರ್ ಪೂರೈಕೆ ವೆಚ್ಚವು ಈಗ ₹1,600ಕ್ಕಿಂತ ಜಾಸ್ತಿ ಆಗಿದೆ ಎಂದು ಕೇಂದ್ರ ತಿಳಿಸಿದೆ. ಭಾರತವು ಆಮದು ಮಾಡಿಕೊಳ್ಳುವ ಎಲ್‌ಪಿಜಿ ಬೆಲೆಯು ಸೌದಿ ಗುತ್ತಿಗೆ ಬೆಲೆಯನ್ನು ಆಧರಿಸಿದೆ. ಹೊರ್ಮುಜ್ ಜಲಸಂಧಿಯ ಮಾರ್ಗದಲ್ಲಿ ಅಡ್ಡಿಗಳು ಸೃಷ್ಟಿಯಾದ ನಂತರದಲ್ಲಿ ಆ ಬೆಲೆಯು ಶೇ 46ರಷ್ಟು ಜಾಸ್ತಿ ಆಗಿದೆ ಎಂದು ಕೇಂದ್ರದ ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ.

ಈಗಿನ ಏರಿಕೆಯ ನಂತರವೂ ಭಾರತದಲ್ಲಿನ ಬೆಲೆಯು ನೆರೆಯ ಪಾಕಿಸ್ತಾನ, ನೇಪಾಳ, ಬಾಂಗ್ಲಾದೇಶ ಮತ್ತು ಶ್ರೀಲಂಕಾದಲ್ಲಿರುವ ಬೆಲೆಗಿಂತ ಕಡಿಮೆ ಇದೆ. ಅಲ್ಲದೆ, ಅಮೆರಿಕ, ಆಸ್ಟ್ರೇಲಿಯಾ ಮತ್ತು ಕೆನಡಾದಂತಹ ಮುಂದುವರಿದ ದೇಶಗಳಲ್ಲಿನ ಬೆಲೆಗಿಂತ ಬಹಳ ಕಡಿಮೆ ಇದೆ ಎಂದು ಸರ್ಕಾರ ಹೇಳಿದೆ.

‘ದೇಶದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇರುವ ಬೆಲೆಯನ್ನು ಆಧರಿಸಿದೆ. ಆದರೆ ಸರ್ಕಾರವು ಮನೆಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ನಿಯಂತ್ರಿಸುವ ಕೆಲಸ ಮಾಡುವುದನ್ನು ಮುಂದುವರಿಸಿದೆ. ಗ್ರಾಹಕರು ₹942 ಪಾವತಿಸಿ (ಬೆಂಗಳೂರಿನಲ್ಲಿ ₹944.5) ತಮಗೆ ಅಗತ್ಯವಿರುವಷ್ಟು ಸಿಲಿಂಡರ್‌ಗಳನ್ನು ಖರೀದಿಸಬಹುದು’ ಎಂದು ಹೇಳಿದೆ.

‘ಪ್ರಧಾನ ಮಂತ್ರಿ ಉಜ್ವಲಾ ಯೋಜನೆಯ ಫಲಾನುಭವಿಗಳಿಗೆ ವರ್ಷವೊಂದಕ್ಕೆ ಮೊದಲ ನಾಲ್ಕು ಸಿಲಿಂಡರ್‌ಗಳಿಗೆ ₹300ರಷ್ಟು ಸಬ್ಸಿಡಿ ನೇರ ನಗದು ವರ್ಗಾವಣೆ ಮೂಲಕ ಸಿಗುತ್ತದೆ. ಉಜ್ವಲಾ ಯೋಜನೆಯ ಫಲಾನುಭವಿ ಕುಟುಂಬಗಳು ವರ್ಷಕ್ಕೆ ಸರಾಸರಿ ನಾಲ್ಕು ಸಿಲಿಂಡರ್ ಬಳಸುತ್ತವೆ. ಹೀಗಾಗಿ ಈ ಕುಟುಂಬಗಳು ಪ್ರತಿ ಸಿಲಿಂಡರ್‌ಗೆ ₹642ರಷ್ಟು ಪಾವತಿಸಿದಂತಾಗುತ್ತದೆ’ ಎಂದು ಪ್ರಕಟಣೆಯಲ್ಲಿ ವಿವರಿಸಲಾಗಿದೆ.

ಉಜ್ವಲಾ ಯೋಜನೆಯ ಫಲಾನುಭವಿ ಅಲ್ಲದ ಕುಟುಂಬಗಳು ಕೂಡ ಎಲ್‌ಪಿಜಿ ಸಿಲಿಂಡರ್‌ಗೆ ಮಾರುಕಟ್ಟೆ ಬೆಲೆಗಿಂತ ₹700ರಷ್ಟು ಕಡಿಮೆ ಪಾವತಿಸುತ್ತವೆ ಎಂದು ಹೇಳಿದೆ.

ವಾಣಿಜ್ಯ, ಮನೆಬಳಕೆ ಎಲ್‌ಪಿಜಿ ಬೆಲೆ ವ್ಯತ್ಯಾಸ

₹164 ಪ್ರತಿ ಕೆ.ಜಿ. ವಾಣಿಜ್ಯ ಎಲ್‌ಪಿಜಿ ಬೆಲೆ

₹66 ಪ್ರತಿ ಕೆ.ಜಿ. ಮನೆಬಳಕೆ ಎಲ್‌ಪಿಜಿ ಬೆಲೆ

ಬಿಜೆಪಿಗರು ಏಕೆ ಪ್ರತಿಭಟಿಸುತ್ತಿಲ್ಲ?: ಕಾಂಗ್ರೆಸ್



ಮಲ್ಲಿಕಾರ್ಜುನ ಖರ್ಗೆ

ನವದೆಹಲಿ (ಪಿಟಿಐ): ಗೃಹ ಬಳಕೆ ಸಿಲಿಂಡರ್ ದರ ಏರಿಕೆ ಖಂಡಿಸಿ ಮೋದಿ ನೇತೃತ್ವದ ಸರ್ಕಾರದ ವಿರುದ್ಧ ಕಾಂಗ್ರೆಸ್ ಭಾನುವಾರ ತೀವ್ರ ವಾಗ್ದಾಳಿ ನಡೆಸಿದೆ. ಯುಪಿಎ ಅವಧಿಯಲ್ಲಿ ಹಣದುಬ್ಬರದ ಬಗ್ಗೆ ಊಳಿಡುತ್ತಿದ್ದ ಬಿಜೆಪಿಯವರು ಈಗ ಏಕೆ ಸಿಲಿಂಡರ್‌ಗಳನ್ನು ಹಿಡಿದು ಬೀದಿಗಿಳಿದು ಪ್ರತಿಭಟಿಸುತ್ತಿಲ್ಲ ಎಂದೂ ಟೀಕಿಸಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಇದಕ್ಕೆ ಸಂಬಂಧಿಸಿದಂತೆ ‘ಎಕ್ಸ್’ ನಲ್ಲಿ ಪೋಸ್ಟ್ ಮಾಡಿದ್ದು, ‘ಗೃಹಬಳಕೆ ಎಲ್‌ಪಿಜಿ ಸಿಲಿಂಡರ್ ದರ ಏರಿಕೆಯು ಸಾಮಾನ್ಯ ಜನರನ್ನು ಆತಂಕಕ್ಕೆ ದೂಡುತ್ತಿದೆ. ಮೋದಿ ಸರ್ಕಾರವು ಕಳೆದ ನಾಲ್ಕು ತಿಂಗಳಲ್ಲಿ ಸಿಲಿಂಡರ್ ಬೆಲೆಯನ್ನು ₹89ರಷ್ಟು ಹೆಚ್ಚಿಸಿದೆ’ ಎಂದು ದೂರಿದ್ದಾರೆ.

‘ಪಶ್ಚಿಮ ಏಷ್ಯಾ ಸಂಘರ್ಷ ತೀವ್ರಗೊಂಡಿರುವ ಕಾರಣ 41 ದೇಶಗಳ ಮೂಲಕ ಇಂಧನ ಮೂಲವನ್ನು ಕಂಡು ಕೊಳ್ಳಲಾಗಿದೆ ಎಂದು ಸಂಸತ್ತಿನಲ್ಲಿ ಮೋದಿ ಹೇಳಿದ್ದಾರೆ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಎಲ್‌ಪಿಜಿ ಕೊರತೆ ಏಕೆ ಮುಂದುವರಿದಿದೆ’ ಎಂದು ಪ್ರಶ್ನಿಸಿದ್ದಾರೆ.

‘2025–26ರ ಅವಧಿಯಲ್ಲಿ ಉಜ್ವಲ ಯೋಜನೆ ಅಡಿಯಲ್ಲಿ 5.56 ಕೋಟಿ ಕುಟುಂಬಗಳಿಗೆ ಒಂದು ಬಾರಿಯೂ ಸಿಲಿಂಡರ್ ರೀ ಫಿಲ್ಲಿಂಗ್ (ಮರುಪೂರಣ) ಸಿಕ್ಕಿಲ್ಲ. ಈ ಪೈಕಿ 3.30 ಕೋಟಿ ಕುಟುಂಬಗಳು ರೀ ಫಿಲ್ಲಿಂಗ್ ಆಯ್ಕೆಯನ್ನೂ ಮಾಡಿಲ್ಲ. ಪಶ್ಚಿಮ ಏಷ್ಯಾ ಬಿಕ್ಕಟ್ಟಿಗಿಂತ ಹಿಂದೆಯೇ ಈ ಪರಿಸ್ಥಿತಿ ಇತ್ತು. ಇದು ಮೋದಿ ಸರ್ಕಾರದ ಲಾಭಕೋರತನದ ಪರಿಣಾಮ ಅಲ್ಲವೇ?’ ಎಂದೂ ಖರ್ಗೆ ಕೇಳಿದ್ದಾರೆ. ‘ಕಳೆದ 12 ವರ್ಷದಲ್ಲಿ ಮೋದಿ ಸರ್ಕಾರವು ಗೃಹಬಳಕೆ ಎಲ್‌ಪಿಜಿ ಸಿಲಿಂಡರ್ ದರವನ್ನು ₹530 ರಷ್ಟು ಹೆಚ್ಚಿಸಿದರೂ ಬಿಜೆಪಿಯವರು ಏಕೆ ಮಾತನಾಡುತ್ತಿಲ್ಲ, ಪ್ರತಿಭಟಿಸುತ್ತಿಲ್ಲ’ ಎಂದೂ ಅವರು ಪ್ರಶ್ನಿಸಿದ್ದಾರೆ.

ಯುರೇನಿಯಂ ನಾಶ: ಟ್ರಂಪ್ ವಿಶ್ವಾಸ

ವಾಷಿಂಗ್ಟನ್ / ಟೆಹರಾನ್ (ಪಿಟಿಐ/ ಎಎಫ್‌ಪಿ): ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ ಇರಾನ್ ಜತೆಗೆ ಅಂತಿಮ ಒಪ್ಪಂದ ಮಾಡಿಕೊಳ್ಳಲು ಸಾಧ್ಯವಾದರೆ, ಸಮೃದ್ಧೀಕರಿಸಿದ ಯುರೇನಿಯಂ ಅನ್ನು ಇರಾನ್‌ನಿಂದ ಹೊರತೆಗೆದು, ನಾಶಪಡಿಸುವ ನಿಟ್ಟಿನಲ್ಲಿ ಅಮೆರಿಕ ಕೆಲಸ ಮಾಡಲಿದೆ’ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

‘ಅಮೆರಿಕದ ಪಡೆಯು, ಸಮೃದ್ಧೀಕರಿಸಿದ ಯುರೇನಿಯಂ ಅನ್ನು ಇರಾನ್‌ನಿಂದ ಹೆಚ್ಚು ಸುರಕ್ಷಿತವಾಗಿ ಹೊರತೆಗೆದು ನಾಶಪಡಿಸುತ್ತದೆ. ಒಮ್ಮೆ ಅಮೆರಿಕ–ಇರಾನ್ ಒಪ್ಪಂದ ಅಂತಿಮಗೊಂಡರೆ, ನಾವು ಸ್ನೇಹಿತರಾಗುತ್ತೇವೆ. ಆಗ ಜಂಟಿಯಾಗಿ ಈ ಪ್ರಯತ್ನ ನಡೆಸುತ್ತೇವೆ’ ಎಂದು ಟ್ರಂಪ್ ‘ಎನ್‌ಬಿಸಿ ನ್ಯೂಸ್’ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

‘ಇರಾನ್ ಜತೆಗೆ ಶೀಘ್ರವೇ ಅಂತಿಮ ಒಪ್ಪಂದ ಏರ್ಪಡಲಿದೆ. ಒಪ್ಪಂದಕ್ಕೆ ಸನಿಹದಲ್ಲೇ ಇದ್ದೇವೆ. ಒಮ್ಮೆ ಒಪ್ಪಂದಕ್ಕೆ ಸಹಿ ಹಾಕಿದರೆ ಇರಾನ್ ಮೇಲಿನ ಎಲ್ಲ ನಿರ್ಬಂಧಗಳನ್ನು ತೆಗೆದುಹಾಕಲಾಗುವುದು’ ಎಂದು ಟ್ರಂಪ್ ಹೇಳಿದ್ದಾರೆ.

ಬಹರೇನ್, ಕುವೈತ್ ಮೇಲೆ ಇರಾನ್ ದಾಳಿ: ಅಮೆರಿಕದ ಮಿತ್ರರಾಷ್ಟ್ರಗಳಾದ ಬಹರೇನ್ ಮತ್ತು ಕುವೈತ್ ಮೇಲೆ ಇರಾನ್ ಶನಿವಾರ ಕ್ಷಿಪಣಿ ದಾಳಿ ನಡೆಸಿದೆ. ಇದಕ್ಕೆ ಕೊಲ್ಲಿ ರಾಷ್ಟ್ರಗಳು ಪ್ರತಿರೋಧ ಒಡ್ಡಿವೆ. ‘ಹೊರ್ಮುಜ್ ಜಲಸಂಧಿಯನ್ನು ಗುರಿಯಾಗಿರಿಸಿ ಶುಕ್ರವಾರ ರಾತ್ರಿ ಇರಾನ್ ಹಾರಿಸಿದ ನಾಲ್ಕು ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ. ಈ ದಾಳಿಗೆ ಪ್ರತಿಯಾಗಿ ಇರಾನ್‌ನ ಕರಾವಳಿ ಕಣ್ಗಾವಲು ರಾಡಾರ್ ತಾಣಗಳ ಮೇಲೆ ದಾಳಿ ಮಾಡಲಾಗಿದೆ’ ಅಮೆರಿಕ ಸೇನೆ ಹೇಳಿತ್ತು.

ಬೈರೂತ್ ಮೇಲೆ ಇಸ್ರೇಲ್ ದಾಳಿ



ದಕ್ಷಿಣ ಬೈರೂತ್‌ನ ನಗರವೊಂದರ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಿಂದ ಅಪಾರ್ಟ್‌ಮೆಂಟ್ ಕಟ್ಟಡಕ್ಕೆ ಹಾನಿಯಾಗಿದೆ —ಎಎಫ್‌ಪಿ ಚಿತ್ರ

ಬೈರೂತ್ (ಎಪಿ): ದಕ್ಷಿಣ ಬೈರೂತ್‌ನ ಉಪನಗರಗಳ ಮೇಲೆ ಇಸ್ರೇಲ್ ಭಾನುವಾರ ವೈಮಾನಿಕ ದಾಳಿ ನಡೆಸಿದೆ.

‘ಹಿಜ್ಬುಲ್ಲಾ ಬಂಡುಕೋರರ ಗುಂಪು ಉತ್ತರ ಇಸ್ರೇಲ್ ಕಡೆಗೆ ಈ ಹಿಂದೆ ಗುಂಡಿನ ದಾಳಿ ನಡೆಸಿದ್ದಕ್ಕೆ ಪ್ರತೀಕಾರವಾಗಿ ಈ ದಾಳಿಗಳನ್ನು ನಡೆಸಲಾಗಿದೆ’ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ತಿಳಿಸಿದ್ದಾರೆ. ಹಿಜ್ಬುಲ್ಲಾ ಆ ದಾಳಿಗಳ ಹೊಣೆಯನ್ನು ತಕ್ಷಣಕ್ಕೆ ವಹಿಸಿಕೊಂಡಿಲ್ಲ.

ಲೆಬನಾನ್ ಮತ್ತು ಇಸ್ರೇಲ್ ನಡುವಿನ ಮೊದಲ ಕದನ ವಿರಾಮದ ಒಪ್ಪಂದವು ಏಪ್ರಿಲ್ 17ರಂದು ಜಾರಿಗೆ ಬಂದಿತ್ತು. ಆ ಬಳಿಕವೂ ಲೆಬನಾನ್‌ನ ನಗರ ಪ್ರದೇಶಗಳ ಮೇಲೆ ಇಸ್ರೇಲ್ ಎರಡು ಬಾರಿ ದಾಳಿ ಮಾಡಿತ್ತು. ದಕ್ಷಿಣ ಲೆಬನಾನ್ ನಾದ್ಯಂತ ಪ್ರತಿದಿನವೂ ವೈಮಾನಿಕ ದಾಳಿಗಳನ್ನು ಮುಂದುವರಿಸಿದೆ. ಅಲ್ಲಿ ಹಿಜ್ಬುಲ್ಲಾ ಬಂಡುಕೋರರು ಮತ್ತು ಇಸ್ರೇಲ್ ಯೋಧರ ನಡುವೆ ಘರ್ಷಣೆಗಳೂ ನಡೆದಿವೆ.

‘ಈ ಪ್ರದೇಶದಲ್ಲಿ ಮೂರು ಬಾರಿ ಸ್ಫೋಟಗಳು ಸಂಭವಿಸಿವೆ’ ಎಂದು ಸ್ಥಳೀಯರು ತಿಳಿಸಿದ್ದಾರೆ. ಆದರೆ, ಯಾವುದನ್ನು ಗುರಿಯಾಗಿಸಿ ಈ ದಾಳಿ ನಡೆಸಲಾಗಿದೆ ಎಂಬುದು ಸ್ಪಷ್ಟವಾಗಿಲ್ಲ. ಸಾವು–ನೋವುಗಳ ಬಗ್ಗೆ ತಕ್ಷಣಕ್ಕೆ ವರದಿಯಾಗಿಲ್ಲ.

ಅಮೆರಿಕ–ಇರಾನ್ ನಡುವಿನ ಮಾತುಕತೆ ಪುನರಾರಂಭಕ್ಕೆ ಪಾಕ್ ಪ್ರಯತ್ನ

ಶಾಂತಿ ಒಪ್ಪಂದ: ನಖ್ವಿ– ಅರಾಘ್ಚಿ ಚರ್ಚೆ

ಇಸ್ಲಾಮಾಬಾದ್ (ಪಿಟಿಐ): ಅಮೆರಿಕ–ಇರಾನ್ ನಡುವಿನ ಶಾಂತಿ ಒಪ್ಪಂದದ ಸ್ಥಿತಿಗತಿ ಕುರಿತು ಚರ್ಚಿಸುವ ಸಂಬಂಧ ಪಾಕಿಸ್ತಾನದ ಗೃಹ ಸಚಿವ ಮೊಹ್ಸಿನ್ ನಖ್ವಿ ಅವರು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರೊಂದಿಗೆ ಭಾನುವಾರ ಸಭೆ ನಡೆಸಿದ್ದಾರೆ. ಈ ವೇಳೆ, ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಅವರ ಲಿಖಿತ ಸಂದೇಶವನ್ನು ನೀಡಿದ್ದಾರೆ.

ಈ ಸಂದೇಶವನ್ನು ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಮೊಜ್ತಬಾ ಖಮೇನಿ ಅವರಿಗೆ ಕಳುಹಿಸಲಾಗಿತ್ತು ಎಂದು ಇರಾನ್ ಸರ್ಕಾರವು ‘ಎಕ್ಸ್’ ಪೋಸ್ಟ್‌ನಲ್ಲಿ ತಿಳಿಸಿದೆ.

ಇರಾನ್ ಅಧಿಕಾರಿಗಳು ಬಿಡುಗಡೆ ಮಾಡಿದ ಚಿತ್ರಗಳಲ್ಲಿ ನಖ್ವಿ ಅವರು ಅರಾಘ್ಚಿ ಅವರಿಗೆ ಲಕೋಟೆಯನ್ನು ಹಸ್ತಾಂತರಿಸುತ್ತಿರುವ ದೃಶ್ಯವಿದೆ. ಆದರೆ, ಆ ಸಂದೇಶದಲ್ಲಿರುವ ವಿಷಯವನ್ನು ಬಹಿರಂಗಪಡಿಸಿಲ್ಲ.

‘ಪಶ್ಚಿಮ ಏಷ್ಯಾ ಸಂಘರ್ಷವನ್ನು ಕೊನೆಗೊಳಿಸಲು ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ನಡೆಯುತ್ತಿರುವ ರಾಜತಾಂತ್ರಿಕ ಮಾತುಕತೆಯ ಇತ್ತೀಚಿನ ಸ್ಥಿತಿಗತಿ ಬಗ್ಗೆ ಉಭಯ ನಾಯಕರು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ. ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಬಲಪಡಿಸುವ ಮಾರ್ಗಗಳ ಬಗ್ಗೆ ಚರ್ಚಿಸಿದ್ದಾರೆ’ ಎಂದು ಇರಾನ್ ಸರ್ಕಾರ ತಿಳಿಸಿದೆ.

ಶನಿವಾರ ರಾತ್ರಿ ಟೆಹರಾನ್‌ಗೆ ಬಂದಿಳಿದ ನಖ್ವಿ ಅವರನ್ನು ಗೃಹ ಸಚಿವ ಇಸ್ಕಂದರ್ ಮೊಮೆನಿ ಬರಮಾಡಿಕೊಂಡಿದ್ದಾರೆ.

ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್, ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್ ಮತ್ತು ರಾಷ್ಟ್ರೀಯ ಉನ್ನತ ಭದ್ರತಾ ಮಂಡಳಿಯ ಕಾರ್ಯದರ್ಶಿ ಬಾಘೇರ್ ಜೊಲ್ಘಾದ್ರ್ ಅವರನ್ನು ಭೇಟಿ ಮಾಡುವ ನಿರೀಕ್ಷೆ ಇದೆ.

ಆದರೆ, ಶೆಹಬಾಜ್ ಷರೀಫ್ ಅವರು ನೀಡಿದ ಸಂದೇಶ ಹಾಗೂ ಟೆಹರಾನ್‌ನಲ್ಲಿ ನಡೆದ ಸಭೆ ಬಗ್ಗೆ ಪಾಕಿಸ್ತಾನವು ಇದುವರೆಗೆ ಏನನ್ನೂ ಹೇಳಿಲ್ಲ.

‘ಇಂಡಿಯಾ’ ಸಭೆಯಲ್ಲಿ 23 ಪಕ್ಷಗಳು ಭಾಗಿ

ಮುಂದಿನ ಲೋಕಸಭಾ ಚುನಾವಣೆ ಮೇಲೆ ಕಣ್ಣು • ಕೇಂದ್ರದ ವಿರುದ್ಧ ಕಾರ್ಯತಂತ್ರಕ್ಕೆ ಸಿದ್ಧತೆ

ನವದೆಹಲಿ (ಪಿಟಿಐ): ಸೋಮವಾರ ನಡೆಯಲಿರುವ ‘ಇಂಡಿಯಾ ಜನಬಂಧನ್’ ಸಭೆಯಲ್ಲಿ ಭಾಗಿಯಾಗುವುದಾಗಿ 23 ರಾಜಕೀಯ ಪಕ್ಷಗಳು ಖಚಿತಪಡಿಸಿವೆ ಎಂದು ಕಾಂಗ್ರೆಸ್ ತಿಳಿಸಿದೆ.



ಜೈರಾಮ್ ರಮೇಶ್

ರಾಷ್ಟ್ರ ರಾಜಧಾನಿಯ ಕಾನ್‌ಸ್ಟಿಟ್ಯೂಷನ್ ಕ್ಲಬ್‌ನಲ್ಲಿ ನಡೆಯುವ ಸಭೆಯಲ್ಲಿ ಭಾಗಿಯಾಗುವ ಮೂಲಕ ವಿರೋಧ ಪಕ್ಷಗಳ ಒಕ್ಕೂಟವು ಒಗ್ಗಟ್ಟು ಪ್ರದರ್ಶಿಸಲಿದೆ ಎಂದು ಕಾಂಗ್ರೆಸ್ ಒತ್ತಿ ಹೇಳಿದೆ.

ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಅವರು, ‘ವೈಯಕ್ತಿಕ ಕಾರಣಗಳಿಂದ ಈ ಸಭೆಯಲ್ಲಿ ಭಾಗಿಯಾಗಲು ಸಾಧ್ಯವಾಗುತ್ತಿಲ್ಲ ಎಂದು ಕೆಲವು ಪಕ್ಷಗಳು ತಿಳಿಸಿವೆ. ಆದಾಗ್ಯೂ, ಅವುಗಳು, ಲಕ್ಷಾಂತರ ಭಾರತೀಯರ ಮತದಾನದ ಹಕ್ಕನ್ನು ಕಸಿಯುತ್ತಿರುವ, ಸಂವಿಧಾನದ ಮೇಲೆ ದಾಳಿ ಎಸಗುತ್ತಿರುವ, ತನಿಖಾ ಸಂಸ್ಥೆಗಳ ಮೂಲಕ ವಿರೋಧ ಪಕ್ಷಗಳ ನಾಯಕರ ಮೇಲೆ ಆಕ್ರಮಣ ಮಾಡುತ್ತಿರುವ ಮೋದಿ ಸರ್ಕಾರದ ನೀತಿಗಳು ಮತ್ತು ಕ್ರಮಗಳ ವಿರುದ್ಧ ತೀವ್ರ ಆಕ್ಷೇಪವನ್ನು ವ್ಯಕ್ತಪಡಿಸಿವೆ’ ಎಂದು ‘ಎಕ್ಸ್’ನಲ್ಲಿ ಹೇಳಿದ್ದಾರೆ.

‘ನಿರಂತರ ಬೆಲೆ ಏರಿಕೆ ಮೂಲಕ ಕೇಂದ್ರ ಸರ್ಕಾರವು ಜನಸಾಮಾನ್ಯರ ಬದುಕನ್ನು ದುಸ್ತರ ಮಾಡುತ್ತಿದೆ. ಲಕ್ಷಾಂತರ ಯುವ ಜನರ ಆಕಾಂಕ್ಷೆಗಳಿಗೆ ದ್ರೋಹ ಬಗೆಯುತ್ತಿದೆ. ಬಂಡವಾಳ ಹೂಡಿಕೆ ವ್ಯವಸ್ಥೆಯನ್ನೇ ಹಾಳುಗೆಡವುತ್ತಿದೆ ಮತ್ತು ವಿದೇಶಿ ನೀತಿಗಳ ಮೂಲಕ ರಾಷ್ಟ್ರೀಯ ಹಿತಾಸಕ್ತಿಯೊಂದಿಗೆ ರಾಜಿ ಆಗುತ್ತಿದೆ ಎಂದು ಅವುಗಳು ಆರೋಪಿಸಿವೆ’ ಎಂದು ಹೇಳಿದ್ದಾರೆ.

‘ಭಾರತದಂತೆಯೇ ‘ಇಂಡಿಯಾ ಜನಬಂಧನ್’ ಸಹ ತನ್ನ ವೈವಿಧ್ಯತೆಯ ನಡುವೆಯೂ ಒಗ್ಗಟ್ಟು ಪ್ರದರ್ಶಿಸುತ್ತಿದೆ’ ಎಂದು ಪ್ರತಿಪಾದಿಸಿದ್ದಾರೆ.

ಟಿಎಂಸಿ ನಾಯಕಿ, ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಪಕ್ಷದ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ, ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ, ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಸೇರಿ ಹಲವು ನಾಯಕರು ಸಭೆಯಲ್ಲಿ ಭಾಗವಹಿಸುವರು ಎಂದು ಮೂಲಗಳು ತಿಳಿಸಿವೆ.

> **ಈ ಸಭೆಯು ಸಾಮಾನ್ಯ ಉದ್ದೇಶ ಮತ್ತು ಸ್ಪಷ್ಟ ಸಂಕಲ್ಪವನ್ನು ಹೊಂದಿದೆ. ಹಲವು ಪಕ್ಷಗಳು ಬಲವಾದ ನಂಬಿಕೆ, ವಿಶ್ವಾಸದಿಂದ ಸಭೆಯನ್ನು ಎದುರು ನೋಡುತ್ತಿವೆ**
> **ಡೆರೆಕ್ ಒಬ್ರಯಾನ್,** ಟಿಎಂಸಿ ಸಂಸದ

> **40 ವರ್ಷಗಳಿಂದ ಕಾಂಗ್ರೆಸ್ ಜೊತೆಯಲ್ಲಿದ್ದ ಡಿಎಂಕೆ ದ್ರೋಹ ಎಸಗಿರುವುದು ಆ ಪಕ್ಷದ ಹೇಳಿಕೆಯಿಂದಲೇ ಖಚಿತಪಟ್ಟಿದೆ. ಇಂಡಿಯಾ ಕೂಟ ಒಡೆದು ಹೋಗಲಿದೆ**
> **ಪಂಕಜ್ ಚೌಧರಿ,** ಬಿಜೆಪಿ ನಾಯಕ

ಮೋದಿ ಸರ್ಕಾರದ ವಿರುದ್ಧ ಕಾರ್ಯತಂತ್ರ

ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗೆ ನಡೆದ ವಿಧಾನಸಭೆ ಚುನಾವಣೆಯಲ್ಲಿ ಟಿಎಂಸಿ ಮತ್ತು ಡಿಎಂಕೆ ಪಕ್ಷಗಳು ಹೀನಾಯ ಸೋಲುಂಡಿದ್ದು, ಹಲವು ರಾಜ್ಯಗಳ ರಾಜಕೀಯ ಸಮೀಕರಣ ಬದಲಾಗಿದೆ. ಈ ಹಿನ್ನೆಲೆಯಲ್ಲಿ ವಿರೋಧ ಪಕ್ಷಗಳಲ್ಲಿ ಸಮನ್ವಯ ಸಾಧಿಸುವ ಮಹತ್ವದ ಉದ್ದೇಶದಿಂದ ಸಭೆ ಕರೆಯಲಾಗಿದೆ.

2029ರ ಲೋಕಸಭಾ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಭವಿಷ್ಯದ ಯೋಜನೆಗಳನ್ನು ಸಿದ್ಧಪಡಿಸಲೂ ಇಂಡಿಯಾ ಒಕ್ಕೂಟ ಮುಂದಾಗಿದೆ. ರಾಷ್ಟ್ರೀಯ ವಿಚಾರಗಳನ್ನು ಇಟ್ಟುಕೊಂಡು ಪ್ರಧಾನಿ ಮೋದಿ ನೇತೃತ್ವದ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಕಾರ್ಯತಂತ್ರಗಳನ್ನು ರೂಪಿಸಲಿದೆ.

ಸಿಪಿಎಂನ ಜಾನ್ ಬ್ರಿಟ್ಟಾಸ್ ಭಾಗಿ

‘ಇಂಡಿಯಾ’ ಒಕ್ಕೂಟದ ಸಭೆಯಲ್ಲಿ ಸಿಪಿಎಂ ಪಕ್ಷವನ್ನು ಪ್ರತಿನಿಧಿಸಲು ರಾಜ್ಯಸಭೆ ಸದಸ್ಯ ಜಾನ್ ಬ್ರಿಟ್ಟಾಸ್ ಅವರನ್ನು ನಿಯೋಜಿಸಲಾಗಿದೆ.

ಕೇರಳಂ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಸಿಪಿಎಂ – ಬಿಜೆಪಿ ನಡುವೆ ರಾಜಕೀಯ ಒಪ್ಪಂದ ಆಗಿತ್ತು ಎಂದು ಕಾಂಗ್ರೆಸ್‌ನ ಕೆಲ ಮುಖಂಡರು ಗಂಭೀರ ಆರೋಪ ಮಾಡಿದ್ದರು.

ಈ ಆರೋಪ ಕುರಿತು ಸ್ಪಷ್ಟನೆ ನೀಡುವಂತೆ ಸಿಪಿಎಂ ಪ್ರಧಾನ ಕಾರ್ಯದರ್ಶಿ ಎಂ.ಎ.ಬೇಬಿ ಅವರು ಇತ್ತೀಚೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರ ಬರೆದಿದ್ದರು.

ಇಂಡಿಯಾ ಕೂಟದ ಮೈತ್ರಿಪಕ್ಷಗಳಿಗೆ ಈ ಪತ್ರದ ಪ್ರತಿಯನ್ನು ಕಳುಹಿಸಲಾಗಿತ್ತು. ‘ಇಂತಹ ಆರೋಪವು ಮೈತ್ರಿಕೂಟದ ಉದ್ದೇಶಕ್ಕೆ ಧಕ್ಕೆ ಉಂಟುಮಾಡಲಿದೆ’ ಎಂದು ಸಿಪಿಎಂ ಟೀಕಿಸಿತ್ತು.

‘ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಖರ್ಗೆ ಅವರು ಸೇರಿದಂತೆ ಕಾಂಗ್ರೆಸ್ ಮುಖಂಡರ ಈ ಆರೋಪವು ಚುನಾವಣೆ ಸಂದರ್ಭದ ಟೀಕೆಗಳನ್ನೂ ಮೀರಿದ್ದಾಗಿದೆ. ಬಿಜೆಪಿ ಎದುರಿಸಲು ಒಟ್ಟಾಗಿ ರಚಿಸಲಾದ ‘ಇಂಡಿಯಾ’ ಕೂಟದ ಉದ್ದೇಶವನ್ನೇ ಪ್ರಶ್ನಿಸುವಂತಾಗಿದೆ’ ಎಂದು ಸಿಪಿಎಂ ಹೇಳಿತ್ತು. ‘ಈ ಪತ್ರಕ್ಕೆ ಕಾಂಗ್ರೆಸ್ ಇನ್ನೂ ಪ್ರತಿಕ್ರಿಯಿಸಿಲ್ಲ. ಮೈತ್ರಿಕೂಟದ ಸಭೆಯಲ್ಲೂ ಬ್ರಿಟ್ಟಾಸ್ ಅವರು ಈ ವಿಷಯವನ್ನು ಪ್ರಸ್ತಾಪಿಸುವರು’ ಎಂದು ಬೇಬಿ ಹೇಳಿದ್ದಾರೆ.

ಬಿರುಕಿನ ನಡುವೆಯೇ ಸಭೆ

ಇಂಡಿಯಾ ಒಕ್ಕೂಟದ ಕೆಲವು ಪಕ್ಷಗಳ ಮೈತ್ರಿಯಲ್ಲಿ ಒಡಕು ಮೂಡಿರುವಾಗಲೇ ಈ ಸಭೆಯನ್ನು ಕರೆಯಲಾಗಿದೆ. ತಮಿಳುನಾಡಿನಲ್ಲಿ ಟಿವಿಕೆಗೆ ಬೆಂಬಲ ನೀಡುವ ಮೂಲಕ ಕಾಂಗ್ರೆಸ್ ‘ದ್ರೋಹ’ ಬಗೆದಿದೆ ಎಂಬ ಕಾರಣ ನೀಡಿ ಸಭೆಗೆ ಗೈರಾಗಲು ಡಿಎಂಕೆ ನಿರ್ಧರಿಸಿದೆ. ಇತ್ತ ಕೇರಳ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಸಿಪಿಎಂ–ಬಿಜೆಪಿ ನಡುವೆ ರಾಜಕೀಯ ಒಪ್ಪಂದ ಆಗಿತ್ತು ಎಂಬ ಕಾಂಗ್ರೆಸ್‌ನ ಕೆಲ ನಾಯಕರ ಆರೋಪದಿಂದ ಸಿಪಿಐ ಅಸಮಾಧಾನಗೊಂಡಿದೆ. ಎಎಪಿಯು ಬಹಿರಂಗವಾಗಿಯೇ ಒಕ್ಕೂಟದಿಂದ ಅಂತರ ಕಾಯ್ದುಕೊಂಡಿದೆ.

ಡಿಎಂಕೆಗೆ ಮಾಹಿತಿ ನೀಡಿಯೇ ಟಿವಿಕೆಗೆ ಬೆಂಬಲ: ಚಿದಂಬರಂ

ಚೆನ್ನೈ (ಪಿಟಿಐ): ಡಿಎಂಕೆಗೆ ಮಾಹಿತಿ ನೀಡಿದ ನಂತರವೇ ಕಾಂಗ್ರೆಸ್ ಪಕ್ಷವು ವಿಜಯ್ ನೇತೃತ್ವದ ಟಿವಿಕೆಗೆ ಸರ್ಕಾರ ರಚನೆಗೆ ಬೆಂಬಲ ನೀಡಿತ್ತು ಎಂದು ಪಕ್ಷದ ಹಿರಿಯ ನಾಯಕ ಪಿ.ಚಿದಂಬರಂ ತಿಳಿಸಿದ್ದಾರೆ.

ತಮಿಳುನಾಡು ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಮತ್ತು ಡಿಎಂಕೆ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿದ್ದವು. ಫಲಿತಾಂಶದ ಬಳಿಕ ಐದು ಕ್ಷೇತ್ರಗಳಲ್ಲಿ ಗೆದ್ದಿದ್ದ ಕಾಂಗ್ರೆಸ್, ಟಿವಿಕೆ ನೇತೃತ್ವದ ಸರ್ಕಾರ ರಚನೆಗೆ ಬೆಂಬಲ ನೀಡಿತ್ತು.

‘ಟಿವಿಕೆ ಬಹುಮತ ಸಾಬೀತುಪಡಿಸುವಲ್ಲಿ ವಿಫಲವಾದರೆ ಮತ್ತೊಂದು ಬಾರಿ ಚುನಾವಣೆ ನಡೆಯುವ ಅಪಾಯ ಇತ್ತು. ಈ ಬಗ್ಗೆ ಎಲ್ಲಾ ಮಿತ್ರಪಕ್ಷಗಳಲ್ಲಿ ಆತಂಕ ಇತ್ತು. ಜನರಿಗೂ ಇನ್ನೊಂದು ಚುನಾವಣೆ ಬೇಡವಾಗಿತ್ತು’ ಎಂದು ಖಾಸಗಿ ಸುದ್ದಿವಾಹಿನಿಯೊಂದಕ್ಕೆ ಅವರು ಶನಿವಾರ ತಿಳಿಸಿದ್ದಾರೆ.

‘ಟಿವಿಕೆಗೆ ಬೆಂಬಲ ನೀಡುವ ಪಕ್ಷದ ನಿರ್ಧಾರದ ಬಗ್ಗೆ ಸಿಪಿಐ, ವಿಸಿಕೆ ಮತ್ತು ಐಯುಎಂಎಲ್ ಸೇರಿದಂತೆ ಎಲ್ಲಾ ಮಿತ್ರಪಕ್ಷಗಳಿಗೆ ತಿಳಿಸಲಾಗಿತ್ತು. ಇತರ ಮಿತ್ರಪಕ್ಷಗಳು ಒಂದು ದಿನ ತಡವಾಗಿ ಘೋಷಿಸಿದವು, ನಾವು ಮುಂಚೆಯೇ ಘೋಷಿಸಿದ್ದೆವು ಅಷ್ಟೆ’ ಎಂದು ಅವರು ತಿಳಿಸಿದ್ದಾರೆ. ಮೈತ್ರಿ ಪತನದ ಬಳಿಕ ಉದಯನಿಧಿ ಸ್ಟಾಲಿನ್ ನೇತೃತ್ವದ ಡಿಎಂಕೆ ಯುವ ಘಟಕವು, ‘ಡಿಎಂಕೆಗೆ ಕಾಂಗ್ರೆಸ್ ದ್ರೋಹ ಬಗೆದಿದೆ’ ಎಂಬ ನಿರ್ಣಯವನ್ನು ಅಂಗೀಕರಿಸಿತ್ತು.

ಓಡಿ ಹೋಗುವ ಪತ್ನಿ ಜೊತೆ ಯಾರು ಬದುಕುತ್ತಾರೆ?

ಓಡಿ ಹೋಗುವ ಹೆಂಡತಿ ಜೊತೆ ಯಾರು ಬದುಕುತ್ತಾರೆ? ಅವರ (ಕಾಂಗ್ರೆಸ್) ಜೊತೆಯಲ್ಲಿ ಇನ್ನುಮುಂದೆ ಯಾವುದೇ ರಾಜಕೀಯ ಮೈತ್ರಿ ಮಾಡಿಕೊಳ್ಳುವುದಿಲ್ಲ. ಒಂದು ವೇಳೆ ಪಕ್ಷದ ನಾಯಕರು ಮೈತ್ರಿ ಮಾಡಿಕೊಳ್ಳಲು ನಿರ್ಧರಿಸಿದರೂ ಕಾರ್ಯಕರ್ತರು ಯಾವುದೇ ಕಾರಣಕ್ಕೂ ಕಾಂಗ್ರೆಸ್ ಅನ್ನು ಒಪ್ಪಿಕೊಳ್ಳುವುದಿಲ್ಲ. ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಒಂದೇ ಒಂದು ಮೇಯರ್ ಸ್ಥಾನವನ್ನು ಗೆದ್ದು ತೋರಿಸಲಿ. ಆಗ ಅವರ ಸಾಮರ್ಥ್ಯವನ್ನು ಒಪ್ಪಿಕೊಳ್ಳುತ್ತೇನೆ. ಅಣ್ಣಾಮಲೈ ಅವರನ್ನೂ ಸೇರಿ ಯಾರಾದರೂ ಇದನ್ನು ಒಪ್ಪಿಕೊಳ್ಳಲು ಸಿದ್ಧರಿದ್ದೀರಾ? ಡಿಎಂಕೆ ಸೈದ್ಧಾಂತಿಕವಾಗಿ ರಾಜಿಯಾಗುವುದಿಲ್ಲ. ಭವಿಷ್ಯದಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳುವುದಿಲ್ಲ

ಆರ್.ಎಸ್. ಭಾರತಿ, ಡಿಎಂಕೆ ನಾಯಕ

ಚಿಟಿಕೆ ಸುದ್ದಿ

ಮೂರು ದಿನ ಬಿಹಾರ ಪ್ರವಾಸ ಕೈಗೊಂಡ ಭಾಗವತ್

ಪಟ್ನಾ (ಪಿಟಿಐ): ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಅವರು ಮೂರು ದಿನಗಳ ಬಿಹಾರ ಪ್ರವಾಸ ಕೈಗೊಂಡಿದ್ದು, ಪಟ್ನಾಗೆ ಭಾನುವಾರ ಬಂದಿಳಿದರು.

ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರು ಭಾಗವತ್ ಅವರನ್ನು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು. ಜೂನ್ 9ರವರೆಗೆ ಭಾಗವತ್ ಅವರು ಮುಂಗೇರ್‌ನಲ್ಲಿ ತಂಗಲಿದ್ದಾರೆ.

‘ಮುಂಗೇರ್‌ನಲ್ಲಿ ನಡೆಯುತ್ತಿರುವ ‘ಸಂಘ ಶಿಕ್ಷಾ ವರ್ಗ’ ಹಾಗೂ ವಿವಿಧ ತರಬೇತಿ ಶಿಬಿರಗಳಲ್ಲಿ ಭಾಗವಹಿಸಲಿರುವ ಭಾಗವತ್ ಅವರು ಸ್ವಯಂ ಸೇವಕರಿಗೆ ಮಾರ್ಗದರ್ಶನ ನೀಡಲಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಸದ್ಯ ಮುಂಗೇರ್‌ನಲ್ಲಿ ನಡೆಯುತ್ತಿರುವ ವಿವಿಧ ಶಿಬಿರಗಳಲ್ಲಿ ಸುಮಾರು 700 ಸ್ವಯಂ ಸೇವಕರು ಭಾಗವಹಿಸಿದ್ದಾರೆ. ಸಂಘಟನಾ ಸಾಮರ್ಥ್ಯ, ನಾಯಕತ್ವ ಕೌಶಲಗಳು ಹಾಗೂ ಸಾಮಾಜಿಕ ಜೀವನದಲ್ಲಿ ಸಕ್ರಿಯವಾಗಿರುವುದು ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಸ್ವಯಂ ಸೇವಕರಿಗೆ ತರಬೇತಿ ನೀಡಲಾಗುತ್ತದೆ ಎಂದೂ ಹೇಳಿವೆ.

ಮಣಿಪುರ: ಯುವಕರಲ್ಲಿ ಜಾಗೃತಿ ಮೂಡಿಸಲು ಮನವಿ

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ಬೇರೆ ಜಿಲ್ಲೆಗಳಲ್ಲಿ ನಡೆಯುವ ಹಿಂಸಾಚಾರದ ಘಟನೆಗಳಿಂದ ಯುವಕರು ವಿಚಲಿತರಾಗದಂತೆ ಜಾಗೃತಿ ಮೂಡಿಸುವಂತೆ ಉಖ್ರುಲ್ ಜಿಲ್ಲೆಯ ಗ್ರಾಮಗಳ ಜನರು ಹಾಗೂ ಅಧಿಕಾರಿಗಳಿಗೆ ಭದ್ರತಾ ಪಡೆಗಳು ಕೇಳಿಕೊಂಡಿವೆ.

ಕಾಂಗ್‌ಪೋಕ್ಪಿ ಜಿಲ್ಲೆಯಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಮೂವರು ಶುಕ್ರವಾರ ಸಾವಿಗೀಡಾಗಿದ್ದಾರೆ. ಈ ಘಟನೆಯಿಂದ ಸಮೀಪದ ಜಿಲ್ಲೆಯ ಜನರು ಉದ್ರೇಕಗೊಳ್ಳುವುದನ್ನು ತಡೆಯಲು ಭದ್ರತಾ ಪಡೆಗಳು ಹಲವು ಕ್ರಮ ಕೈಗೊಂಡಿವೆ.

ಹಲವು ಬಂಕರ್‌ಗಳನ್ನು ಪತ್ತೆಹಚ್ಚಿ ನಾಶಗೊಳಿಸಲಾಗಿದೆ. ಗ್ರಾಮಗಳಲ್ಲಿ ಗಸ್ತು ತಿರುಗಲಾಗುತ್ತಿದ್ದು, ಹೆದ್ದಾರಿಗಳಲ್ಲಿ ಭದ್ರತಾ ತಪಾಸಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಸಂಸದರ ಪಕ್ಷಾಂತರ: ಟಿಎಂಸಿ ಎಚ್ಚರಿಕೆ

ನವದೆಹಲಿ (ಪಿಟಿಐ): ‘ಟಿಎಂಸಿ ಸಂಸದರು ಪಕ್ಷಾಂತರಗೊಂಡು ಬಣ ರಚಿಸಲು ಮಾಡುವ ಯಾವುದೇ ಪ್ರಯತ್ನವು ಪಕ್ಷಾಂತರ ನಿಷೇಧ ಕಾನೂನಿನ ಅಡಿಯಲ್ಲಿ ಗಮನಾರ್ಹ ಕಾನೂನು ನಿರ್ಬಂಧ ಎದುರಿಸಬೇಕಾಗುತ್ತದೆ’ ಎಂದು ಟಿಎಂಸಿ ನಾಯಕರೊಬ್ಬರು ಹೇಳಿದ್ದಾರೆ.

‘ಸದ್ಯ ಲೋಕಸಭೆಯಲ್ಲಿ ಟಿಎಂಸಿ 28 ಸದಸ್ಯರನ್ನು ಹೊಂದಿದ್ದು, ಪಕ್ಷಾಂತರ ನಿಷೇಧ ಕಾನೂನಿನಡಿ ಯಾವುದೇ ಕ್ರಮಕ್ಕೆ ಸಂಸದೀಯ ಪಕ್ಷದ ಕನಿಷ್ಠ ಮೂರನೇ ಎರಡರಷ್ಟು ಅಥವಾ 19 ಸಂಸದರ ಬೆಂಬಲ ಬೇಕಾಗುತ್ತದೆ’ ಎಂದು ಅವರು ಹೇಳಿದ್ದಾರೆ.

ಕಳೆದ ವಾರ ಟಿಎಂಸಿಯ ಒಟ್ಟು 80 ಶಾಸಕರಲ್ಲಿ 58 ಶಾಸಕರು, ಟಿಎಂಸಿ ಶಾಸಕಾಂಗ ಪಕ್ಷದಿಂದ ಬೇರ್ಪಟ್ಟು, ಉಚ್ಚಾಟಿತ ಶಾಸಕ ರುತಬ್ರತಾ ಬ್ಯಾನರ್ಜಿ ನೇತೃತ್ವದಲ್ಲಿ ವಿಧಾನಸಭೆಯಲ್ಲಿ ಪ್ರಮುಖ ವಿರೋಧ ಪಕ್ಷವಾಗಿ ಮಾನ್ಯತೆ ಪಡೆದಿದ್ದರು.

ಪರೀಕ್ಷಾ ವ್ಯವಸ್ಥೆ ಲೋಪ • ಸಂಸದೀಯ ಸಮಿತಿಯಿಂದ ವಿಚಾರಣೆ

ಪ್ರಶ್ನೆಪತ್ರಿಕೆ ಸೋರಿಕೆ ವ್ಯಾಖ್ಯಾನ ಏನು?

ನವದೆಹಲಿ (ಪಿಟಿಐ): ‘ಎನ್‌ಟಿಎ ಪ್ರಕಾರ ಪ್ರಶ್ನೆಪತ್ರಿಕೆ ಸೋರಿಕೆ ಎಂಬುದರ ವ್ಯಾಖ್ಯಾನ ಏನು? 2018ರ ನಂತರ ಈವರೆಗೆ ಸಂಸ್ಥೆ ನಡೆಸಿರುವ ಪರೀಕ್ಷೆಗಳಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಆಗಿದೆಯೇ’ ಎಂದು ಸಂಸದೀಯ ಸಮಿತಿಯು ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯನ್ನು (ಎನ್‌ಟಿಎ) ಪ್ರಶ್ನಿಸಿದೆ.

ನೀಟ್‌-ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ ಒಳಗೊಂಡು ಒಟ್ಟಾರೆ ಪರೀಕ್ಷಾ ವ್ಯವಸ್ಥೆಯ ಲೋಪಗಳನ್ನು ಕುರಿತಂತೆ ಎನ್‌ಟಿಎ ಮತ್ತು ಸಿಬಿಎಸ್‌ಇ ಸಂಸ್ಥೆಗಳ ಅಧಿಕಾರಿಗಳಿಗೆ ಇದೂ ಸೇರಿ ಹಲವು ಪ್ರಶ್ನೆಗಳನ್ನು ಸಮಿತಿಯು ಕೇಳಿದೆ ಎಂದು ಮೂಲಗಳು ತಿಳಿಸಿವೆ.

ಸಂಸ್ಥೆಯ ಪರೀಕ್ಷಾ ವ್ಯವಸ್ಥೆಯಿಂದ ಯಾವುದೇ ಪ್ರಶ್ನೆಪತ್ರಿಕೆ ಸೋರಿಕೆ ಆಗಿಲ್ಲ. ಸಂಭವನೀಯ ಪ್ರಶ್ನೆಪತ್ರಿಕೆಗಳಿಂದ ಕೆಲ ಪ್ರಶ್ನೆಗಳು ಹಂಚಿಕೆಯಾಗಿವೆ ಎಂದು ಎನ್‌ಟಿಎ ಈ ಮುನ್ನ ಪ್ರತಿಪಾದಿಸಿತ್ತು.

ಕಾಂಗ್ರೆಸ್ ಸದಸ್ಯ ದಿಗ್ವಿಜಯ ಸಿಂಗ್ ಶಿಕ್ಷಣ ಕುರಿತ ಸಂಸದೀಯ ಸಮಿತಿ ಅಧ್ಯಕ್ಷರಾಗಿದ್ದಾರೆ. ನೀಟ್–ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ಸಿಬಿಎಸ್‌ಇಯ ಒಎಸ್‌ಎಂ ವ್ಯವಸ್ಥೆಯ ಲೋಪಗಳ ತನಿಖೆಯ ಭಾಗವಾಗಿ ಎನ್‌ಟಿಎ, ಸಿಬಿಎಸ್‌ಇಯ ಕೆಲ ಅಧಿಕಾರಿಗಳನ್ನು ವಿಚಾರಣೆಗೆ ಸಮಿತಿ ಕರೆಸಿತ್ತು.

ಒಎಸ್‌ಎಂ ವ್ಯವಸ್ಥೆ ಹಾಗೂ ನೀಟ್ ಪರೀಕ್ಷಾ ಸ್ವರೂಪ ಕುರಿತು ಲಿಖಿತ ವಿವರಣೆ ಸಲ್ಲಿಸುವಂತೆ ಸಮಿತಿ ಈ ಸಂಸ್ಥೆಗಳ ಅಧಿಕಾರಿಗಳಿಗೆ ಸೂಚಿಸಿದೆ. ಸಿಬಿಐ ತನಿಖೆ ಹೊರತುಪಡಿಸಿ, ನೀಟ್ ಯುಜಿ 2024ರ ಪರೀಕ್ಷಾ ಅವ್ಯವಹಾರ ಕುರಿತಂತೆ ಎನ್‌ಟಿಎ ಸತನಿಖೆ ನಡೆಸಿದೆಯೇ ಎಂದೂ ಪ್ರಶ್ನಿಸಿದೆ.

ಕಳೆದ ಮೂರು ವರ್ಷಗಳ ಅವಧಿಯ ಸಿಬ್ಬಂದಿ ಸಾಮರ್ಥ್ಯ, 2022ರ ನಂತರ ಆಗಿರುವ ನೇಮಕಾತಿ ವಿವರ, ಕಳೆದ ಮೂರು ವರ್ಷಗಳಲ್ಲಿ ಉನ್ನತ ಶಿಕ್ಷಣ ಇಲಾಖೆಗೆ ಸಲ್ಲಿಸಿರುವ ವಾರ್ಷಿಕ ವರದಿಗಳು, ರಾಧಾಕೃಷ್ಣನ್ ಸಮಿತಿ ವರದಿಯ 101 ಶಿಫಾರಸುಗಳು ಹಾಗೂ ಅವುಗಳ ಕುರಿತು ಎನ್‌ಟಿಎ ಕೈಗೊಂಡಿರುವ ಕ್ರಮಗಳ ಬಗ್ಗೆ ಲಿಖಿತ ವರದಿ ಸಲ್ಲಿಸಬೇಕು ಎಂದು ಸಮಿತಿ ಸೂಚಿಸಿದೆ.

ಸುಗಮ ಮತ್ತು ಪಾರದರ್ಶಕ ಕ್ರಮದಲ್ಲಿ ಪರೀಕ್ಷೆಗಳನ್ನು ನಡೆಸುವ ಕುರಿತು ಅಗತ್ಯ ಸಲಹೆ, ಸುಧಾರಣಾ ಕ್ರಮಗಳ ಬಗ್ಗೆ ಸಲಹೆ ನೀಡಲು ಇಸ್ರೊ ಮಾಜಿ ಮುಖ್ಯಸ್ಥ ಕೆ.ರಾಧಾಕೃಷ್ಣನ್ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿಯನ್ನು ಕೇಂದ್ರ ಸರ್ಕಾರ ಜೂನ್ 2024ರಲ್ಲಿ ರಚಿಸಿತ್ತು.

ಸಂಸದೀಯ ಸಮಿತಿ ಕೇಳಿರುವ ವಿವರಗಳನ್ನು ಸಲ್ಲಿಸಲು ಸಿಬಿಎಸ್‌ಇಗೆ ಜೂನ್ 8, ಎನ್‌ಟಿಎಗೆ ಜೂನ್ 10ರ ಗಡುವು ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಅಲ್ಲದೆ, ಒಎಸ್‌ಎಂ ವ್ಯವಸ್ಥೆ ಅಳವಡಿಸುವ ಮೊದಲು ವಿವಿಧ ಪ್ರಸ್ತಾವಗಳು ಹಾಗೂ ‘ಕೋಎಂಪ್ಟ್’ ವ್ಯವಸ್ಥೆಯನ್ನು ಪೂರ್ವಭಾವಿಯಾಗಿ ಪರಿಶೀಲಿಸಲಾಗಿತ್ತೆ ಎಂದು ಸಂಸದೀಯ ಸಮಿತಿಯು ಸಿಬಿಎಸ್‌ಇಗೆ ಪ್ರಶ್ನಿಸಿದೆ.

ಕೋಎಂಪ್ಟ್ ಎಜುಟೆಕ್ ಸಂಸ್ಥೆ ಮತ್ತು ಅದರ ನಿರ್ದೇಶಕರು ಈ ಮೊದಲು ಗ್ಲೋಬರೆನಾ ಟೆಕ್ನಾಲಜೀಸ್ ಸಂಸ್ಥೆಯ ಜೊತೆಗೆ ಗುರುತಿಸಿಕೊಂಡಿದ್ದರು ಎಂಬುದರ ಮಾಹಿತಿ ಸಿಬಿಎಸ್‌ಇಗೆ ಇತ್ತೆ ಎಂದು ಸಮಿತಿ ಪ್ರಶ್ನಿಸಿದೆ. ಗ್ಲೋಬರೆನಾ ಟೆಕ್ನಾಲಜೀಸ್ ಸಂಸ್ಥೆಯು ಹಿಂದೆ 2019ರಲ್ಲಿ ತೆಲಂಗಾಣ ಇಂಟರ್ ಮೀಡಿಯೇಟ್ ಪರೀಕ್ಷೆ ವ್ಯವಸ್ಥೆಯಲ್ಲಿ ಲೋಪ ಎಸಗಿದ್ದು ತನಿಖೆಯಲ್ಲಿ ಗೊತ್ತಾಗಿತ್ತು.

ಸಿಬಿಎಸ್‌ಇಗೆ ಸಮಿತಿಯ ಪ್ರಶ್ನೆಗಳು

- ಒಎಸ್‌ಎಂ ವ್ಯವಸ್ಥೆ ಗುತ್ತಿಗೆಗೆ ಬಿಡ್ ಮಾಡುವ ಕಂಪನಿಗಳ ವಾರ್ಷಿಕ ಕನಿಷ್ಠ ವಹಿವಾಟು ₹50 ಕೋಟಿ ಇರಬೇಕು ಎಂದು ನಿರ್ದಿಷ್ಟವಾಗಿ ನಿಗದಿಪಡಿಸಲು ಕಾರಣವೇನು?
- ತನ್ನದೇ ಡಾಟಾ ಸೆಂಟರ್ ಹೊಂದಿರುವ ಗುತ್ತಿಗೆದಾರ ಸಂಸ್ಥೆಗಳಿಗೆ ಅನುಕೂಲ ಆಗುವಂತೆ ಆರ್‌ಎಫ್‌ಪಿ (ಪ್ರಸ್ತಾವಗಳಿಗಾಗಿ ಮನವಿ) ನಿಯಮಗಳನ್ನು ಬದಲಿಸಲು ಕಾರಣವೇನು?
- ರೋಬೊಟಿಕ್ ಸ್ಕ್ಯಾನರ್ ಮಾಡಬೇಕು ಎಂಬ ನಿಯಮ ಸಡಿಲಿಸಿದ್ದು ಏಕೆ? ಉತ್ತರ ಪತ್ರಿಕೆಗಳ ಹೊಲಿಗೆ ಕಟ್ಟು ತೆಗೆಯದೇ ಸ್ಕ್ಯಾನ್ ಪ್ರಕ್ರಿಯೆ ನಡೆಸಬೇಕು ಎಂಬ ನಿಯಮ ಕೈಬಿಟ್ಟಿದ್ದು ಏಕೆ?
- ಸ್ಕ್ಯಾನಿಂಗ್‌ನ ಗುಣಮಟ್ಟ ಕನಿಷ್ಠ ಡಿಪಿಐ 300 ಇರಬೇಕು ಎಂಬುದನ್ನು ಡಿಪಿಐ 200ಕ್ಕೆ ಎಂದು ಬದಲಿಸಿದ್ದು ಏಕೆ?
- ದೊಡ್ಡ ಪ್ರಮಾಣದ ಯೋಜನೆಗಳ ನಿರ್ವಹಣೆ (ಕನಿಷ್ಠ 5 ಲಕ್ಷ ವಿದ್ಯಾರ್ಥಿಗಳು) ಅನುಭವ ಇರಬೇಕು ಎಂಬ ನಿಯಮ ಸಡಿಲಿಸಿದ್ದು ಏಕೆ?
- ಒಎಸ್‌ಎಂ ವ್ಯವಸ್ಥೆ ಬಗ್ಗೆ ವೀಕ್ಷಕರ ವರದಿ ಆಧರಿಸಿ ಸಿಬಿಎಸ್‌ಇ ಕ್ರಮ ಜರುಗಿಸಿದೆಯೇ ಅಥವಾ ಈ ಸಂಬಂಧ ಶಿಕ್ಷಣ ಸಚಿವಾಲಯದ ಅಧಿಕಾರಿಗಳ ಜೊತೆಗೆ ಚರ್ಚಿಸಿದೆಯೇ?

ಸ್ಪರ್ಧಿಗಳ ಸಂಭ್ರಮ

ಎಎಫ್‌ಪಿ ಚಿತ್ರ:



ಬ್ರೆಜಿಲ್‌ನ ಸಾವೊ ಪಾವ್ಲೊದಲ್ಲಿ ನಡೆದ 30ನೇ ಲಿಂಗತ್ವ ಅಲ್ಪಸಂಖ್ಯಾತರ ಸಮ್ಮೇಳನದಲ್ಲಿ ಸ್ಪರ್ಧಿಗಳ ಸಂಭ್ರಮ

ತ್ರಿಭಾಷಾ ನೀತಿ ಜಾರಿಗೆ ತಡೆ ನೀಡಿ: ಪ್ರಧಾನಿಗೆ ಪತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಿಬಿಎಸ್‌ಇ 9ನೇ ತರಗತಿ ವಿದ್ಯಾರ್ಥಿಗಳಿಗೆ ಜುಲೈ 1ರಿಂದ ತ್ರಿಭಾಷಾ ನೀತಿಯ ಕಡ್ಡಾಯ ಜಾರಿಯನ್ನು ತಡೆಹಿಡಿಯಬೇಕೆಂದು ಕೋರಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕಾಂಗ್ರೆಸ್ ಸಂಸದ ದಿಗ್ವಿಜಯ್ ಸಿಂಗ್ ಪತ್ರ ಬರೆದಿದ್ದಾರೆ.

ಸೂಕ್ತ ಪಠ್ಯಪುಸ್ತಕಗಳು, ಶಿಕ್ಷಕರ ಲಭ್ಯತೆ ಹಾಗೂ ಸಿದ್ಧತೆಗಳಿಲ್ಲದೆ ಏಕಾಏಕಿ ತ್ರಿಭಾಷಾ ನೀತಿ ಜಾರಿ ಕಡ್ಡಾಯಗೊಳಿಸಿದರೆ ಅದು ಶಿಕ್ಷಣ ವ್ಯವಸ್ಥೆಯಲ್ಲಿನ ಗಂಭೀರ ಅಡಚಣೆಗೆ ಕಾರಣವಾಗಲಿದೆ ಎಂದೂ ಸಿಂಗ್ ಕಳವಳ ವ್ಯಕ್ತಪಡಿಸಿದ್ದಾರೆ.

ಶಿಕ್ಷಣ, ಮಹಿಳೆಯರು ಮತ್ತು ಮಕ್ಕಳು, ಯುವಜನತೆ ಹಾಗೂ ಕ್ರೀಡೆಗೆ ಸಂಬಂಧಿಸಿದ ಸಂಸದೀಯ ಸ್ಥಾಯಿ ಸಮಿತಿಗೆ ಅಧ್ಯಕ್ಷರಾಗಿರುವ ಸಿಂಗ್, ಸಿಬಿಎಸ್‌ಇ 9ನೇ ತರಗತಿಯ ವಿದ್ಯಾರ್ಥಿಗಳ ಪೋಷಕರು ಕಳವಳ ವ್ಯಕ್ತಪಡಿಸಿ ತಮಗೆ ಸಲ್ಲಿಸಿರುವ ಮನವಿ ಪತ್ರಗಳ ಪ್ರತಿಯನ್ನು ಮೋದಿ ಅವರಿಗೂ ಕಳುಹಿಸಿದ್ದಾರೆ.

‘ತ್ರಿಭಾಷಾ ನೀತಿ ವಿಚಾರವು ವಿಚಾರಣೆಯ ಹಂತದಲ್ಲಿದ್ದು, ಜುಲೈ 15ರಂದು ಇದಕ್ಕೆ ಸಂಬಂಧಿಸಿದ ತೀರ್ಪು ಹೊರಬೀಳಲಿದೆ. ಅದಕ್ಕೂ ಮುನ್ನವೇ ಜುಲೈ 1ರಂದು ನೀತಿ ಜಾರಿಗೊಳಿಸಲು ನಿರ್ಧರಿಸಿರುವುದು ಸರಿಯಲ್ಲ. ಈ ಎಲ್ಲಾ ವಿಚಾರಗಳನ್ನೂ ಪರಿಗಣಿಸಿ ನೀತಿ ಜಾರಿಯನ್ನು ತಡೆಹಿಡಿಯಬೇಕೆಂದು ನಾನು ಶಿಫಾರಸು ಮಾಡುತ್ತಿದ್ದೇನೆ’ ಎಂದೂ ಅವರು ಪ್ರಧಾನಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

156 ಮಂದಿ ಪೊಲೀಸ್ ವಶಕ್ಕೆ

ಪ್ರಜಾವಾಣಿ ವಾರ್ತೆ

ಮುಂಬೈ: ಪುಣೆಯ ತುಳಾಪುರ ಸಮೀಪದ ಬಂಗಲೆಯೊಂದರಲ್ಲಿ ತಡರಾತ್ರಿ ನಡೆಯುತ್ತಿದ್ದ ಖಾಸಗಿ ಪಾರ್ಟಿಯೊಂದರ ಮೇಲೆ ಕಾರ್ಯಾಚರಣೆ ನಡೆಸಿರುವ ಇಲ್ಲಿನ ಪೊಲೀಸರು 156 ಮಂದಿಯನ್ನು ವಶಕ್ಕೆ ಪಡೆದಿದ್ದಾರೆ. ಅಲ್ಲಿ ಸಿಕ್ಕಿದ ಮದ್ಯ, ಗಾಂಜಾ, ನಿಷೇಧಿತ ಹುಕ್ಕಾವನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

ಖಾಸಗಿ ಸಭೆ ಹಾಗೂ ತಡರಾತ್ರಿ ನಡೆಯುವ ಪಾರ್ಟಿಗಳಲ್ಲಿ ಮಾದಕ ವಸ್ತುಗಳ ದುರುಪಯೋಗ, ಅಬಕಾರಿ ನಿಯಮಗಳ ಉಲ್ಲಂಘನೆಯ ಕುರಿತಂತೆ ಹಲವು ದೂರುಗಳು ಕೇಳಿಬಂದಿತ್ತು.

ಇದರ ಬೆನ್ನಲ್ಲೇ, ಲೋಣಿಖಂಡ್ ಠಾಣಾ ವ್ಯಾಪ್ತಿಯಲ್ಲಿರುವ ಆಳಂದಿ– ಮಾರ್ಕಲ್ ರಸ್ತೆಯ ಖಾಸಗಿ ಬಂಗಲೆಯೊಂದರಲ್ಲಿ ಪಾರ್ಟಿ ನಡೆಯುತ್ತಿದ್ದ ಕುರಿತು ಖಚಿತ ಮಾಹಿತಿ ಆಧರಿಸಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಅಬಕಾರಿ ಇಲಾಖೆ ನೀಡಿದ ಸಮಯವನ್ನು ಮೀರಿ, ‘ಪಾಜೆಕ್ಟ್ ಎಕ್ಸ್’ ಕೋಡ್‌ನೇಮ್‌ನಲ್ಲಿ ಈ ಪಾರ್ಟಿ ನಡೆಯುತ್ತಿತ್ತು. ಭಾಗವಹಿಸಿದವರಲ್ಲಿ 107 ಮಂದಿ ಪುರುಷರು, 49 ಮಂದಿ ಮಹಿಳೆಯರಿದ್ದರೆ, ಮೂವರು ಅಪ್ರಾಪ್ತ ವಯಸ್ಸಿನವರು ಕೂಡ ಇದ್ದರು ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

‘ಅಬಕಾರಿ ನಿಯಮಗಳ ಪ್ರಕಾರ, ರಾತ್ರಿ 11.30ರ ತನಕ ಮಾತ್ರ ಪಾರ್ಟಿ ನಡೆಸಲು ಅವಕಾಶವಿದೆ. ಅದನ್ನು ಮೀರಿ ಪಾರ್ಟಿ ಮುಂದುವರಿದಿದೆ’ ಎಂದು ಪುಣೆಯ ಹೆಚ್ಚುವರಿ ಪೊಲೀಸ್ ಆಯುಕ್ತ ತೇಜಸ್ವಿ ಸಾತ್ಪುತೆ ತಿಳಿಸಿದ್ದಾರೆ.

ಸಂಗೀತ ಕಾರ್ಯಕ್ರಮ: ವ್ಯಕ್ತಿ ಸಾವು

ಮುಂಬೈ (ಪಿಟಿಐ): ನಗರದ ವಿವಿಧೆಡೆ ನಡೆದ ಎರಡು ಪ್ರತ್ಯೇಕ ಸಂಗೀತ ಕಾರ್ಯಕ್ರಮಗಳಲ್ಲಿ ವ್ಯಕ್ತಿಯೊಬ್ಬರು ಕುಸಿದುಬಿದ್ದು ಮೃತಪಟ್ಟಿದ್ದು, ಮಹಿಳೆಯೊಬ್ಬರು ಆಸ್ಪತ್ರೆಗೆ ದಾಖಲಾಗಿದ್ದಾರೆ. ಇಬ್ಬರೂ ಮಾದಕ ಪದಾರ್ಥ ಸೇವಿಸಿರುವ ಕುರಿತಂತೆ ಯಾವುದೇ ಸಾಕ್ಷ್ಯ ಲಭ್ಯವಾಗಿಲ್ಲ. ಆದರೆ ಮದ್ಯಪಾನ ಮಾಡಿದ್ದರು ಎಂದು ಪೊಲೀಸರು ಸ್ಪಷ್ಟಪಡಿಸಿದ್ದಾರೆ.

ಟಿಎಂಸಿ ಕೌನ್ಸಿಲರ್‌ಗಳ ಸೆರೆ – ಆಕ್ರೋಶ

ವಿವಿಧೆಡೆ ಪ್ರತಿಭಟನೆ, ಆರೋಪಿಗಳ ಮೇಲೆ ಮೊಟ್ಟೆ ಎಸೆತ

ಕೋಲ್ಕತ್ತ (ಪಿಟಿಐ): ಪ್ರತ್ಯೇಕ ಕ್ರಿಮಿನಲ್ ಪ್ರಕರಣಗಳಲ್ಲಿ ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಇಬ್ಬರು ಕೌನ್ಸಿಲರ್‌ಗಳನ್ನು ಪೊಲೀಸರು ಬಂಧಿಸಿದ್ದು, ಇದಕ್ಕೆ ಸಂಬಂಧಿಸಿ ಭಾನುವಾರ ಕೋಲ್ಕತ್ತ ನಗರದಲ್ಲಿ ಹಲವು ನಾಟಕೀಯ ಬೆಳವಣಿಗೆಗಳು ನಡೆದವು.

ಕೋಲ್ಕತ್ತ ಪಾಲಿಕೆ ಸದಸ್ಯರಾದ ಬಪ್ಪಾದಿತ್ಯ ದಾಸ್‌ಗುಪ್ತ ಮತ್ತು ಎಂ.ಡಿ. ಜಸೀಮುದ್ದೀನ್ ಬಂಧಿತ ಆರೋಪಿಗಳು. ಸುಲಿಗೆ, ಬೆದರಿಕೆ, ಮನೆಗೆ ಬೆಂಕಿ ಹಚ್ಚಲು ಯತ್ನಿಸಿದ ಆರೋಪದಲ್ಲಿ ದಾಸ್‌ಗುಪ್ತ ವಿರುದ್ಧ ಪ್ರಕರಣ ದಾಖಲಾಗಿದೆ. ಜಸೀಮುದ್ದೀನ್ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗಿದೆ.

ಪೊಲೀಸರು ಆರೋಪಿಗಳನ್ನು ಬಿಗಿ ಭದ್ರತೆಯಲ್ಲಿ ಆಲಿಪುರ ನ್ಯಾಯಾಲಯಕ್ಕೆ ಕರೆದೊಯ್ಯುವಾಗ ಪ್ರತಿಭಟನಕಾರರು ವಾಹನ ತಡೆದು ಪ್ರತಿಭಟನೆ ನಡೆಸಿದರು. ಆರೋಪಿಗಳ ಮೇಲೆ ಮೊಟ್ಟೆಗಳನ್ನು ಎಸೆದು ಆಕ್ರೋಶ ವ್ಯಕ್ತಪಡಿಸಿದರು.

ಕೋಲ್ಕತ್ತ ಪಾಲಿಕೆಯ ವಾರ್ಡ್ ನಂಬರ್ 39ರ ಸದಸ್ಯ ಜಸೀಮುದ್ದೀನ್ ನಿವಾಸವು ಭಾನುವಾರ ಹಲವು ನಾಟಕೀಯ ಬೆಳವಣಿಗೆಗಳಿಗೆ ಸಾಕ್ಷಿಯಾಯಿತು. ಅರೆಸೇನಾ ಪಡೆ ಮತ್ತು ಪೊಲೀಸ್ ತಂಡವು ಅವರನ್ನು ಬಂಧಿಸಲು ಭಾನುವಾರ ಬೆಳಿಗ್ಗೆ 5.30ರ ಸುಮಾರಿಗೆ ಬಂದಿದ್ದವು. ಆದರೆ, ಮನೆಯ ಪ್ರವೇಶದ್ವಾರಕ್ಕೆ ಬೀಗ ಹಾಕಲಾಗಿತ್ತು. ಬಂಧನದಿಂದ ತಪ್ಪಿಸಿಕೊಳ್ಳಲು ಜಸೀಮುದ್ದೀನ್ ಮನೆಯ ಒಳಗಿನಿಂದ ಬಾಗಿಲಿಗೆ ಬೀಗ ಹಾಕಿಕೊಂಡು ಸುಮಾರು 6 ಗಂಟೆ ಪೊಲೀಸರನ್ನು ಸತಾಯಿಸಿದರು. ಕೊನೆಗೆ ಪೊಲೀಸರು ಬೀಗ ಒಡೆಯುವ ವ್ಯಕ್ತಿಯನ್ನು ಕರೆಯಿಸಿ, ಬೀಗ ಒಡೆದು ಜಸೀಮುದ್ದೀನ್‌ನನ್ನು ವಶಕ್ಕೆ ಪಡೆದರು.

ನ್ಯಾಯಾಲಯವು ದಾಸ್‌ಗುಪ್ತ ಅವರನ್ನು 14 ದಿನ, ಜೂನ್ 21ರವರೆಗೆ ಮತ್ತು ಘೋಷ್ ಅವರನ್ನು ಜೂನ್ 18ರವರೆಗೆ 11 ದಿನ ಪೊಲೀಸ್ ಕಸ್ಟಡಿಗೆ ನೀಡಿದೆ ‘ಆರೋಪಿಗಳು ಕಾನೂನಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ’ ಎಂದು ಬಂಗಾಳದ ಬಿಜೆಪಿ ಸಚಿವ ಇಂದ್ರನೀಲ್ ಖಾನ್ ಹೇಳಿದ್ದಾರೆ..

ಮುಖಂಡನ ತಲೆ ಬೋಳಿಸಿ ಮೆರವಣಿಗೆ

ಕೋಲ್ಕತ್ತ (ಪಿಟಿಐ): ತೃಣಮೂಲ ಕಾಂಗ್ರೆಸ್ ಪಕ್ಷದ ನಾಯಕ ಎನ್ನಲಾದ ಸ್ಥಳೀಯ ವ್ಯಕ್ತಿಯೊಬ್ಬರ ತಲೆ ಬೋಳಿಸಿ, ಚಪ್ಪಲಿಹಾರವನ್ನು ಹಾಕಿ ಮೆರವಣಿಗೆ ಮಾಡಿರುವ ಕೃತ್ಯ ಈಚೆಗೆ ನಡೆದಿದೆ. ಈ ಕುರಿತ ಒಂದು ವಿಡಿಯೊ ಜಾಲತಾಣದಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿದೆ.

ಪಶ್ಚಿಮ ಬಂಗಾಳದ ಹೌರಾ ಜಿಲ್ಲೆಯ ಅಮರದಹಾ ಗ್ರಾಮದಲ್ಲಿ ಕೃತ್ಯ ನಡೆದಿದೆ. ಜನಕ್ರೋಶಕ್ಕೆ ಗುರಿಯಾದ ವ್ಯಕ್ತಿಯನ್ನು ಸನ್ನಾಶಿ ಮನ್ನಾ ಎಂದು ಗುರುತಿಸಲಾಗಿದೆ. ಈತ ವಿವಿಧ ಅಭಿವೃದ್ಧಿ ಯೋಜನೆಗಳ ಫಲಾನುಭವಿಗಳಿಂದ ಹಣ ಸುಲಿಗೆ ಮಾಡುತ್ತಿದ್ದ ಎಂದು ಆರೋಪಿಸಲಾಗಿದೆ.

ಸನ್ನಾಶಿ ಮನ್ನಾ ಮನೆಯಿಂದ ಹಲವು ಫಲಾನುಭವಿಗಳ ಆಧಾರ್ ಕಾರ್ಡ್ ಪ್ರತಿಗಳು, ನರೇಗಾದ ಜಾಬ್‌ಕಾರ್ಡ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಆರೋಪಿಸಲಾಗಿದೆ.

ಶಂಕಿತ ವಿದೇಶಿಗರ ಮಾಹಿತಿ ನೀಡಿ: ಆಯೋಗ ಸೂಚನೆ

ನವದೆಹಲಿ (ಪಿಟಿಐ): ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಸಂದರ್ಭದಲ್ಲಿ ಶಂಕಿತ ವಿದೇಶಿಗರ ಬಗ್ಗೆ ಮಾಹಿತಿ ನೀಡುವಂತೆ ರಾಜ್ಯ ಚುನಾವಣಾ ಅಧಿಕಾರಿಗಳಿಗೆ ಚುನಾವಣಾ ಆಯೋಗ ಸೂಚಿಸಿದೆ.

ಮತದಾರರು ನಮೂನೆ ಅರ್ಜಿಗಳನ್ನು ವಾಪಸ್ ನೀಡದಿದ್ದಲ್ಲಿ, ಅವರು ಸ್ಥಳಾಂತರಗೊಂಡಿದ್ದಾರೆಯೇ, ಮೃತಪಟ್ಟಿದ್ದಾರೆಯೇ ಅಥವಾ ಇತರ ಕಾರಣಗಳಿವೆಯೇ ಎಂಬ ಬಗ್ಗೆ ಬೂತ್ ಮಟ್ಟದ ಅಧಿಕಾರಿಗಳು ಪತ್ತೆ ಮಾಡಬೇಕು ಎಂದು ಆಯೋಗವು ಒತ್ತಿ ಹೇಳಿದೆ.

ಮೇ 14ರಂದು ರಾಜ್ಯ ಚುನಾವಣಾ ಅಧಿಕಾರಿಗಳಿಗೆ ಎಸ್‌ಐಆರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ಹಲವು ನಿರ್ದೇಶನಗಳನ್ನು ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚುನಾವಣಾ ನೋಂದಣಾಧಿಕಾರಿಗಳು ಶಂಕಿತ ವಿದೇಶಿ ಪ್ರಜೆಗಳ ಬಗ್ಗೆ ಸಕ್ಷಮ ಪ್ರಾಧಿಕಾರಕ್ಕೆ ಮಾಹಿತಿ ನೀಡಬೇಕು ಎಂದೂ ತಿಳಿಸಲಾಗಿದೆ ಎಂದು ಹೇಳಿದ್ದಾರೆ.

ಆಯೋಗವು ಕಳೆದ ವರ್ಷ ಬಿಹಾರದಲ್ಲಿ ಎಸ್‌ಐಆರ್ ಪ್ರಕ್ರಿಯೆಗೆ ಸಿದ್ಧತೆ ನಡೆಸಿತ್ತು. ರಾಜ್ಯದಲ್ಲಿ ಬಾಂಗ್ಲಾದೇಶ, ನೇಪಾಳ ಮತ್ತು ಮ್ಯಾನ್ಮಾರ್ ದೇಶಗಳ ಪ್ರಜೆಗಳು ಇರುವುದು ಪತ್ತೆಯಾಗಿದೆ ಎಂದು ಅಧಿಕಾರಿಗಳು ಆರೋಪಿಸಿದ್ದರು. ಆದರೆ, ಆಯೋಗವು ಈ ಆರೋಪಕ್ಕೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯವನ್ನು ಬಿಡುಗಡೆ ಮಾಡಿರಲಿಲ್ಲ.

ಈ ಬೆನ್ನಲ್ಲೇ ವಿರೋಧ ಪಕ್ಷಗಳು, ‘ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳಿಗೆ ಮತ ಹಾಕದ ಮತದಾರರನ್ನು ಗುರಿಯಾಗಿಸಲು ಚುನಾವಣಾ ಆಯೋಗವು ಹೂಡಿರುವ ತಂತ್ರ ಇದಾಗಿದೆ’ ಎಂದು ಆರೋಪಿಸಿದ್ದವು.

ಈ ಮಧ್ಯೆ ಮೇ 14ರಿಂದ ಚುನಾವಣಾ ಆಯೋಗವು ಕರ್ನಾಟಕ ಸೇರಿದಂತೆ 16 ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮೂರನೇ ಹಂತದ ಎಸ್‌ಐಆರ್ ಪ್ರಕ್ರಿಯೆಯನ್ನು ಆರಂಭಿಸಿದೆ.

‘ರಾಜೀನಾಮೆ ತನಕ ಹೋರಾಟ’

ಕಾಕ್ರೋಚ್ ಜನತಾ ಪಾರ್ಟಿ ಸಂಸ್ಥಾಪಕ ಅಭಿಜೀತ್ ಎಚ್ಚರಿಕೆ

ಛತ್ರಪತಿ ಸಂಭಾಜಿನಗರ (ಪಿಟಿಐ): ನೀಟ್‌-ಯುಜಿ ಪ್ರಶ್ನೆಪತ್ರಿಕೆ ಸೋರಿಕೆ, ಸಿಬಿಎಸ್‌ಇ ಪರೀಕ್ಷಾ ವ್ಯವಸ್ಥೆಯ ಲೋಪಗಳನ್ನು ಖಂಡಿಸಿದ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಸಂಸ್ಥಾಪಕ ಅಭಿಜೀತ್ ದೀಪ್ಕೆ, ‘ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡುವವರೆಗೂ ಹೋರಾಟ ನಿಲ್ಲಿಸುವುದಿಲ್ಲ’ ಎಂದು ಎಚ್ಚರಿಕೆ ನೀಡಿದ್ದಾರೆ.

ತವರಿಗೆ ಬಂದಿಳಿದ ಬಳಿಕ ಪತ್ರಕರ್ತರ ಜೊತೆ ಮಾತನಾಡಿದ ಅವರು, ‘ಶನಿವಾರ ನವದೆಹಲಿಯ ಜಂತರ್‌-ಮಂತರ್‌ನಲ್ಲಿ ಸಿಜೆಪಿ ಬ್ಯಾನರ್ ಅಡಿಯಲ್ಲಿ ಆಯೋಜಿಸಿದ್ದ ಪ್ರತಿಭಟನೆಯು ದೊಡ್ಡ ಮಟ್ಟದಲ್ಲಿ ಯಶಸ್ಸು ಕಂಡಿದ್ದು, 7 ಸಾವಿರದಷ್ಟು ಮಂದಿ ಭಾಗಿಯಾಗಿದ್ದಾರೆ. ಈ ಆಂದೋಲನವನ್ನು ದೇಶದಾದ್ಯಂತ ವಿಸ್ತರಿಸಲಾಗುವುದು’ ಎಂದು ಎಚ್ಚರಿಕೆ ನೀಡಿದ್ದಾರೆ.

ನೀಟ್, ಸಿಬಿಎಸ್‌ಇ, ಸಿಯುಇಟಿ, ಎಸ್‌ಎಸ್‌ಇ ಪರೀಕ್ಷೆಗಳಲ್ಲಿ ನಡೆದ ಲೋಪಕ್ಕೆ ಸಂಬಂಧಿಸಿ ಹೊಣೆಗಾರಿಕೆಗೆ ಒತ್ತಾಯಿಸಿ, ಯುವ ಸಮುದಾಯವು ಸಾಮಾಜಿಕ ಜಾಲತಾಣಗಳಲ್ಲಿ ‘ಸಿಜೆಪಿ’ ಹೆಸರಿನಲ್ಲಿ ಹೋರಾಟ ಆರಂಭಿಸಿದೆ.

ಭಾನುವಾರ ಬೆಳಿಗ್ಗೆ ತಮ್ಮ ನಿವಾಸಕ್ಕೆ ತಲುಪಿದ ದೀಪ್ಕೆ ಅವರನ್ನು ಕುಟುಂಬದ ಸದಸ್ಯರು ಸ್ವಾಗತಿಸಿದರು.

‘ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡುವವರೆಗೂ ಸಿಜೆಪಿಯೂ ತನ್ನ ಹೋರಾಟ ನಿಲ್ಲಿಸುವುದಿಲ್ಲ’ ಎಂದು ಪ್ರಕಟಿಸಿದರು.


ದೀಪ್ಕೆ ಮನೆಗೆ ಭದ್ರತೆ ಹೆಚ್ಚಳ

ಸಿಜೆಪಿ ಹೋರಾಟದ ಬಳಿಕ ದೀಪ್ಕೆ ಮನೆಗೆ ನೀಡಿದ್ದ ಭದ್ರತೆಯನ್ನು ಹೆಚ್ಚಿಸಲಾಗಿದೆ. ‘ಭಾನುವಾರವೇ ಅವರ ಮನೆಗೆ ನೀಡಿದ್ದ ಭದ್ರತೆಯನ್ನು ಹೆಚ್ಚಿಸಿದ್ದೇವೆ. ಈ ಹಿಂದೆ 11 ಮಂದಿ ಸಿಬ್ಬಂದಿಯನ್ನು ಅವರ ಮನೆಗೆ ನಿಯೋಜಿಸಲಾಗಿತ್ತು. ಇದೀಗ ಈ ಸಂಖ್ಯೆಯನ್ನು 15ಕ್ಕೆ ಏರಿಕೆ ಮಾಡಲಾಗಿದೆ. ಸ್ಥಳೀಯ ಠಾಣೆಯ ಪೊಲೀಸರ ಜೊತೆಗೆ ನಗರ ಪೊಲೀಸ್ ಕಚೇರಿಯಿಂದಲೂ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ’ ಎಂದು ವಾಲುಜ್ ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಷ್ಟ್ರಪ್ರಶಸ್ತಿ ಪುರಸ್ಕೃತ, ಮಲಯಾಳ ಸಿನಿಮಾ ಕ್ಷೇತ್ರದ ಬಹುಮುಖ ಪ್ರತಿಭೆ

ನಟ ಸಲೀಂ ಇನ್ನು ನೆನಪು

ಕೊಚ್ಚಿ (ಪಿಟಿಐ): ಮಲಯಾಳದ ಖ್ಯಾತ ನಟ ಹಾಗೂ ಮಿಮಿಕ್ರಿ ಕಲಾವಿದ ಸಲೀಂ ಕುಮಾರ್ (56) ಅವರು ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಶನಿವಾರ ರಾತ್ರಿ ಅನಾರೋಗ್ಯದಿಂದ ಕೊನೆಯುಸಿರೆಳೆದಿದ್ದಾರೆ.



ಸಲೀಂ ಕುಮಾರ್

ಮಲಯಾಳ ಸಿನಿಮಾ ಕ್ಷೇತ್ರದ ಬಹುಮುಖ ನಟರಾಗಿ ಗುರುತಿಸಿಕೊಂಡಿದ್ದ ಅವರು ಕೆಲವು ವರ್ಷಗಳ ಹಿಂದೆ ಯಕೃತ್ತಿನ ಕಸಿ ಮಾಡಿಕೊಂಡಿದ್ದರು. ಶನಿವಾರ ಮತ್ತೆ ಅನಾರೋಗ್ಯ ಕಾಣಿಸಿಕೊಂಡಿದ್ದರಿಂದ ಆಸ್ಪತ್ರೆಗೆ ದಾಖಲಾಗಿದ್ದರು.

ಕೃತಕ ಉಸಿರಾಟ ವ್ಯವಸ್ಥೆಯ ನೆರವಿನಲ್ಲಿದ್ದ ಅವರು ಶನಿವಾರ ರಾತ್ರಿ 10.40ರ ಸುಮಾರಿಗೆ ಕೊನೆಯುಸಿರೆಳೆದರು ಎಂದು ಅವರ ಕುಟುಂಬಸ್ಥರು ತಿಳಿಸಿದ್ದಾರೆ.

ಮೃತರಿಗೆ ಪತ್ನಿ ಸುನೀತಾ, ಇಬ್ಬರು ಗಂಡುಮಕ್ಕಳು ಇದ್ದಾರೆ.

ಸಲೀಂ ಅವರು 1990ರ ದಶಕದಲ್ಲಿ ಸಿನಿಮಾ ಪ್ರವೇಶಕ್ಕೂ ಮುನ್ನ ತಮ್ಮದೇ ತಂಡ ರಚಿಸಿಕೊಂಡು ರಾಜ್ಯ ಮಾತ್ರವಲ್ಲದೇ ಹೊರದೇಶಗಳಲ್ಲಿಯೂ ಮಿಮಿಕ್ರಿ, ಕಾಮಿಡಿ ಕಾರ್ಯಕ್ರಮ ನಡೆಸಿಕೊಡುತ್ತಿದ್ದರು. ರಂಗಭೂಮಿ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದರು.

1997ರಲ್ಲಿ ಸಿದ್ದೀಕ್– ಸಮೀರ್ ನಿರ್ದೇಶನದ ‘ಇಷ್ಟಮಾಣ್ ನೂರು ವಟ್ಟಂ’ ಮೂಲಕ ಸಿನಿಮಾ ಕ್ಷೇತ್ರ ಪ್ರವೇಶಿಸಿದ್ದ ಅವರು, 2000ನೇ ಇಸವಿಯ ನಂತರ ಹಾಸ್ಯ ಪಾತ್ರಗಳ ಮೂಲಕ ಸಿನಿಕ್ಷೇತ್ರದಲ್ಲಿ ಖ್ಯಾತಿ ಪಡೆದರು. ‘ಸತ್ಯಮೇವ ಜಯತೇ’ಯ ಮೂಲಕ ಮಲಯಾಳ ಸಿನಿಮಾ ಕ್ಷೇತ್ರದ ಪ್ರಮುಖ ಕಾಮಿಡಿ ಕಲಾವಿದರಾಗಿ ಮನೆಮಾತಾದರು.

ನಿರ್ದೇಶಕ ಕಮಲ್ ನಿರ್ದೇಶನದ ‘ಪೆರುಮಳಕ್ಕಾಲಂ’ ಸಿನಿಮಾವು ಅವರ ವೃತ್ತಿಜೀವನಕ್ಕೆ ಬಹುದೊಡ್ಡ ತಿರುವು ನೀಡಿತು. 2005ರಲ್ಲಿ ತೆರೆಕಂಡ ‘ಅಚ್ಚನ್‌ಉರಂಗಾತ ವೀಡ್’ ಸಿನಿಮಾಕ್ಕೆ ರಾಜ್ಯ ಚಲನಚಿತ್ರ ಪ್ರಶಸ್ತಿ ಹಾಗೂ 2010ರಲ್ಲಿ ಬಿಡುಗಡೆಯಾದ ‘ಆದಾಮಿಂಡೆ ಮಗನ್ ಅಬು’ ಸಿನಿಮಾದಲ್ಲಿನ ಪಾತ್ರಕ್ಕೆ ರಾಜ್ಯ ಪ್ರಶಸ್ತಿ ಹಾಗೂ ರಾಷ್ಟ್ರ ಪ್ರಶಸ್ತಿಗೆ ಭಾಜನರಾಗಿದ್ದರು.

ಮೂರು ದಶಕಗಳಲ್ಲಿ 300ಕ್ಕೂ ಅಧಿಕ ಸಿನಿಮಾಗಳಲ್ಲಿ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲಿಸಿದ್ದರು. 2025ರಲ್ಲಿ ಬಂದ ‘ಭ ಭ ಬ’ ಅವರು ನಟಿಸಿದ ಕೊನೆಯ ಸಿನಿಮಾ. ಇದಲ್ಲದೇ ಬರಹಗಾರರಾಗಿ, ನಿರ್ದೇಶಕರಾಗಿಯೂ ಗುರುತಿಸಿಕೊಂಡಿದ್ದರು.

ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟವನ್ನು ಬೆಂಬಲಿಸಿದ್ದರು.

ಉತ್ತರ ಪರವೂರ್‌ನಲ್ಲಿರುವ ಟೌನ್‌ಹಾಲ್‌ನಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಸರ್ಕಾರಿ ಗೌರವಗಳೊಂದಿಗೆ ಅವರ ಜಮೀನಿನಲ್ಲಿ ಅಂತಿಮ ಸಂಸ್ಕಾರ ನೆರವೇರಿತು.

ಸುತಾರ್ ಮೋಡಿ: ಮಂಕಾದ ಅಫ್ಗನ್

ಟೆಸ್ಟ್ ಕ್ರಿಕೆಟ್: ವಾಷಿಂಗ್ಟನ್ ಅರ್ಧಶತಕ
• ಆರು ವಿಕೆಟ್ ಗೊಂಚಲು ಪಡೆದ ಸಲೀಂ

• ಮಧು ಜವಳಿ

ಮುಲ್ಲನಪುರ: ಪ್ರವಾಸಿ ಅಫ್ಗಾನಿಸ್ತಾನ ತಂಡವು ಇಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದ ಎರಡನೇ ದಿನದಾಟದಲ್ಲಿಯೂ ಅಂಪೈರ್ ತೀರ್ಪು ಮರುಪರಿಶೀಲನೆ ವ್ಯವಸ್ಥೆಯನ್ನು ಬಳಸಿಕೊಳ್ಳುವಲ್ಲಿ ಎಡವಿತು. ಇದರಿಂದಾಗಿ ಆತಿಥೇಯ ಬ್ಯಾಟರ್‌ಗಳು ಬೃಹತ್ ಮೊತ್ತ ಕಲೆಹಾಕಲು ಸಾಧ್ಯವಾಯಿತು.

ಪಂದ್ಯದ ಮೊದಲ ದಿನದಾಟವಾದ ಶನಿವಾರ ಕೆ.ಎಲ್. ರಾಹುಲ್ 16 ರನ್ ಗಳಿಸಿದ್ದಾಗ ಚೆಂಡು ಬ್ಯಾಟ್ ಅಂಚು ಸವರಿ ವಿಕೆಟ್‌ಕೀಪರ್ ಕೈಗವಸು ಸೇರಿತ್ತು. ಆದರೆ ಅಂಪೈರ್ ಔಟ್ ಕೊಡಲಿಲ್ಲ. ಅಫ್ಗನ್ ತಂಡವು ಮರುಪರಿಶೀಲನೆ ಮನವಿ ತೆಗೆದುಕೊಳ್ಳಲಿಲ್ಲ. ರಾಹುಲ್ ಶತಕ ಗಳಿಸಿದರು. ಭಾನುವಾರ ಭಾರತ ತಂಡದ ನಾಯಕ ಶುಭಮನ್ ಗಿಲ್ ಅವರು ಎಲ್‌ಬಿಡಬ್ಲ್ಯು ಆಗಿರುವುದನ್ನು ಮರುಪರಿಶೀಲನೆ ಮಾಡಲು ವೇಗದ ಬೌಲರ್ ಅಜ್ಮತ್‌ಉಲ್ಲಾ ಒಮರ್‌ಝೈ ಅವರ ಸಲಹೆಯನ್ನು ನಾಯಕ ಹಶ್ಮತ್ ಉಲ್ಲಾ ಶಾಹಿದಿ ತಿರಸ್ಕರಿಸಿದರು. ಆದರೆ ಟಿ.ವಿ. ರೀಪ್ಲೆಯಲ್ಲಿ ಗಿಲ್ ಎಲ್‌ಬಿ ಬಲೆಗೆ ಬಿದ್ದಿದ್ದು ಸ್ಪಷ್ಟವಾಗಿತ್ತು. ಅದರ ನಂತರದ ಎಸೆತದಲ್ಲಿಯೇ ರಿಷಭ್ ಪಂತ್ ಬ್ಯಾಟ್ ಅಂಚು ಸವರಿದ್ದ ಚೆಂಡು ವಿಕೆಟ್‌ಕೀಪರ್ ಅಫ್ಸರ್ ಝುಝೈ ಕ್ಯಾಚ್ ಮಾಡಿದ್ದರು. ಆದರೆ ಚೆಂಡು ಪ್ಯಾಡ್ ಉಜ್ಜಿಕೊಂಡು ಹೋಗಿದೆ ಎಂಬ ಭಾವನೆಯಿಂದ ಅಪೀಲ್ ಮಾಡಲಿಲ್ಲ.

ಇದರಿಂದಾಗಿ ಬ್ಯಾಟಿಂಗ್ ಸ್ನೇಹಿ ಪಿಚ್‌ನಲ್ಲಿ ಗಿಲ್ (126; 177ಎ, 4X15, 6X1) ಮೊದಲ ದಿನದ ಸ್ಕೋರ್‌ಗೆ ಮತ್ತೆ 19 ರನ್ ಸೇರಿಸಿದರು. ಪಂತ್ (81; 121ಎ) 26 ರನ್ ಜೋಡಿಸಿದರು. ಆದರೆ ಪಂತ್ ಶತಕ ಮುಟ್ಟುವಲ್ಲಿ ವಿಫಲರಾದರು. ತಂಡದ ಮೊತ್ತವು 400ರ ಗಡಿ ದಾಟಿದ ನಂತರ ಗಿಲ್ ಮತ್ತು ಪಂತ್ ಇಬ್ಬರೂ ಔಟಾದರು. ಆದರೆ ನಂತರ ವಾಷಿಂಗ್ಟನ್ ಸುಂದರ್ (ಔಟಾಗದೆ 52) ಅಜೇಯ ಅರ್ಧಶತಕ ಗಳಿಸಿದರು. ಪದಾರ್ಪಣೆ ಟೆಸ್ಟ್ ಆಡಿದ ಮಾನವ್ ಸುತಾರ್ (28; 41ಎ) ಮತ್ತು ಮೊಹಮ್ಮದ್ ಸಿರಾಜ್ (22; 12ಎ) ಕೂಡ ಒಂದಷ್ಟು ರನ್ ಕಾಣಿಕೆ ನೀಡಿದರು. ಇದರಿಂದಾಗಿ ತಂಡವು 127 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 564 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಬ್ಯಾಟರ್‌ಗಳ ಭರಾಟೆಯ ನಡುವೆಯೂ ಅಫ್ಗನ್ ವೇಗಿ ಮೊಹಮ್ಮದ್ ಸಲೀಂ (140ಕ್ಕೆ6) ಮಿಂಚಿದರು.

ಇದಕ್ಕುತ್ತರವಾಗಿ ಪ್ರವಾಸಿ ತಂಡವು 39.5 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 113 ರನ್ ಗಳಿಸಿತು. ಎಡಗೈ ಸ್ಪಿನ್ನರ್ ಮಾನವ್ (21ಕ್ಕೆ3) ತಮ್ಮ ಚೊಚ್ಚಲ ಪಂದ್ಯವನ್ನು ಅವಿಸ್ಮರಣೀಯವಾಗಿಸಿಕೊಂಡರು. ಅನುಭವಿ ಸ್ಪಿನ್ನರ್‌ಗಳಾದ ಕುಲದೀಪ್ ಯಾದವ್ ಮತ್ತು ವಾಷಿಂಗ್ಟನ್ ಅವರೊಂದಿಗೆ ಬೌಲಿಂಗ್ ಮಾಡಿದ ಸುತಾರ್ ಅವರಿಗೆ ವಿಕೆಟ್ ಒಲಿದವು. ಆದರೆ ಕುಲದೀಪ್ ತಮ್ಮ ನೈಜ ಸಾಮರ್ಥ್ಯ ತೋರುವಲ್ಲಿ ಯಶಸ್ವಿಯಾಗಲಿಲ್ಲ.

ರಾಜಸ್ಥಾನದ ಕ್ರಿಕೆಟಿಗ ಮಾನವ್ ಶಾಸ್ತ್ರೀಯ ಶೈಲಿಯಲ್ಲಿ ಬೌಲಿಂಗ್ ಮಾಡಿ ಪ್ರಭಾವಿಯಾದರು. ಪಿಚ್ ಸತ್ವ ಅರಿತು ಬುದ್ಧಿವಂತಿಕೆಯಿಂದ ಎಸೆತಗಳನ್ನು ಹಾಕಿದರು. 23 ವರ್ಷ ವಯಸ್ಸಿನ ಮಾನವ್ ಎಸೆತಗಳಲ್ಲಿ ವೈವಿಧ್ಯತೆ, ತಿರುವು ಮತ್ತು ಚುರುಕಾದ ಚಲನೆ ಇದ್ದವು. ಅಫ್ಗನ್ ಬ್ಯಾಟರ್‌ಗಳ ಅನುಭವದ ಕೊರತೆ ಮತ್ತು ಅವಸರದ ಹೊಡೆತಗಳನ್ನು ಆಡುವ ಪ್ರಯತ್ನಗಳು ದುಬಾರಿಯಾದವು.

ವೇಗಿ ಪ್ರಸಿದ್ಧ ಕೃಷ್ಣ (27ಕ್ಕೆ2) ಅವರು ಉತ್ತಮ ಬೌಲಿಂಗ್ ಮಾಡಿದರು. ವೇಗದ ಜೊತೆಗೆ ನಿಖರವಾದ ಲೈನ್ ಮತ್ತು ಲೆಂಗ್ತ್ ನಿರ್ವಹಿಸಿದರು. ಅವರು ಎರಡು ವಿಕೆಟ್ ಪಡೆದರು (2/27) ವೇಗದ ಬೌಲರ್ ಆರಂಭಿಕ ಆಟಗಾರ ಸಾದಿಕ್‌ಉಲ್ಲಾ ಅಟಲ್ ಅವರನ್ನು ಔಟ್ ಮಾಡಿದರು, ನಾಯಕ ಶಾಹಿದಿ (20 ರನ್) ಅವರನ್ನೂ ಎಲ್‌ಬಿಡಬ್ಲ್ಯು ಬಲೆಗೆ ಬೀಳಿಸಿದರು.



ಭಾರತ ತಂಡದ ಸ್ಪಿನ್ನರ್ ಮಾನವ್ ಸುತಾರ್ ಬೌಲಿಂಗ್ ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ 8ಕ್ಕೆ 564 ಡಿಕ್ಲೇರ್ಡ್ (127 ಓವರ್‌ಗಳಲ್ಲಿ) (ಶನಿವಾರ 3ಕ್ಕೆ 368)
ಗಿಲ್ ಸಿ ಅಫ್ಸರ್ ಬಿ ಸಲೀಂ 126 (177ಎ, 4x15, 6x1)
ಪಂತ್ ಸಿ ಒಮರ್‌ಝೈ ಬಿ ಶಾಹಿದಿ 81 (121ಎ, 4x6, 6x3)
ಜುರೇಲ್ ಬಿ ಸಲೀಂ 19 (20ಎ, 4x4)
ವಾಷಿಂಗ್ಟನ್ ಔಟಾಗದೇ 52 (68ಎ, 4x5, 6x1)
ಮಾನವ್ ಸಿ ಅಫ್ಸರ್ ಬಿ ಸಲೀಂ 28 (41ಎ, 4x2, 6x2)
ಸಿರಾಜ್ ಬಿ ಸಲೀಂ 22 (12ಎ, 4x4, 6x1)
ಕುಲದೀಪ್ ಯಾದವ್ ಔಟಾಗದೇ 9 (26ಎ, 4x1)
ಇತರೆ: 22 (ಬೈ 4, ಲೆಗ್‌ಬೈ 13, ನೋಬಾಲ್ 4, ವೈಡ್ 1)
ವಿಕೆಟ್ ಪತನ: 4-416 (ಶುಭಮನ್ ಗಿಲ್, 95.5), 5-452 (ಧ್ರುವ ಜುರೇಲ್, 101.5), 6-456 (ರಿಷಭ್ ಪಂತ್, 102.4), 7-510 (ಮಾನವ್ ಸುತಾರ್, 116.5), 8-540 (ಮೊಹಮ್ಮದ್ ಸಿರಾಜ್, 120.4)
ಬೌಲಿಂಗ್: ಝಿಯಾವುರ್ ರೆಹಮಾನ್ 24-2-91-1; ಅಜ್ಮತ್‌ವುಲ್ಲಾ ಒಮರ್‌ಝೈ 22-5-67-0; ಮೊಹಮ್ಮದ್ ಸಲೀಂ 27-3-140-6; ನಾಂಗೆಯಾಲಿಯಾ ಖರೋಟೆ 23-0-115-0; ಅಬ್ದುಲ್ ಮಲಿಕ್ 7-0-43-0; ಹಷ್ಮತ್‌ಉಲ್ಲಾ ಶಾಹಿದಿ 24-1-91-1
ಅಫ್ಗಾನಿಸ್ತಾನ: 5ಕ್ಕೆ 113 (39.5 ಓವರ್‌ಗಳಲ್ಲಿ)
ಮಲಿಕ್ ಸಿ ಸಿರಾಜ್ ಬಿ ಮಾನವ್ 16 (18ಎ, 4x3)
ಸಾದಿಕ್‌ಉಲ್ಲಾ ಬಿ ಪ್ರಸಿದ್ಧ 17 (27ಎ, 4x3)
ಗುರ್ಬಾಜ್ ಸಿ ಸಾಯಿ ಬಿ ಮಾನವ್ 12 (40ಎ, 4x1, 6x1)
ರೆಹಮತ್ ಶಾ ಔಟಾಗದೇ 43 (81ಎ, 4x6, 6x1)
ಶಾಹಿದಿ ಎಲ್‌ಬಿಡಬ್ಲ್ಯು ಬಿ ಪ್ರಸಿದ್ಧ 20 (48ಎ, 4x4)
ಅಫ್ಸರ್ ಸಿ ಮತ್ತು ಬಿ ಮಾನವ್ 3 (26ಎ)
ಇತರೆ: 2 (ನೋಬಾಲ್ 1, ವೈಡ್ 1)
ವಿಕೆಟ್ ಪತನ: 1-28 (ಅಬ್ದುಲ್ ಮಲಿಕ್, 5.4), 2-40 (ಸಾದಿಕ್‌ಉಲ್ಲಾ ಅಟಲ್, 8.4), 3-62 (ರೆಹಮಾನುಲ್ಲಾ ಗುರ್ಬಾಜ್, 19.2), 4-98 (ಹಶ್ಮತ್‌ಉಲ್ಲಾ ಶಾಹಿದಿ, 32.2), 5-113 (ಅಫ್ಸರ್ ಝುಝೈ, 39.5)
ಬೌಲಿಂಗ್: ಮೊಹಮ್ಮದ್ ಸಿರಾಜ್ 6-1-24-0, ಪ್ರಸಿದ್ಧ ಕೃಷ್ಣ 7-0-27-2, ಮಾನವ್ ಸುತಾರ್ 15.5-7-21-3, ಕುಲದೀಪ್ ಯಾದವ್ 7-0-29-0, ವಾಷಿಂಗ್ಟನ್ ಸುಂದರ್ 4-0-12-0



ಅರ್ಧಶತಕ ದಾಖಲಿಸಿದ ವಾಷಿಂಗ್ಟನ್ ಸುಂದರ್

‘ಟೈ ಟೆಸ್ಟ್’ ಅಂಪೈರ್ ವಿಕ್ರಂ ರಾಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೆಸ್ಟ್ ಕ್ರಿಕೆಟ್‌ನ ದೀರ್ಘ ಇತಿಹಾಸದಲ್ಲಿ ಇದುವರೆಗೆ ಎರಡು ಪಂದ್ಯಗಳು ಮಾತ್ರ ಟೈ ಆಗಿವೆ. ಅದರಲ್ಲೊಂದು ಭಾರತದಲ್ಲಿ ನಡೆದಿತ್ತು.

ಚೆನ್ನೈನ (ಆಗ ಮದ್ರಾಸ್) ಚೆಪಾಕ್ ಕ್ರೀಡಾಂಗಣದಲ್ಲಿ 1986ರಲ್ಲಿ ಆಯೋಜಿಸಲಾಗಿದ್ದ ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಆ ಪಂದ್ಯದ ಕುರಿತ ಚರ್ಚೆ ನಡೆದಾಗಲೆಲ್ಲ ನೆನಪಿಗೆ ಬರುವ ಹೆಸರು ಅಂಪೈರ್, ಕನ್ನಡಿಗ ವಿ. ವಿಕ್ರಂ ರಾಜು ಅವರದ್ದು.

ಆ ಐತಿಹಾಸಿಕ ಟೆಸ್ಟ್ ಪಂದ್ಯದ ಸ್ಕೋರ್ ಕಾರ್ಡ್ ತೆಗೆದು ನೋಡಿದರೆ ಕೆಲವು ಅಮೋಘ ಆಟಗಳು ಗಮನ ಸೆಳೆಯುತ್ತವೆ. ಆದರೆ ಆ ಪಂದ್ಯದಲ್ಲಿ ವಿಕ್ರಂ ರಾಜು ಅವರು ನೀಡಿದ್ದ ಆ ತೀರ್ಪು ಚರ್ಚೆಗೆ ಗ್ರಾಸವಾಗಿತ್ತು.

ಆ ಪಂದ್ಯದಲ್ಲಿ ಆಸ್ಟ್ರೇಲಿಯಾ 5 ವಿಕೆಟ್‌ಗೆ 170 ರನ್ ಗಳಿಸಿ ಡಿಕ್ಲೇರ್ ಮಾಡಿದ ನಂತರ ಭಾರತ ತಂಡವು 348 ರನ್ ಗೆಲುವಿನ ಗುರಿಯನ್ನು ಬೆನ್ನಟ್ಟಿತ್ತು. ಸುನಿಲ್ ಗಾವಸ್ಕರ್ (90 ರನ್) ಮತ್ತು ಕೃಷ್ಣಮಾಚಾರಿ ಶ್ರೀಕಾಂತ್ (39) ಉತ್ತಮ ಆರಂಭವನ್ನೂ ನೀಡಿದ್ದರು. ಆದರೆ ಆಸ್ಟ್ರೇಲಿಯಾದ ಗ್ರೆಗ್ ಮ್ಯಾಥ್ಯೂಸ್ ಮತ್ತು ರೇ ಬ್ರೈಟ್ ಅವರ ಬೌಲಿಂಗ್‌ನಿಂದಾಗಿ ವಿಕೆಟ್‌ಗಳೂ ಪತನವಾಗಿದ್ದವು.

ಕೊನೆಯ ಓವರ್‌ನಲ್ಲಿ ಗೆಲುವಿಗೆ ಕೇವಲ ಒಂದು ರನ್ ಬೇಕಿತ್ತು ಮತ್ತು ಒಂದು ವಿಕೆಟ್ ಬಾಕಿ ಇತ್ತು. ಕ್ರೀಸ್‌ನಲ್ಲಿ ಮಣಿಂದರ್ ಸಿಂಗ್ ಮತ್ತು ನಾನ್ ಸ್ಟ್ರೈಕರ್ ಬದಿಯಲ್ಲಿ ರವಿಶಾಸ್ತ್ರಿ ಇದ್ದರು. ಮ್ಯಾಥ್ಯೂಸ್ ಎಸೆತದಲ್ಲಿ ಮಣಿಂದರ್ ಸಿಂಗ್ ಅವರು ಎಲ್‌ಬಿಡಬ್ಲ್ಯು ಎಂದು ಅಂಪೈರ್ ವಿಕ್ರಂ ರಾಜು ಔಟ್ ನೀಡಿದರು. ಆದರೆ ಸಿಂಗ್ ಮತ್ತು ಶಾಸ್ತ್ರಿ ಅವರು ಚೆಂಡು ಬ್ಯಾಟ್ ಅಂಚು ಸವರಿದೆ ಎಂದು ವಾದಿಸಿದರು. ಆದರೆ ವಿಕ್ರಂ ತಮ್ಮ ನಿರ್ಧಾರಕ್ಕೆ ಬದ್ಧರಾಗಿದ್ದರು.

ಅವತ್ತು ಮಾತ್ರವಲ್ಲ. ಜೀವನದುದ್ದಕ್ಕೂ ಅವರು ತಾವು ನೀಡಿದ ಎಲ್ಲ ಸಂದರ್ಶನಗಳಲ್ಲಿಯೂ ಅಂದಿನ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದರು.

ಅಂಪೈರಿಂಗ್‌ಗೆ ಯಾವುದೇ ತಂತ್ರಜ್ಞಾನದ ನೆರವು ಅಥವಾ ಕ್ಯಾಮೆರಾಗಳು ಇರದ ಕಾಲದಲ್ಲಿ ವಿಕ್ರಂ ಅವರು ಮಾಡಿದ ಕಾರ್ಯ ಸಾಧಾರಣವಲ್ಲ.

‘ಅಂಪೈರ್ ಆಗಿ ಅವರದ್ದು ಅಮೋಘ ಸಾಧನೆ. ಅಂತರರಾಷ್ಟ್ರೀಯ ಅಂಪೈರ್‌ಗಳಿಗೆ ಮಾರ್ಗದರ್ಶಿಯಾಗಿದ್ದರು. ಮೃದುಭಾಷಿ, ಸ್ನೇಹಜೀವಿಯಾಗಿದ್ದರು. ಆರೋಗ್ಯವನ್ನು ಶಿಸ್ತಿನಿಂದ ನಿರ್ವಹಿಸಿಕೊಂಡಿದ್ದರು. ಕಳೆದ ಕೆಲವು ವರ್ಷಗಳಿಂದ ಮೈಸೂರಿಗೆ ಬಂದು ನೆಲೆಸಿದ್ದರು. ಆಗಿನಿಂದಲೂ ನನ್ನ ಅವರ ಒಡನಾಟ ಮತ್ತಷ್ಟು ಗಾಢವಾಗಿತ್ತು’ ಎಂದು ಕರ್ನಾಟಕ ರಣಜಿ ತಂಡದ ಮಾಜಿ ಆಟಗಾರ ವಿಜಯಪ್ರಕಾಶ್ ನೆನಪಿಸಿಕೊಂಡರು.

ಟೈ ಟೆಸ್ಟ್ ಆಗಿ ಆರು ತಿಂಗಳುಗಳ ನಂತರ ಹೈದರಾಬಾದ್‌ನಲ್ಲಿ ಭಾರತ ಎದುರಿನ ಏಕದಿನ ಪಂದ್ಯದಲ್ಲಿ ಪಾಕಿಸ್ತಾನದ ಅಬ್ದುಲ್ ಖಾದೀರ್ ರನ್ ಔಟ್ ಆಗಿದ್ದರು. ಆಗ ಸ್ಕೋರ್ ಟೈ ಆಗಿತ್ತು. ಆದರೆ, ಭಾರತ ತಂಡವು ಕೇವಲ 6 ವಿಕೆಟ್ ಕಳೆದುಕೊಂಡಿತ್ತು. ಪಾಕಿಸ್ತಾನ 7 ವಿಕೆಟ್ ಕಳೆದುಕೊಂಡಿತ್ತು. ಆದ್ದರಿಂದ ಭಾರತ ವಿಜಯಿ ಎಂದು ದಾಖಲೆಪುಟ ಸೇರಿತು. ಆ ಪಂದ್ಯದಲ್ಲಿ ವಿಕ್ರಂ ರಾಜು ಅವರು ಸುನಿತ್ ಘೋಷ್ ಅವರೊಂದಿಗೆ ಫೀಲ್ಡ್ ಅಂಪೈರ್ ಆಗಿದ್ದರು.

ಕನ್ನಡಿಗ ಅಂಪೈರ್ ಇನ್ನು ನೆನಪು ಮಾತ್ರ

ಮೈಸೂರು: ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳಲ್ಲಿ ಅಂಪೈರ್ ಆಗಿ ಕಾರ್ಯನಿರ್ವಹಿಸಿದ್ದ ವಿ.ವಿಕ್ರಂ ರಾಜು (92) ಇಲ್ಲಿನ ಕುವೆಂಪು ನಗರದ ನಿವಾಸದಲ್ಲಿ ಭಾನುವಾರ ಅನಾರೋಗ್ಯದಿಂದ ನಿಧನರಾದರು.


ಜ್ವರದಿಂದ ಬಳಲುತ್ತಿದ್ದ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು. ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗಿ ಬಂದಿದ್ದ ಅವರು ಭಾನುವಾರ ಬೆಳಗ್ಗೆ ಸ್ನಾನದ ಕೋಣೆಯಲ್ಲಿ ಕಾಲುಜಾರಿ ಬಿದ್ದಿದ್ದರು. ತಲೆಗೆ ತೀವ್ರ ಪೆಟ್ಟಾಗಿ ಮೆದುಳಿನಲ್ಲಿ ರಕ್ತಸ್ರಾವವಾಗಿ ಮೃತಪಟ್ಟರು.

1984ರಿಂದ 1988ರವರೆಗೆ ಎರಡು ಟೆಸ್ಟ್ ಹಾಗೂ ಐದು ಏಕದಿನ ಪಂದ್ಯಗಳಲ್ಲಿ ಅಂಪೈರ್ ಆಗಿ ಅವರು ಕಾರ್ಯ ನಿರ್ವಹಿಸಿದ್ದರು. 42 ಪ್ರಥಮ ದರ್ಜೆ ಪಂದ್ಯಗಳಲ್ಲಿ ಅಂಪೈರ್ ಹಾಗೂ ನಾಲ್ಕು ಪಂದ್ಯಗಳಲ್ಲಿ ರೆಫರಿಯಾಗಿ ಕಾರ್ಯ ನಿರ್ವಹಿಸಿದ್ದರು.

ವಿಕ್ರಂ ರಾಜು ಅವರು ‘ಡೆಕ್ಕನ್ ಹೆರಾಲ್ಡ್’, ‘ಪ್ರಜಾವಾಣಿ’ ಪತ್ರಿಕೆಗಳ ಪ್ರಸರಣ ವಿಭಾಗದಲ್ಲಿ 1962 ರಿಂದ 1995ರವರೆಗೆ ಉದ್ಯೋಗಿಯಾಗಿದ್ದರು.

ಮೂಲತಃ ಚಿತ್ರದುರ್ಗ ಜಿಲ್ಲೆಯವರಾದ ಅವರು ಐದಾರು ವರ್ಷಗಳಿಂದ ಪತ್ನಿಯೊಂದಿಗೆ ಮೈಸೂರಿನಲ್ಲಿ ನೆಲೆಸಿದ್ದರು. ಮೊನ್ನೆಯವರೆಗೂ ಲವಲವಿಕೆಯಿಂದಲೇ ಇದ್ದ ಅವರು ಸ್ಥಳೀಯ ಕ್ರಿಕೆಟ್ ಮ್ಯಾಚ್ ವೀಕ್ಷಿಸಿ, ಆಟಗಾರರಿಗೆ ಮಾರ್ಗದರ್ಶನ ನೀಡಿದ್ದರು. ಅವರಿಗೆ ಪತ್ನಿ ದಾಕ್ಷಾಯಿಣಿ, ಪುತ್ರ ಚರಣ್ ಹಾಗೂ ಪುತ್ರಿ ಇದ್ದಾರೆ.

ಸಂಜೆ ಚಾಮುಂಡಿಬೆಟ್ಟದ ತಪ್ಪಲಿನ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಿತು.



ಸಂಕ್ಷಿಪ್ತ ಸುದ್ದಿ

ಟೆಸ್ಟ್: ಇಂಗ್ಲೆಂಡ್‌ಗೆ ಮಣಿದ ಕಿವೀಸ್

ಲಂಡನ್ (ಎಎಫ್‌ಪಿ): ಮಧ್ಯಮ ವೇಗಿ ಗಸ್ ಅಟ್ಕಿನ್ಸನ್ (30ಕ್ಕೆ 5) ಅವರ ಅಮೋಘ ಬೌಲಿಂಗ್ ನೆರವಿನಿಂದ ಇಂಗ್ಲೆಂಡ್ ತಂಡವು ಭಾನುವಾರ ನ್ಯೂಜಿಲೆಂಡ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ 115 ರನ್‌ಗಳ ಗೆಲುವು ದಾಖಲಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ ಆತಿಥೇಯ ತಂಡವು 1-0 ಮುನ್ನಡೆ ಸಾಧಿಸಿತು.

ಗೆಲುವಿಗೆ 254 ರನ್‌ಗಳ ಗುರಿ ಪಡೆದ ಪ್ರವಾಸಿ ತಂಡವು ಅಟ್ಕಿನ್ಸನ್ ಅವರ ದಾಳಿಗೆ ಸಿಲುಕಿತು. ಹೀಗಾಗಿ, ನಾಲ್ಕನೇ ದಿನದ ಭೋಜನ ವಿರಾಮಕ್ಕೂ ಮುನ್ನ 138 ರನ್ ಗಳಿಸಿ ಹೋರಾಟ ಮುಗಿಸಿತು. ಟೆಸ್ಟ್ ಇತಿಹಾಸದಲ್ಲಿ 150 ಪಂದ್ಯಗಳಿಗೆ ಆತಿಥ್ಯ ವಹಿಸಿದ ಮೊದಲ ಕ್ರೀಡಾಂಗಣ ಎಂಬ ಹೆಗ್ಗಳಿಕೆಗೆ ಲಾರ್ಡ್ಸ್ ಪಾತ್ರವಾಯಿತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಇಂಗ್ಲೆಂಡ್: 140; ನ್ಯೂಜಿಲೆಂಡ್: 113. ಎರಡನೇ ಇನಿಂಗ್ಸ್: ಇಂಗ್ಲೆಂಡ್: 56 ಓವರ್‌ಗಳಲ್ಲಿ 226; ನ್ಯೂಜಿಲೆಂಡ್: 40.3 ಓವರ್‌ಗಳಲ್ಲಿ 138 (ಡೆವೊನ್ ಕಾನ್ವೆ 41, ಗ್ಲೆನ್ ಫಿಲಿಪ್ಸ್ ಔಟಾಗದೇ 44; ಗಸ್ ಅಟ್ಕಿನ್ಸನ್ 30ಕ್ಕೆ 5, ಓಲಿ ರಾಬಿನ್ಸನ್ 38ಕ್ಕೆ 2, ಜೋಶ್ ಟಂಗ್ 48ಕ್ಕೆ 2). ಪಂದ್ಯದ ಆಟಗಾರ: ಓಲಿ ರಾಬಿನ್ಸನ್

ಅಥ್ಲೆಟಿಕ್ಸ್: ಯಶಸ್, ಪ್ರಕೃತಿ ಮಿಂಚು

ಬೆಂಗಳೂರು: ಕರ್ನಾಟಕದ ಯಶಸ್ ಪಾಲಾಕ್ಷ ಅವರು ಪುಣೆಯಲ್ಲಿ ನಡೆದ ಇಂಡಿಯನ್ ಅಥ್ಲೆಟಿಕ್ಸ್ ಸರಣಿ (8)ಯಲ್ಲಿ ಪುರುಷರ 400 ಮೀಟರ್ ಹರ್ಡಲ್ಸ್ ಸ್ಪರ್ಧೆಯಲ್ಲಿ 46.82 ಸೆಕೆಂಡ್‌ಗಳಲ್ಲಿ ಕ್ರಮಿಸಿ ವೈಯಕ್ತಿಕ ಶ್ರೇಷ್ಠ ಸಾಧನೆಯೊಂದಿಗೆ ಅಗ್ರಸ್ಥಾನ ಗಳಿಸಿದರು.

ಕರ್ನಾಟಕದ ಸ್ಪ್ರಿಂಟರ್ ಪ್ರಕೃತಿ ಆರ್. ರಾವ್ ಅವರು 100 ಮೀಟರ್ ಓಟವನ್ನು ತಮ್ಮ ವೈಯಕ್ತಿಕ ಅತ್ಯುತ್ತಮ ಸಮಯ 11.65 ಸೆಕೆಂಡುಗಳಲ್ಲಿ ಕ್ರಮಿಸಿದರು. 20 ವರ್ಷದೊಳಗಿನವರ ಏಷ್ಯನ್ ಚಾಂಪಿಯನ್‌ಷಿಪ್ ಪದಕ ವಿಜೇತೆ ನಿಪಮ್ (11.69 ಸೆ.) ಅವರನ್ನು ಹಿಂದಿಕ್ಕಿದರು.

ಲಾಂಗ್‌ಜಂಪ್ ತಾರೆ ಪಾವನಾ ನಾಗರಾಜ್ (5.72 ಮೀ.) ಮತ್ತು ಜಾವೆಲಿನ್ ಥ್ರೋಪಟು ಕರಿಷ್ಮಾ ಸನಿಲ್ (51.81 ಮೀ.) ತಮ್ಮ ವಿಭಾಗಗಳ ಸ್ಪರ್ಧೆಯಲ್ಲಿ ಪಾರಮ್ಯ ಮೆರೆದರು.

ಡೈವಿಂಗ್: ಪೂರ್ವಿಕಾಗೆ ಮೂರು ಚಿನ್ನದ ಪದಕ

ಬೆಂಗಳೂರು: ಡಾಲ್ಫಿನ್ ಅಕ್ವಾಟಿಕ್ಸ್‌ನ ಪೂರ್ವಿಕಾ ವೆಂಕಟೇಶ್ ಅವರು ಕರ್ನಾಟಕ ಈಜು ಸಂಸ್ಥೆಯ ಆಶ್ರಯದಲ್ಲಿ ಕೆನ್ಸಿಂಗ್ಟನ್ ಈಜುಕೊಳದಲ್ಲಿ ಭಾನುವಾರ ನಡೆದ ಎನ್‌ಜೆಆರ್ ಸೀನಿಯರ್ ರಾಜ್ಯ ಅಕ್ವಾಟಿಕ್ ಚಾಂಪಿಯನ್‌ಷಿಪ್‌ನ ಡೈವಿಂಗ್ ಸ್ಪರ್ಧೆಯಲ್ಲಿ ಮೂರು ಚಿನ್ನದ ಪದಕಗಳನ್ನು ಗೆದ್ದರು.

17 ವರ್ಷದ ಪೂರ್ವಿಕಾ ಅವರು ಮಹಿಳೆಯರ 1 ಮೀ. ಸ್ಪ್ರಿಂಗ್ ಬೋರ್ಡ್, 3 ಮೀ. ಸ್ಪ್ರಿಂಗ್ ಬೋರ್ಡ್ ಮತ್ತು ಪ್ಲಾಟ್‌ಫಾರಂ ಸ್ಪರ್ಧೆಯಲ್ಲಿ ಪಾರಮ್ಯ ಮೆರೆದರು. ಪುರುಷರ 1 ಮೀ. ಸ್ಪ್ರಿಂಗ್ ಬೋರ್ಡ್ ನಲ್ಲಿ ಸ್ವಿಮ್‌ಲೈಫ್‌ನ ವರುಣ್ ಸತೀಶ್ ಪೈ, 3 ಮೀ.ಸ್ಪ್ರಿಂಗ್ ಬೋರ್ಡ್‌ನಲ್ಲಿ ಸ್ವಿಮ್ ಲೈಫ್‌ನ ಓಂ ಹೊಂಗೇಕರ್, ಪ್ಲಾಟ್‌ಫಾರಂ ಸ್ಪರ್ಧೆಯಲ್ಲಿ ವಾರಣಾಶಿ ಈಜು ಅಕಾಡೆಮಿಯ ನಂದನ್ ನಾಯ್ಕ್ ಪ್ರಶಸ್ತಿ ಗೆದ್ದರು.

ಫ್ರೆಂಚ್ ಓಪನ್ ಟೆನಿಸ್: ಫ್ಲಾವಿಯೊ ಕೊಬೊಲಿಗೆ ನಿರಾಸೆ
ಜ್ವರೇವ್‌ಗೆ ಚೊಚ್ಚಲ ಗ್ರ್ಯಾನ್‌ಸ್ಲಾಮ್

ಪ್ಯಾರಿಸ್ (ಎಎಫ್‌ಪಿ): ಜರ್ಮನಿಯ ಟೆನಿಸ್ ತಾರೆ ಅಲೆಕ್ಸಾಂಡರ್ ಜ್ವರೇವ್ ಅವರು ಕೊನೆಗೂ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಬರವನ್ನು ನೀಗಿಸಿಕೊಂಡರು. ಭಾನುವಾರ ನಡೆದ ಫ್ರೆಂಚ್ ಓಪನ್ ಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಜ್ವರೇವ್ ಐದು ಸೆಟ್‌ಗಳ ಹೋರಾಟದಲ್ಲಿ ಇಟಲಿಯ ಫ್ಲಾವಿಯೊ ಕೊಬೊಲಿ ಅವರನ್ನು ಸೋಲಿಸಿ ಪುರುಷರ ಸಿಂಗಲ್ಸ್ ಕಿರೀಟವನ್ನು ಮುಡಿಗೇರಿಸಿಕೊಂಡರು.

ಫಿಲಿಪ್ ಶಾಟ್ರಿಯೆ ಅಂಕಣದಲ್ಲಿ ನಡೆದ ರೋಚಕ ಹಣಾಹಣಿಯಲ್ಲಿ 29 ವರ್ಷದ ಜ್ವರೇವ್ 6-1, 4-6, 6-4, 6-7 (5/7), 6-1ರಿಂದ ಹತ್ತನೇ ಶ್ರೇಯಾಂಕದ ಕೊಬೊಲಿ ಅವರನ್ನು ಮಣಿಸಿದರು. ರೋಲ್ಯಾಂಡ್ ಗ್ಯಾರೋಸ್‌ನಲ್ಲಿ 2024ರ ಬಳಿಕ ಎರಡನೇ ಬಾರಿ ಪ್ರಶಸ್ತಿ ಸುತ್ತು ತಲುಪಿದ್ದ ಅನುಭವಿ ಆಟಗಾರನಿಗೆ ನಿರಾಸೆಯಾಗಲಿಲ್ಲ.

1996ರ ನಂತರ ಗ್ರ್ಯಾನ್‌ಸ್ಲಾಮ್ ಗೆದ್ದ ಜರ್ಮನಿಯ ಮೊದಲ ಆಟಗಾರ ಎಂಬ ಹಿರಿಮೆಗೆ ಜ್ವರೇವ್ ಪಾತ್ರರಾದರು. ಮೂರು ದಶಕಗಳ ಹಿಂದೆ ಬೋರಿಸ್ ಬೆಕರ್ ಅವರು ಆಸ್ಟ್ರೇಲಿಯನ್ ಓಪನ್ ಪ್ರಶಸ್ತಿ ಗೆದ್ದಿದ್ದರು. ಒಂದು ವೇಳೆ ಕೊಬೊಲಿ ಪ್ರಶಸ್ತಿ ಗೆಲ್ಲುತ್ತಿದ್ದರೆ, 50 ವರ್ಷಗಳ ನಂತರ ಫ್ರೆಂಚ್ ಓಪನ್ ಗೆದ್ದ ಇಟಲಿಯ ಮೊದಲ ಆಟಗಾರ ಎಂಬ ಹಿರಿಮೆ ಅವರದಾಗುತ್ತಿತ್ತು.

ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಜ್ವರೇವ್ ಅವರಿಗೆ ಇದು ನಾಲ್ಕನೇ ಫೈನಲ್ ಆಗಿತ್ತು. ಎರಡು ವರ್ಷಗಳ ಹಿಂದೆ ಫ್ರೆಂಚ್ ಓಪನ್‌ನಲ್ಲಿ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಅವರಿಗೆ ಸೋತಿದ್ದರು. 2020ರ ಅಮೆರಿಕ ಓಪನ್ ಮತ್ತು 2025ರ ಆಸ್ಟ್ರೇಲಿಯಾ ಓಪನ್ ಫೈನಲ್‌ನಲ್ಲೂ ಎಡವಿದ್ದರು.

ಕಳೆದ ಬಾರಿಯ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ (ಸ್ಪೇನ್) ಗಾಯದ ಕಾರಣದಿಂದ ಟೂರ್ನಿಯಿಂದ ಹಿಂದೆ ಸರಿದಿದ್ದರು. ಅಗ್ರ ಶ್ರೇಯಾಂಕದ ಯಾನಿಕ್ ಸಿನ್ನರ್ (ಇಟಲಿ), ಮೂರನೇ ಶ್ರೇಯಾಂಕದ ನೊವಾಕ್ ಜೊಕೊವಿಕ್ (ಸರ್ಬಿಯಾ) ಅವರು ಇಲ್ಲಿ ಆರಂಭಿಕ ಹಂತದಲ್ಲೇ ಹೊರಬಿದ್ದಿದ್ದರು. ಹೀಗಾಗಿ, ಜ್ವರೇವ್ ಅವರಿಗೆ ಚೊಚ್ಚಲ ಗ್ರ್ಯಾನ್‌ಸ್ಲಾಮ್ ಕಿರೀಟದ ಕನಸನ್ನು ನನಸು ಮಾಡುವ ಸುವರ್ಣಾವಕಾಶ ದೊರೆಯಿತು. ಅವರು ಸೆಮಿಫೈನಲ್‌ನಲ್ಲಿ 7-5, 6-2, 3-6, 6-3 ರಿಂದ 26ನೇ ಶ್ರೇಯಾಂಕದ ಯಾಕುಬ್ ಮೆನ್ಸಿಕ್ ಅವರನ್ನು ಸೋಲಿಸಿದ್ದರು.

24 ವರ್ಷದ ಕೊಬೊಲಿ ಫೈನಲ್ ಪಂದ್ಯದಲ್ಲಿ ಎರಡನೇ ಮತ್ತು ನಾಲ್ಕನೇ ಸೆಟ್‌ಗಳಲ್ಲಿ ಮೇಲುಗೈ ಸಾಧಿಸಿ, ಜ್ವರೇವ್ ಅವರನ್ನು ಒತ್ತಡಕ್ಕೆ ಸಿಲುಕಿಸಿದ್ದರು. ಆದರೆ, ನಿರ್ಣಾಯಕ ಸೆಟ್‌ನಲ್ಲಿ ಲಯ ತಪ್ಪಿದರು. ಅವರು ಫೈನಲ್ ತಲುಪುವ ಹಾದಿಯಲ್ಲಿ ನಾಲ್ಕನೇ ಶ್ರೇಯಾಂಕದ ಆಟಗಾರ ಫೆಲಿಕ್ಸ್ ಊಜರ್ ಆ್ಯಲಿಯಾಸಿಮ್ ಅವರಿಗೆ ಆಘಾತ ನೀಡಿದ್ದರು. ಸೆಮಿಫೈನಲ್‌ನಲ್ಲಿ ಅವರು ಸ್ವದೇಶದ ಮ್ಯಾಟಿಯೊ ಅರ್ನಾಲ್ಡಿ ಅವರಿಂದ ವಾಕ್ ಓವರ್ ಪಡೆದಿದ್ದರು.



ಟ್ರೋಫಿಗೆ ಮುತ್ತಿಕ್ಕಿದ ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ಎಎಫ್‌ಪಿ ಚಿತ್ರ

ಕ್ಯಾತರಿನಾ–ಟೌನ್‌ಸೆಂಡ್ ಜೋಡಿಗೆ ಪ್ರಶಸ್ತಿ

ಪ್ಯಾರಿಸ್ (ಎಎಫ್‌ಪಿ): ಅಗ್ರಶ್ರೇಯಾಂಕದ ಜೋಡಿ ಕ್ಯಾತರಿನಾ ಸಿನಿಯಕೋವಾ ಮತ್ತು ಟೇಲರ್ ಟೌನ್‌ಸೆಂಡ್ ಅವರು ಮಹಿಳೆಯರ ಡಬಲ್ಸ್ ಪ್ರಶಸ್ತಿಯನ್ನು ಗೆದ್ದುಕೊಂಡರು.

ಝೆಕ್ ರಿಪಬ್ಲಿಕ್– ಅಮೆರಿಕನ್ ಜೋಡಿಯು 6-2, 7-5ರಿಂದ ಎರಡನೇ ಶ್ರೇಯಾಂಕದ ಅನ್ನಾ ಡ್ಯಾನಿಲಿನಾ (ಕಜಾಕಸ್ತಾನ) ಮತ್ತು ಅಲೆಕ್ಸಾಂಡ್ರಾ ಕ್ರುನಿಕ್ (ಸರ್ಬಿಯಾ) ಅವರನ್ನು ನೇರ ಸೆಟ್‌ಗಳಿಂದ ಮಣಿಸಿತು.

ವಿದೇಶ ಪ್ರವಾಸಕ್ಕೆ ಸೂರ್ಯವಂಶಿ ಜತೆ ಪಾಲಕರಿಗೆ ಅವಕಾಶ



ವೈಭವ್ ಸೂರ್ಯವಂಶಿ

ಮುಂಬೈ (ಎಎಫ್‌ಪಿ): ವಿದೇಶಗಳಿಗೆ ಪ್ರವಾಸ ಮಾಡುವ ಭಾರತ ತಂಡದಲ್ಲಿ ಆಡುವ ವೈಭವ್ ಸೂರ್ಯವಂಶಿಯೊಂದಿಗೆ ಅವರ ಪಾಲಕರ ಪ್ರಯಾಣಕ್ಕೆ ಅನುಮತಿ ನೀಡಲಾಗಿದೆ.


15 ವರ್ಷ ವಯಸ್ಸಿನ ವೈಭವ್ ಮುಂಬರುವ ಸರಣಿಗಳಲ್ಲಿ ಐರ್ಲೆಂಡ್, ಇಂಗ್ಲೆಂಡ್ ಪ್ರವಾಸ ಹಾಗೂ ಏಷ್ಯನ್ ಕ್ರೀಡಾಕೂಟದಲ್ಲಿ ಆಡುವ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಈಚೆಗೆ ಮುಕ್ತಾಯವಾದ ಐಪಿಎಲ್ ಟೂರ್ನಿಯಲ್ಲಿ ಅವರು ‘ಆರೆಂಜ್ ಕ್ಯಾಪ್’ ಗಳಿಸಿದ್ದರು. ರಾಜಸ್ಥಾನ ರಾಯಲ್ಸ್ ತಂಡದ ಪರ 776 ರನ್ ಕಲೆಹಾಕಿದ್ದರು.

ಸದ್ಯ ಶ್ರೀಲಂಕಾದಲ್ಲಿ ನಡೆಯುತ್ತಿರುವ ತ್ರಿಕೋನ ಸರಣಿಯಲ್ಲಿ ಆಡುತ್ತಿರುವ ಭಾರತ ‘ಎ’ ಬಳಗದಲ್ಲಿ ವೈಭವ್ ಇದ್ದಾರೆ.

‘ವೈಭವ್ ತಂದೆಯು ಭಾರತ ಎ ತಂಡದೊಂದಿಗೆ ಶ್ರೀಲಂಕಾಕ್ಕೆ ತೆರಳುವರು. ಒಂದೊಮ್ಮೆ ವೈಭವ್ ಪಾಲಕರು ಇಂಗ್ಲೆಂಡ್ ಮತ್ತು ಐರ್ಲೆಂಡ್‌ಗೆ ಹೋಗಲು ಇಚ್ಛಿಸಿದರೆ ಪ್ರಯಾಣದ ವ್ಯವಸ್ಥೆ ಮಾಡಲಾಗುವುದು. ವೈಭವ್‌ಗೆ ಪಾಲಕರೇ ಅತ್ಯುತ್ತಮ ಬೆಂಬಲಿಗರು’ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಾರ್ಯದರ್ಶಿ ದೇವಜೀತ್ ಸೈಕಿಯಾ ತಿಳಿಸಿದ್ದಾರೆ.

ಭಾರತ ತಂಡವು ಜೂನ್ 26 ಮತ್ತು 28ರಂದು ಐರ್ಲೆಂಡ್‌ನಲ್ಲಿ ಎರಡು ಪಂದ್ಯಗಳನ್ನು ಆಡಲಿದೆ. ಜುಲೈ 1ರಿಂದ ಇಂಗ್ಲೆಂಡ್ ಎದುರಿನ ಐದು ಪಂದ್ಯಗಳ ಸರಣಿ ನಡೆಯಲಿದೆ.

ನಾಯಕಿಯರು ಸಜ್ಜು



ಎಎಫ್‌ಪಿ ಚಿತ್ರ

ಇದೇ 12ರಂದು ಆರಂಭವಾಗುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಪಾಲ್ಗೊಳ್ಳುವ 12 ತಂಡಗಳ ನಾಯಕಿಯರು ಲಂಡನ್‌ನಲ್ಲಿ ಭಾನುವಾರ ನಡೆದ ‘ದಿ ಕ್ಯಾಪ್ಟನ್ಸ್ ಕಾರ್ನಿವಲ್’ ಕಾರ್ಯಕ್ರಮದಲ್ಲಿ ಟ್ರೋಫಿಯೊಂದಿಗೆ ಕಾಣಿಸಿಕೊಂಡರು. (ಎಡದಿಂದ) ಸ್ಕಾಟ್ಲೆಂಡ್‌ನ ಕ್ಯಾಥರಿನ್ ಬ್ರೈಸ್, ಐರ್ಲೆಂಡ್‌ನ ಗ್ಯಾಬಿ ಲೂಯಿಸ್, ದಕ್ಷಿಣ ಆಫ್ರಿಕಾದ ಲಾರಾ ವೋಲ್ವಾರ್ಟ್, ನೆದರ್ಲೆಂಡ್ಸ್‌ನ ಬಾಬೆಟ್ ಡಿ ಲೀಡ್, ವೆಸ್ಟ್ ಇಂಡೀಸ್‌ನ ಹೇಲಿ ಮ್ಯಾಥ್ಯೂಸ್, ಇಂಗ್ಲೆಂಡ್‌ನ ನ್ಯಾಟ್ ಶಿವರ್ ಬ್ರಂಟ್, ನ್ಯೂಜಿಲೆಂಡ್‌ನ ಅಮೆಲಿಯಾ ಕೆರ್, ಪಾಕಿಸ್ತಾನದ ಫಾತಿಮಾ ಸನಾ, ಬಾಂಗ್ಲಾದೇಶದ ನಿಗರ್ ಸುಲ್ತಾನಾ, ಆಸ್ಟ್ರೇಲಿಯಾದ ಸೋಫಿ ಮಾಲಿನೆ, ಶ್ರೀಲಂಕಾದ ಚಾಮರಿ ಅಟಪಟ್ಟು ಮತ್ತು ಭಾರತದ ಹರ್ಮನ್‌ಪ್ರೀತ್ ಕೌರ್ ಚಿತ್ರದಲ್ಲಿದ್ದಾರೆ

ವಿಶ್ವ ಯೋಗಾಸನ ಚಾಂಪಿಯನ್‌ಷಿಪ್: ಭಾರತದ ಪದಕ ಬೇಟೆ ಮುಂದುವರಿಕೆ
ರಿಶಾ ಶೆಟ್ಟಿಗೆ ‘ಚಿನ್ನ ಡಬಲ್’ ಯೋಗ

• ಬಾಲರಾಜ್ ಎಸ್.

ಅಹಮದಾಬಾದ್: ಬೆಂಗಳೂರಿನ ಉದಯೋನ್ಮುಖ ಯೋಗಪಟು ರಿಶಾ ಬಿ. ಶೆಟ್ಟಿ ಇಲ್ಲಿ ನಡೆಯುತ್ತಿರುವ ವಿಶ್ವ ಯೋಗಾಸನ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ‘ಚಿನ್ನ ಡಬಲ್’ ಸಾಧನೆ ಮಾಡಿದರು. ಆತಿಥೇಯ ಭಾರತದ ಸ್ಪರ್ಧಿಗಳು ಪದಕ ಬೇಟೆಯನ್ನು 50ರ (40 ಸ್ವರ್ಣ ಸೇರಿ) ಗಡಿ ಮುಟ್ಟಿಸಿದರು.

‘ಬ್ಯಾಕ್ ಬೆಂಡಿಂಗ್’ ಸ್ಪರ್ಧೆಯ ಸಬ್ ಜೂನಿಯರ್ ಬಾಲಕಿಯರ (10 ರಿಂದ 14 ವರ್ಷ) ವಿಭಾಗದಲ್ಲಿ ಕಣಕ್ಕಿಳಿದಿದ್ದ 13 ವರ್ಷ ವಯಸ್ಸಿನ ರಿಶಾ 46.75 ಸ್ಕೋರ್‌ನೊಡನೆ ವಿಶ್ವ ಚಾಂಪಿಯನ್ ಆದರು. ಒಮಾನ್‌ನ ಯಶ್ವಿ ಬಬಾರಿಯಾ (43.39) ಹಾಗೂ ನೇಪಾಳದ ಸೋನಂ ವಾಂಗ್‌ಮೊ ತಮಂಗ್ (40.38) ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕ ಗೆದ್ದರು.

ರಿಶಿ ಅವರು ಇದೇ ವಯೋಮಾನದವರ ಕಲಾತ್ಮಕ ಯೋಗಾಸನ (ಗುಂಪು) ಸ್ಪರ್ಧೆಯಲ್ಲಿಯೂ ಕೌಶಲ ಮೆರೆದು ಎರಡನೇ ಚಿನ್ನಕ್ಕೆ ಮುತ್ತಿಕ್ಕಿದರು.

ಚೊಚ್ಚಲ ಬಾರಿಗೆ ನಡೆಯುತ್ತಿರುವ ಈ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದ್ದ ಕರ್ನಾಟಕದ ಏಕೈಕ ಯೋಗಪಟು ರಿಶಾ. ರಾಘವೇಂದ್ರ ಎಂ. ಶೆಟ್ಟಿ ಹಾಗೂ ಮಲ್ಲಿಕಾ ಆರ್. ಶೆಟ್ಟಿ ದಂಪತಿಯ ಪುತ್ರಿಯಾಗಿರುವ ಈಕೆ ಪ್ರಸ್ತುತ ನೆಲಗದರನಹಳ್ಳಿಯ ಎಸ್‌ಎಸ್‌ಎಂ ಪಬ್ಲಿಕ್ ಶಾಲೆಯಲ್ಲಿ ಏಳನೇ ತರಗತಿ ಓದುತ್ತಿದ್ದಾರೆ. ದೀಪಕ್ ಅವರ ಮಾರ್ಗದರ್ಶನದಲ್ಲಿ ಯೋಗಾಭ್ಯಾಸ ಮಾಡುತ್ತಿದ್ದಾರೆ.

ಈ ಸಾಧನೆಯೊಂದಿಗೆ ರಿಶಾ ಅವರು ಏಷ್ಯನ್ ಗೇಮ್ಸ್‌ಗೂ ಅರ್ಹತೆ ಪಡೆದುಕೊಂಡರು. ಅಲ್ಲಿಯೂ ಸ್ವರ್ಣ ಗೆಲ್ಲುವ ವಿಶ್ವಾಸ ವ್ಯಕ್ತಪಡಿಸಿದರು.

‘ರಿಶಾ ಅವರು ಕಲಾತ್ಮಕ ಹಾಗೂ ಬ್ಯಾಕ್‌ಬೆಂಡಿಂಗ್ ಯೋಗಾಸನಗಳನ್ನು ನಿರಾಯಾಸವಾಗಿ ಮಾಡುತ್ತಿದ್ದರು. ಅವರ ಪ್ರತಿಭೆಯನ್ನು ಗುರುತಿಸಿ, ಮತ್ತಷ್ಟು ಪರಿಣತಿ ಸಾಧಿಸಲು ನಿರಂತರ ತರಬೇತಿ ನೀಡಿದೆವು. ಕಳೆದೊಂದು ತಿಂಗಳಿನಿಂದ, ಭಾರತೀಯ ಕ್ರೀಡಾ ಪ್ರಾಧಿಕಾರದ (ಎಸ್‌ಎಐ) ವತಿಯಿಂದ ಅಹಮದಾಬಾದ್‌ನಲ್ಲಿಯೇ ತರಬೇತಿ ನೀಡಲಾಗಿತ್ತು’ ಎಂದು ಕೋಚ್ ದೀಪಕ್ ತಿಳಿಸಿದರು.

ಹೀನಾಗೆ ಚಿನ್ನ: ಭುಜ್ ಮೂಲದ ‘ಮಾಡೆಲ್’ ಹೀನಾ ರಾಜಗೋರ್ ಅವರು ಸೀನಿಯರ್ ಬಿ ಮಹಿಳೆಯರ (35 –45 ವರ್ಷ) ‘ಫಾರ್ವರ್ಡ್ ಬೆಂಡ್’ ಸ್ಪರ್ಧೆಯಲ್ಲಿ 43.50 ಸ್ಕೋರ್ ಗಳಿಸಿ ಚಿನ್ನಕ್ಕೆ ಮುತ್ತಿಕ್ಕಿದರು. ಒಮಾನ್‌ನ ಪ್ರೀತಿ ಜೈಮಾನಿ (38.15) ಬೆಳ್ಳಿ ಪದಕ ಗೆದ್ದರೆ, ರಷ್ಯಾದ ಸ್ವೆಟ್ಲಾನಾ ಲುಕಾಶೋವಾ ಮತ್ತು ಜೋರ್ಡನ್‌ನ ಮಾಯಾ ಅಲ್ ಅಲೋಸ್ಥಾತ್ (ತಲಾ 36.96) ಕಂಚಿನ ಪದಕಗಳನ್ನು ಹಂಚಿಕೊಂಡರು.

ಭಾರತವು ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ಕಾಯ್ದುಕೊಂಡರೆ, ಜಪಾನ್ (3 ಚಿನ್ನ ಸೇರಿ 10 ಪದಕ) ಎರಡನೇ ಸ್ಥಾನದಲ್ಲಿದೆ. ಸಿಂಗಪುರ (2 ಚಿನ್ನ ಸೇರಿ 6 ಪದಕ) ಮೂರನೇ ಸ್ಥಾನದಲ್ಲಿದೆ.



ಚಿನ್ನದ ಪದಕ ಗೆದ್ದ ರಿಶಾ ಆರ್. ಶೆಟ್ಟಿ ಚಿತ್ರ: ‘ಸಾಯ್’

ಪ್ರೇಕ್ಷಕರ ಗಮನ ಸೆಳೆದ ‘ಜೈ ಭಜರಂಗಿ’

ಸೀನಿಯರ್ ಪುರುಷರ ‘ಲಯಬದ್ಧ ಜೋಡಿ ಯೋಗಾಸನ ಸ್ಪರ್ಧೆ’ಯಲ್ಲಿ (ರಿದಮಿಕ್ ಪೇರ್) ಭಜರಂಗಿ ಚಿತ್ರದ ‘ಜೈ ಭಜರಂಗಿ’ ಗೀತೆ ಬಳಸಿಕೊಂಡ ಭಾರತದ ಅಭಯ್ ಮಿಶ್ರಾ– ಅರ್ಜುನ್ ಅವರು ಮೈನವಿರೇಳಿಸುವಂತಹ ಪ್ರದರ್ಶನ ನೀಡಿದರು. ಸಾಹಿತ್ಯ– ಸಂಗೀತಕ್ಕೆ ತಕ್ಕಂತೆ ಯೋಗಪಟ್ಟುಗಳನ್ನು ಪ್ರದರ್ಶಿಸಿ, ಚಿನ್ನದ ಪದಕಕ್ಕೆ ಕೊರಳೊಡ್ಡಿದರು.

ಚಂಡೀಗಢದ ಅಭಯ್ ಹಾಗೂ ಹರಿಯಾಣದ ಅರ್ಜುನ್ ಅವರು ಕನ್ನಡ ಗೀತೆ ಆಯ್ಕೆ ಮಾಡಿಕೊಂಡಿದ್ದು ವಿಶೇಷವಾಗಿತ್ತು. ಈ ಬಗ್ಗೆ ‘ಪ್ರಜಾವಾಣಿ’ ಜೊತೆಗೆ ಮಾತನಾಡಿದ ಅಭಯ್, ‘ಭಜರಂಗಿ ಗೀತೆ ಭಾಷೆಯನ್ನೂ ಮೀರಿ ಎಲ್ಲರಿಗೂ ರೋಮಾಂಚಕ ಅನುಭವ ನೀಡುತ್ತದೆ. ಹೀಗಾಗಿ, ಅದನ್ನೇ ಆಯ್ಕೆ ಮಾಡಿಕೊಳ್ಳಲು ನಿರ್ಧರಿಸಿದೆವು’ ಎಂದರು.